ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 23 ಸೋಮವಾರ 2026

ಸಂಪುಟ: 46 | ಸಂಚಿಕೆ: 331 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗ: news@mysurumithra.com

ಜಾಹೀರಾತು: ad@mysurumithra.com, *website: www.mysurumithra.com*



'ನಾನೂ ಕಾಫಿರ–ಬಾಬಾ ಸಾಹೇಬರ ಹಿಂದುತ್ವ ಕಥನ'

ಕೃತಿ ಲೋಕಾರ್ಪಣೆ



ಮೈಸೂರಿನ ಸ್ಕ್ಯಾನ್ ರೇ ಸಭಾಂಗಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸಹಿತಂ ಪ್ರಕಾರ ಹಾಗೂ ಸ್ವರಾಷ್ಟ್ರ ಪ್ರಕಾಶನ ಸಹಯೋಗದಲ್ಲಿ ಭಾನುವಾರ 'ನಾನೂ ಕಾಫಿರ–ಬಾಬಾ ಸಾಹೇಬರ ಹಿಂದುತ್ವ ಕಥನ' ಪುಸ್ತಕ ಲೋಕಾರ್ಪಣೆಗೊಂಡಿತ್ತು.

ಮೈಸೂರು, ಮಾ.22(ಜಿಎ)–ಜಗತ್ತಿನ ಎಲ್ಲಾ ಧರ್ಮಗಳು ಶಾಂತಿಯನ್ನೇ ಬಯಸುತ್ತವೆ. ಯಾವ ಧರ್ಮವೂ ಕೂಡ ಇನ್ನೊಬ್ಬರ ಮೇಲೆ ಆಕ್ರಮಣ ಮಾಡು ಎಂದು ಹೇಳಿಲ್ಲ. ನಾವು ಅದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದು ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರ ನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಸ್ಕ್ಯಾನ್ ರೇ ಸಭಾಂಗಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸಹಿತಂ ಪ್ರಕಾರ ಹಾಗೂ ಸ್ವರಾಷ್ಟ್ರ ಪ್ರಕಾಶನ ಸಹಯೋಗದಲ್ಲಿ ಭಾನುವಾರ ಏರ್ಪಡಿಸಿದ್ದ 'ನಾನೂ ಕಾಫಿರ–ಬಾಬಾ ಸಾಹೇಬರ ಹಿಂದುತ್ವ ಕಥನ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲಿ ಎಲ್ಲಿಯಾದರೂ ಒಳ್ಳೆಯ ಸಂವಿಧಾನ ಅಂತ ಇದ್ದರೆ ಅದು ನಮ್ಮ ಭಾರತದ ಸಂವಿಧಾನ. ಅಂಬೇಡ್ಕರ್ ಅವರು ದೇಶದ ಪ್ರತಿಯೊಬ್ಬರೂ, ಎಲ್ಲಾ ಧರ್ಮದ ಜನರು ಕೂಡ ಹೇಗೆ ಜೀವಿಸಬೇಕು, ಪ್ರತಿಯೊಬ್ಬರಿಗೂ ಏನು ಹೇಳಬೇಕು, ಎಲ್ಲವನ್ನೂ ಕೂಡ ಸರಳವಾದ ರೀತಿಯಲ್ಲಿ ಬೋಧಿಸಿದ್ದಾರೆ. ತನ್ಮೂಲಕ ಸಂವಿಧಾನವನ್ನು ನಮ್ಮ ಕೈಗೆ ತಂದು ಕೊಟ್ಟಿದ್ದಾರೆ. ನಾವು ಅದನ್ನು ಅರ್ಥ ಮಾಡಿಕೊಂಡು ಒಟ್ಟಿಗೆ ಕುಟುಂಬದ ಸದಸ್ಯರಂತೆ ಬಾಳಬೇಕಾಗಿದೆ. ಹಾಗೇ ಬಾಳಬೇಕಾದರೆ ಅಂಬೇಡ್ಕರ್ ಅವರು ಕೊಟ್ಟಿರುವಂತಹ ತತ್ವಗಳನ್ನು ನಾವು ಓದಬೇಕು. ಅನುಭವ ಮಾಡಿಕೊಳ್ಳಬೇಕು ಹಾಗೂ ತಿಳುವಳಿಕೆ ಮೂಡಿಸಿಕೊಳ್ಳಬೇಕು ಎಂದರು.

ವಿಶ್ವದ ಪೂರ್ವ ಭಾಗದಲ್ಲಿ ಅಸ್ಥಿರತೆ, ಮಧ್ಯ ಪ್ರಾಚ್ಯದಲ್ಲಿ ಇವತ್ತು ಇರುವುದು ಅಸ್ಥಿರತೆ. ಹಾಗೆ, ಪಶ್ಚಿಮ ದೇಶಗಳಲ್ಲಿ ಎಲ್ಲಾ ಕಡೆ ಅಸ್ಥಿರತೆ. ಇವರೆಲ್ಲವನ್ನೂ ನೋಡಿದರೆ ನಮ್ಮ ಭಾರತದಲ್ಲಿ ಮಾತ್ರ ಶಾಂತವಾಗಿದೆ. ಇವತ್ತು ಆಲೋಚಿಸುವ, ಚಿಂತಿಸುವಂತಹ ಕಾಲದಲ್ಲಿ ನಾವು ಇದ್ದೂ, ಸಮಾಧಾನವಾಗಿ, ಶಾಂತವಾಗಿ ಜೀವನ ನಡೆಸಬೇಕು. ಕವಿಗಳು ಹೇಳಿರುವಂತೆ ಸರ್ವ ಜನಾಂಗದ ಶಾಂತಿಯ ತೋಟದಂತೆ, ವೇದದಲ್ಲಿ ಹೇಳಿರುವಂತೆ ಈ ಜಗತ್ತಿಗೆ ತುಂಬಾ ಮಧುರವಾಗಿ ಇರಬೇಕು ಎಂದು ತಿಳಿಸಿದರು.

ಪುಸ್ತಕವನ್ನು ಲೋಕಾರ್ಪಣೆ ಮಾಡಿದ ಕಾದಂಬರಿಕಾರ್ತಿ ಸಹನಾ ವಿಜಯ ಕುಮಾರ್ ಮಾತನಾಡಿ, ಅಂಬೇಡ್ಕರ್ ಅವರನ್ನು ಕುರಿತು ಪ್ರಾದೇಶಿಕ ಭಾಷೆಗಳಲ್ಲಿ ಬರೆಯುವಾಗ ಅಥವಾ ಕೃತಿಗಳನ್ನು ಅನುವಾದ ಮಾಡುವಾಗ ಪೂರ್ಣ ಭಾಗವನ್ನು ಯಥಾವತ್ತಾಗಿ ಮಾಡಬೇಕು ಎಂದು ಸಲಹೆಯನ್ನು ನೀಡಿದರು.

ಮಹನೀಯರ ಕೃತಿಗಳನ್ನು ಪ್ರಾದೇಶಿಕ ಭಾಷೆಗೆ ಅನುವಾದ ಮಾಡುವಾಗ ಈಗಿನ ಚಳವಳಿಗಳಿಗೆ ಅನುಕೂಲ ಮಾಡುವುದು, ಸಂದರ್ಭದ ಅನುಕೂಲಕ್ಕೆ ಉಳಿಸುವುದು ಬಹಳ ಜಾಸ್ತಿ ಆದ್ದರಿಂದ ಬಾಬಾ ಸಾಹೇಬರ ಕೃತಿಗಳನ್ನು ಈ ತರಹದ ಯಾವ ದಾಕ್ಷಿಣ್ಯಕ್ಕೂ ಒಳಗಾಗದೇ ಇದ್ದದ್ದನ್ನು ಇದ್ದಂತೆ ಅನುವಾದ ಮಾಡಬೇಕು. ಏಕೆಂದರೆ ಬುದ್ಧನು ಬಿಕ್ಕುಣಿಯ ಸಂಘವನ್ನು ಆರಂಭಿಸಿದ ಸಂದರ್ಭದಲ್ಲಿ ಈ ಸಂಘವು ಸಾವಿರ ವರ್ಷ ಇರುತ್ತದೆ ಎಂದು ತಿಳಿದುಕೊಂಡಿದ್ದೇ, ಆದರೆ ಐನೂರು ವರ್ಷಕ್ಕೆ ಮಾತ್ರ ಇರುತದೆ ಎಂದು ಹೇಳುತ್ತಾರೆ. ಆದರೆ ಇದನ್ನು ಅನುವಾದ ಮಾಡಿರುವ ಕೃತಿಯಲ್ಲಿ ಬಿಕ್ಕುಣಿ ಸಂಘವನ್ನು ತಗೆದು ಹಾಕಿ, ಐನೂರು ವರ್ಷ ಇರಲಿದೆ ಎನ್ನುವುದನ್ನು ಮಾತ್ರ ಪ್ರಕಟಿಸಲಾಗಿದೆ. ಇಂತಹ ಪ್ರಾಯೋಗಿಕ ಸಮಸ್ಯೆಗಳು ಬಾರದಂತೆ ಎಚ್ಚರ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಕರ್ನಾಟಕ ದಕ್ಷಿಣ ಪ್ರಾಂತ್ಯದ ನಿಕಟ ಪೂರ್ವ ಸಂಚಾಲಕ ಮಾ.ವೆಂಕಟರಾಮ್, ಕೃತಿಕಾರ ಡಾ.ಸುಧಾಕರ್ ಹೊಸಳ್ಳಿ, ಅನುಪಮಾ, ದಿವ್ಯಾ ಮತ್ತಿತರರು ಉಪಸ್ಥಿತರಿದ್ದರು.

ಏ.3ರಿಂದ ಜೆಎಸ್‌ಎಸ್ ಚಿತ್ರಕಲಾ ಶಿಬಿರ



ಮೈಸೂರು, ಮಾ. 22–ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಶಿಬಿರವನ್ನು ಏ.3ರಿಂದ 25ರವರೆಗೆ ಮೈಸೂರಿನ ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ.

6ರಿಂದ 9 ವರ್ಷ, 10ರಿಂದ 13 ವರ್ಷ ಮತ್ತು 14ರಿಂದ 17 ವರ್ಷ ವಯಸ್ಸಿನ ಮಕ್ಕಳನ್ನು ಮೂರು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ ಪ್ರತಿ ವಿಭಾಗದಲ್ಲೂ 30 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಶಿಬಿರದಲ್ಲಿ ನುರಿತ ಕಲಾವಿದರಿಂದ ಪ್ರಾತ್ಯಕ್ಷಿಕೆಯನ್ನು ಹಾಗೂ ನಿಸರ್ಗ ಚಿತ್ರ ರಚಿಸಲು ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಗುವುದು.

ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಡ್ರಾಯಿಂಗ್ ಪೇಪರ್ ನೀಡಲಾಗುವುದು. ಪ್ರತಿದಿನ ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ತರಗತಿಗಳು ನಡೆಯಲಿದ್ದು, 11ರಿಂದ 11.30ರವರೆಗೆ ಬಿಡುವು ಕೊಡಲಾಗುವುದು. ದಿನಾಂಕ 25.4.2026 ರಂದು ಮಕ್ಕಳು ರಚಿಸಿದ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗುವುದು. ಪ್ರತಿ ವಿಭಾಗದಲ್ಲೂ ಉತ್ತಮ ಚಿತ್ರಗಳಿಗೆ ಮೂರು ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರ ನೀಡಲಾಗುವುದು.

ಅರ್ಜಿಗಳನ್ನು ಜೆಎಸ್‌ಎಸ್ ಬಾಲಜಗತ್ ಶಾಲೆ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ರಾಮಾನುಜ ರಸ್ತೆ, ಮೈಸೂರು ಇಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು 1.4.2026 ರೊಳಗೆ ಕಚೇರಿಗೆ ತಲುಪಿಸುವುದು. ಹೆಚ್ಚಿನ ಮಾಹಿತಿಗಾಗಿ ಪಿ.ಎಸ್. ಸಲಬಣ್ಣನವರ್ (80954 40122), ಡಿ.ಎಸ್. ನಾಗರಾಜಪ್ಪ (86185 86998), ಚಾಮರಾಜಪ್ಪ (96866 77503) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಮಹಾರಾಜ ಕಾಲೇಜು ನೂತನ ಪ್ರಾಂಶುಪಾಲ



ಮೈಸೂರು ಮಹಾರಾಜ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಡಾ.ವಿ.ಷಣ್ಮುಗಂ ಅವರನ್ನು ಅಶೋಕಪುರಂ ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು. ಈ ವೇಳೆ ಸಾಹಿತಿ ಸಿದ್ದಸ್ವಾಮಿ, ಸಿ.ಶಿವಣ್ಣ, ಮಲೆಯೂರು ಸೋಮಯ್ಯ, ರಾಜಣ್ಣ, ಪುಟ್ಟರಾಜು, ದೀಪು ಮತ್ತಿತರರಿದ್ದರು.

ನಿಧನ



ಜಗದಾಂಬ

ಮೈಸೂರು, ಮಾ.22– ಮೈಸೂರಿನ ಹಿರಿಯ ವಕೀಲ ದಿವಂಗತ ವೀರಪ್ಪಾಜಿ ಅವರ ಪತ್ನಿ ಜಗದಾಂಬ (85) ಭಾನುವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ದೇವರಾಜ ಮೊಹಲ್ಲಾ ಕೃಷ್ಣ ವಿಲಾಸ ರಸ್ತೆಯ ನಿವಾಸಿಯಾದ ದಿವಂಗತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸೋಮವಾರ ಬೆಳಗ್ಗೆ 10.30ಕ್ಕೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಾನ್ ಜೇವಿಯರ್ ಪೀಟರ್



ಮೈಸೂರು, ಮಾ.22– ಮೈಸೂರಿನ ಬೋಗಾದಿಯ ಬಾಬೂಜಿ ಬಡಾವಣೆಯ ನಿವಾಸಿ ಜಾನ್ ಜೇವಿಯರ್ ಪೀಟರ್ (81) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 3 ಗಂಟೆಗೆ ಬೋಗಾದಿಯಲ್ಲಿರುವ ಪೀಟರ್ ಚರ್ಚ್ ಆವರಣದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಿಳೆಯರಿಲ್ಲದೆ ಪುರುಷ ಸಮಾಜವಿಲ್ಲ: ಹರೀಶ್‌ಗೌಡ

ವಿಶ್ವಕರ್ಮ ಯುವ ಜಾಗೃತಿ ವೇದಿಕೆಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ರೋಟರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಸಾಧಕಿಯರನ್ನು ಅಭಿನಂದಿಲಾಯಿತು.

ಮೈಸೂರು, ಮಾ.22(ಜಿಎ)–ಭಾರತ ಪುರುಷ ಪ್ರಧಾನ ಸಮಾಜವಾದರೂ, ಮಹಿಳೆಯರಿಲ್ಲದೇ ಪುರುಷ ಸಮಾಜವಿಲ್ಲ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಪ್ರತಿಯೊಬ್ಬ ಮಹಿಳೆಯಲ್ಲೂ ತಮ್ಮದೇ ಆದ ಪ್ರತಿಭೆ, ಕೌಶಲ್ಯಗಳಿವೆ. ಅವುಗಳಿಗೆ ಒತ್ತು ನೀಡಬೇಕು. ಕಲ್ಪನ ಚಾವ್ಲಾ, ಸುನಿತಾ ವಿಲಿಯಮ್ಸ್ ಅವರಿಗೆ ಮಾತ್ರ ಬಾಹ್ಯಾಕಾಶಯಾನ ಸೀಮಿತವಾಗಬಾರದು. ಸಾವಿರಾರು ಮಹಿಳೆಯರು ತಲುಪುವಂತಾಗಬೇಕು ಎಂದರು.

ವಿದ್ಯಾರ್ಥಿನಿಯರಿಗೆ ಶಿಕ್ಷಣವನ್ನು ನೀಡುವ, ಸವಲತ್ತು ನೀಡುವ ಕೆಲಸವಾಗಬೇಕು. ಈಗ ಮೈಸೂರು ಶಿಕ್ಷಣದ ಕ್ಷೇತ್ರವಾಗಿ ಹೆಸರಾಗಿದೆ. ಲಕ್ಷಾಂತರ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಹಾಗಾಗಿ ವಿದ್ಯಾರ್ಥಿನಿಯರ ನಿಲಯಗಳು ಹೆಚ್ಚು ನಿರ್ಮಾಣವಾಗಬೇಕಿದ್ದು, ಮಹಾರಾಣಿ ಕಾಲೇಜಿನಲ್ಲಿ 14 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, 320 ವಿದ್ಯಾರ್ಥಿನಿಯರಿಗೆ ಮಾತ್ರ ವಿದ್ಯಾರ್ಥಿನಿಯರ ನಿಲಯದ ಸವಲತ್ತು ದೊರೆಯುತಿತ್ತು. ಇದೀಗ 120 ಕೋಟಿ ಅನುದಾನ ತಂದು 3600 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯದ ಅವಕಾಶ ಕಲ್ಪಿಸಿಕೊಡಲಾಗಿದ್ದು, ಗ್ರಾಮೀಣ ಭಾಗದ ಹೆಣ್ಣು ಮಕ್ಕಳನ್ನು ಮುನ್ನೆಲೆಗೆ ತರುವ ಕೆಲಸವಾಗಬೇಕಿದೆ ಎಂದರು.

ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಅನೇಕ ಯೋಜನೆ, ಗ್ಯಾರಂಟಿ ನೀಡುತ್ತಿದೆ. ಇದರಿಂದ ಅವರ ಬದುಕು ಸುಧಾರಿಸುತ್ತದೆ. ಪುರುಷರು ಮುಂದಾಳತ್ವ ವಹಿಸಿ, ಮಹಿಳಾ ದಿನಾಚರಣೆ ಜತೆಗೆ ಸಾಧಕ ಮಹಿಳೆಯರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಮಾಜದ ನಿಜವಾದ ಬದಲಾವಣೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> "ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ತಮ್ಮ ಛಾಪು ಮೂಡಿಸುತ್ತಿದ್ದು, ಒಂದು ಸಮಾಜ, ದೇಶ ಅಭಿವೃದ್ಧಿಯಾಗಬೇಕಾದರೆ, ಮಹಿಳೆಯರು ಮುಂದೆ ಬರಬೇಕು. ಮಹಿಳೆಯರು ಸಬಲರಾಗಬೇಕಿದ್ದು, ಇಂದಿನ ಸಮಾಜದಲ್ಲಿ ಹೆಚ್ಚಿನ ಮಹಿಳೆಯರು ಸಬಲರಾಗಿದ್ದಾರೆ.
> –ಕೆ.ಹರೀಶ್‌ಗೌಡ, ಶಾಸಕ

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಒಟ್ಟು 25 ಮಹಿಳೆಯರನ್ನು ಅಭಿನಂದಿಲಾಯಿತು. ಈ ವೇಳೆ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷೆ ಡಾ.ಪವಿತ್ರ ಪ್ರಭಾಕರ್ ರೆಡ್ಡಿ, ಸಮಾಜ ಸೇವಕಿ ನೀಲಾ, ಪಾಲಿಕೆ ಸದಸ್ಯ ರಮೇಶ್(ರಮಣಿ), ಉದ್ಯಮಿ ನಾರಾಯಣ್, ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ, ಉಪಾಧ್ಯಕ್ಷ ಸತೀಶ್ ಆಯರಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಮಾರ್ಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಶಾಸಕ ಜಿ.ಟಿ.ದೇವೇಗೌಡರಿಗೆ ಸನ್ಮಾನ...



ಮಾರ್ಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ ಮಾಂತಪ್ಪ, ಉಪಾಧ್ಯಕ್ಷೆ ಮಣಿಯಮ್ಮ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಈ ವೇಳೆ ಸಂಘದ ನಿರ್ದೇಶಕರಾದ ಸೋಮಣ್ಣ, ಗೋವಿಂದನಾಯಕ, ಮರಿಸ್ವಾಮಿ ನಾಯಕ, ಶಿವರಾಜ್, ಪುಟ್ಟಸ್ವಾಮಿ, ಮಹದೇವಸ್ವಾಮಿ, ವೀರಶೈವ ಮುಖಂಡರಾದ ಎಂ.ವಿ.ಸುರೇಶ, ವೆಂಕಟಪ್ಪ, ಗುರುಸ್ವಾಮಿ, ನಾಯಕ ಸಮಾಜದ ಮುಖಂಡರಾದ ಗೋವಿಂದ ನಾಯಕ, ವೆಂಕಟೇಶ್, ಮುಖಂಡರಾದ ಪರಮೇಶ್, ಕೃಷ್ಣ, ಕಾಟೂರು ಗ್ರಾಮದ ಸಿದ್ದರಾಜು, ಪಾಟೀಲ್ ಸಣ್ಣಪ್ಪ, ಜವರ ನಾಯಕ, ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಾಯಿ ಸ್ನೇಹ ಸಂಗಮದಲ್ಲಿ ಪಾಠ ಕಲಿಸಿದ ಶಿಕ್ಷಕರ ಸನ್ಮಾನಿಸಿದ ಹಳೆಯ ವಿದ್ಯಾರ್ಥಿಗಳು




ಶ್ರೀ ಸತ್ಯಸಾಯಿ ಬಾಬಾ ಪ್ರಾಥಮಿಕ ಶಾಲೆಯಲ್ಲಿ 'ಸಾಯಿ ಸ್ನೇಹ ಸಂಗಮ' ಅಭಿನಂದನಾ ಸಮಾರಂಭ ನಡೆಯಿತು.

ಮೈಸೂರು, ಮಾ.22(ಎಂಕೆ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ಸತ್ಯ ಸಾಯಿ ಬಾಬಾ ಪ್ರಾಥಮಿಕ ಶಾಲೆ ಸಭಾಂಗಣದಲ್ಲಿ 'ಸಾಯಿ ಸ್ನೇಹ ಸಂಗಮ' ಅಭಿನಂದನಾ ಸಮಾರಂಭ ನಡೆಯಿತು.

1996ರಿಂದ 2004ರವರೆಗಿನ ಹಳೆಯ ವಿದ್ಯಾರ್ಥಿಗಳು ತಮಗೆ ಶಿಕ್ಷಣ ನೀಡಿದ ನಿವೃತ್ತ ಶಿಕ್ಷಕರಾದ ಸಾವಿತ್ರಮ್ಮ, ಪಿ.ಸರೋಜಮ್ಮ, ಮಹಾದೇವಮ್ಮ, ಕಮಲಮ್ಮ ಸುಪ್ರಭಾ ಹಾಗೂ ಶಿವಮೂರ್ತಿ ಅವರನ್ನು ಸನ್ಮಾನಿಸಿದರು. ಬಳಿಕ ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಶಿಕ್ಷಕರು, ಕಲಿಸಿದವರನ್ನು ಮರೆಯದೆ ಒಂದೆಡೆ ಸೇರಿಸಿ ಗೌರವ ಸಲ್ಲಿಸಿದಕ್ಕೆ ಶ್ಲಾಘನೆ ವ್ಯಕ್ತಪಡಿಸಿದರಲ್ಲದೆ, ನಿಮ್ಮ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳಿ. ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಪಾಠ ಮಾಡಿದ್ದಕ್ಕೆ ನೀವುಗಳು ತೋರಿದ ಪ್ರೀತಿ, ವಿಶ್ವಾಸ ಅಗಾಧವಾದುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಸತ್ಯ ಸಾಯಿ ಬಾಬಾ ಪಿಯು ಕಾಲೇಜಿನ ಪ್ರಾಂಶುಪಾಲ ತ್ರಿಮೂರ್ತಿ, ಹಳೆಯ ವಿದ್ಯಾರ್ಥಿಗಳಾದ ಆರ್.ಪ್ರಶಾಂತ್, ಡಾ.ಎಂ.ನಾಗೇಶ್, ಭವಾನಿ ಸಾಗರ, ಸುನೀಲಕುಮಾರ್, ಚೇತನಾ, ದೀಪಾ, ಡಾ.ಕೆ.ವಿ.ಕಿರಣ ಮತ್ತಿತರರಿದ್ದರು.

ಇಂದು ದೇವರ ದಾಸಿಮಯ್ಯ ಜಯಂತಿ ಆಚರಣೆ



ಮೈಸೂರು,ಮಾ.22(ಜಿಎ)–ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟ ಹಾಗೂ ಜಿಲ್ಲಾಡಳಿತದ ಸಹಯೋಗದಿಂದ ಮಾ.23ರಂದು ಕಲಾ ಮಂದಿರದಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಆಯೋಜಿಸಿದ್ದು, ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಒಕ್ಕೂಟದ ಗೌರವಾಧ್ಯಕ್ಷ ಆರ್.ಮೂರ್ತಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ರಾಜ್ಯಾಧ್ಯಕ್ಷ ಸೋಮಶೇಖರ್ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬಳಿಕ ಬೆಳಿಗ್ಗೆ 11ಕ್ಕೆ ಕಲಾಮಂದಿರದಲ್ಲಿ ಶಾಸಕ ಹರೀಶ್‌ಗೌಡ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ಆರಂಭವಾಗಲಿದೆ. ಸಂಸದ ಯದುವೀರ್ ಒಡೆಯರ್ ಉಪಸ್ಥಿತರಿರುವರು ಎಂದು ತಿಳಿಸಿದರು.

ಅಧ್ಯಕ್ಷ ಎಸ್.ದಿನೇಶ್ ಯಜಮಾನ್ ಮಾತನಾಡಿ, ಕಾರ್ಯಕ್ರಮದಲ್ಲಿ ನೇಕಾರ ಸಮುದಾಯದ ಸಾಧಕರು, ಪಿಎಚ್‌ಡಿ ಪಡೆದವರು, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದವರನ್ನು ಸನ್ಮಾನಿಸಲಾಗುವುದೆಂದರು. ಸುದ್ದಿಗೋಷ್ಠಿಯಲ್ಲಿ ಜಯಂತಿ ಸಮಿತಿ ಅಧ್ಯಕ್ಷ ಕೆ.ಎನ್.ಸುಬ್ರಹ್ಮಣ್ಯ, ಸುಬ್ಬರಾಯಶೆಟ್ಟಿ, ಮಂಜುಳಾ ಉಪಸ್ಥಿತರಿದ್ದರು.

ನಾಳೆ ಮಹಾಶರಣ ಮಾದಪ್ಪ ನಾಟಕ ಪ್ರದರ್ಶನ



ಮೈಸೂರು, ಮಾ.22(ಜಿಎ)–ಮೈಸೂರಿನ ನಾಲ್ವಡಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಟ್ರಸ್ಟ್ ಆಶ್ರಯದಲ್ಲಿ ಮಾ.24 ರಂದು ಸಂಜೆ 6.30ಕ್ಕೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಮಹಾಶರಣ ಮಾದಪ್ಪ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಬಿ.ಎಂ.ರಾಮಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸುವರು. ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಅಹಿಂದ ಜವರಪ್ಪ, ಶಿವಪ್ರಸಾದ್, ಡಾ.ಮೈಸೂರು ಗುರುರಾಜ್, ಟ್ರಸ್ಟ್ ಸಂಸ್ಥಾಪಕ ದಿನೇಶ್ ಚಮ್ಮಾಳಿಗೆ ವೇದಿಕೆಯಲ್ಲಿರುವರು ಎಂದರು.

ಮಲೆ ಮಹದೇಶ್ವರರ ಬಗ್ಗೆ ನಾಟಕ ರಚನೆ ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಸವಾಲಾಗಿ ಸ್ವೀಕರಿಸಿ ಈ ನಾಟಕ ಸಿದ್ಧಪಡಿಸಲಾಗಿದೆ. 40 ಮಂದಿ ಕಲಾವಿದರು ನಟಿಸಲಿದ್ದು, ಇದು ಸುಮಾರು ಎರಡು ಗಂಟೆಯ ಅವಧಿಯ ನಾಟಕವಾಗಿದೆ ಎಂದರು.

ನಾಟಕ ನಿರ್ದೇಶಕ ದಿನೇಶ್ ಚಮ್ಮಾಳಿಗೆ ಮಾತನಾಡಿ, ವಿವಿಧ ವೃತ್ತಿಯಲ್ಲಿರುವ ವಿವಿಧ ವಯೋಮಾನದವರು ಇದರಲ್ಲಿ ನಟಿಸುತ್ತಿದ್ದಾರೆ. ಅಂದಿನ ಕಾಲ ಘಟಕ್ಕೆ ಹೋಲುವ ರೀತಿಯ ವಸ್ತ್ರಾಲಂಕಾರ, ವೇಷ ಭೂಷಣಗಳು ಕಣ್ಮನ ಸೆಳೆಯುತ್ತವೆ. ಸಹಾಯ ಧನವಾಗಿ 150 ರೂ. ನಿಗದಿಪಡಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಡಾ.ಮೈಸೂರು ಗುರುರಾಜ್, ಸಿದ್ದುಪ್ರಸನ್ನ, ಕೃಷ್ಣಮೂರ್ತಿ ತಲಕಾಡು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.3.2026 ಸೋಮವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶೇಷಾದ್ರಿಪುರಂ ಶಿಕ್ಷಣ ದತ್ತಿ, ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ: ನೂತನ ಕಟ್ಟಡಗಳ ಉದ್ಘಾಟನೆ,** ಉದ್ಘಾಟನೆ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ದಿವ್ಯ ಸಾನಿಧ್ಯ: ಶ್ರೀ ರಾಮಕೃಷ್ಣ ಆಶ್ರಮ (ಮೈಸೂರು)ದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಸ್ಥಳ: ಕಡಕೊಳ ಕೈಗಾರಿಕಾ ಪ್ರದೇಶ, ಜಯಪುರ ಹೋಬಳಿ.

■ **ಮೈಸೂರು ವಿವಿ ತತ್ವಶಾಸ್ತ್ರ ಅಧ್ಯಯನ ವಿಭಾಗ, ಸ್ವಾಮಿ ವಿವೇಕಾನಂದ ಪೀಠ, ಮಾನಸ ಗಂಗೋತ್ರಿ:** 'ಸ್ವಾಮಿ ವಿವೇಕಾನಂದರ ಪತ್ರಗಳಲ್ಲಿ ಧರ್ಮ ದರ್ಶನ, ಯುವ ಜನತೆ ಮತ್ತು ರಾಷ್ಟ್ರೀಯ ಏಕತೆ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ಟಿ.ಭಾಷ್ಯಂ, ಸ್ಥಳ: ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ ಸಭಾಂಗಣ, ಬೆಳಗ್ಗೆ 10.30 ರಿಂದ.

■ **ದಿ ಆಕಾಡೆಮಿ ಟ್ರಸ್ಟ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಹಾಗೂ ಮೈಸೂರು ವಿವಿ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ:** ವಿಶೇಷ ಉಪನ್ಯಾಸ ಕಾರ್ಯಕ್ರಮ (ವಿಜ್ಞಾನ ಹರಟೆ) ವಿಷಯ: ಆರ್ಕಿಯೋಜುವಾಲಜಿ (ಪುರಾತತ್ವ ಪ್ರಾಣಿಶಾಸ್ತ್ರ) ಪುರಾತನ ಪ್ರಾಣಿಗಳು ಮತ್ತು ಆಧುನಿಕ ವಿಜ್ಞಾನ, ಉಪನ್ಯಾಸಕರು: ಐಐಟಿ, ಗಾಂಧಿನಗರ ಉಪನ್ಯಾಸಕ ಡಾ.ಶರದಾ.ಸಿ.ವಿ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಸ್ಥಳ: ಎ.ಆರ್.ರಾಜಶೇಖರ ಶೆಟ್ಟಿ ಸ್ಮಾರಕ ಸಭಾಂಗಣ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳು, ಶಾರದಾ ವಿಲಾಸ ಫಾರ್ಮಸಿ ಕಾಲೇಜು, ಹೆಚ್.ಹೆಚ್.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್:** ಸ್ವಸ್ಥ ಮೈಸೂರು–ಆರೋಗ್ಯವರ್ಧನೆ ಮತ್ತು ಜಾಗೃತಿ ಕಾರ್ಯಕ್ರಮ, ಉದ್ಘಾಟನೆ: ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಮುಖ್ಯ ಅತಿಥಿಗಳು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಸ್ವಸ್ಥ ಮೈಸೂರು ಬ್ರಾಂಡ್ ಅಂಬಾಸಿಡರ್ ಯೋಗಗುರು ಡಾ.ಭರತ್ ಶೆಟ್ಟಿ, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಎಸ್‌ವಿಸಿಪಿ ಬೆಳಗ್ಗೆ 11ಕ್ಕೆ.


■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ವಿರೇಶನಂದ ಸರಸ್ವತಿ ಮಹಾರಾಜ್, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 11 ಕ್ಕೆ.

■ **ಅನ್ನಪೂರ್ಣ ಐ ಹಾಸ್ಪಿಟಲ್ :** ಯುಗಾದಿ ಮತ್ತು ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ನೇಕಾರರ ಸಂಘ ಒಕ್ಕೂಟ, ಕರ್ನಾಟಕ ರಾಜ್ಯ ನೇಕಾರರ ಒಕ್ಕೂಟ:** ಶ್ರೀ ದೇವರ ದಾಸಿಮಯ್ಯ ಜಯಂತ್ಯೋತ್ಸವ–2026, ಬೆಳಗ್ಗೆ 9 ಗಂಟೆಗೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಉದ್ಘಾಟನೆ, ಉದ್ಘಾಟನೆ: ಚಲನಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್, ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ. ವಿಶೇಷ ಆಹ್ವಾನಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉದ್ಘಾಟನೆ: ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಏಳನೇ ರಾಮೋತ್ಸವ, ಸಂಜೆ 6 ರಿಂದ ಸ್ವರರಾಗ ಸಂಗೀತ ಕೇಂದ್ರದ ತಂಡದವರಿಂದ ದೇವರ ನಾಮಗಳು, ರಾತ್ರಿ 7 ರಿಂದ ಶ್ರೀ ಕೃಷ್ಣ ಸಂಧಾನ ಪ್ರಸಂಗ ಕುರಿತು ಗಮಕ ವಾಚನ, ವಾಚನ: ಶ್ರೀಮತಿ ಶುಭಾ ರಾಘವೇಂದ್ರ ವ್ಯಾಖ್ಯಾನ: ಶ್ರೀಕೃಷ್ಣ ಮಂಜುನಾಥ್, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ ಬ್ಲಾಕ್ ರಾಮಕೃಷ್ಣನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಉಷಾ ಐವಳ್ಳಿ ತೊದಲಬಾಗಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಆರ್.ಸುಧಾ, ಟಿ.ಎನ್.ಅಶ್ವಿನಿ. ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ವಿದ್ವಾಂಸರಾದ ತ.ಸು.ಶ್ಯಾಮರಾಯರೊಂದಿಗೆ ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ –ನಿತ್ಯಶ್ರೀ ಮಹದೇವನ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ** 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ–ವಿಶ್ವಕ್ಷಯ ರೋಗ ದಿನದ ಸಂದರ್ಭದಲ್ಲಿ ಕ್ಷಯ–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾರಿ ಡಾ.ಮಹಮದ್ ಸಿರಾಜ್ ಅಹಮದ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಧಾನಮಂತ್ರಿ ವಿಕಸಿತ್ ಭಾರತ್, ರೋಜ್‌ಗಾರ್ ಯೋಜನೆ ಕುರಿತು ಮಾತನಾಡುತ್ತಾರೆ ಪತ್ರಕರ್ತ ಬೀರೇಶ್ ಕಬಿನಿ. 1.20 ಭಾವಗೀತೆಗಳು, ಶಾಂತಲಾ ವಟ್ಟಂ, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಚ್.ಎಸ್.ಶ್ರೀಲಕ್ಷ್ಮಿ –ವೀಣಾವಾದನ, 4.00 ಮಹಿಳಾರಂಗ–ಸ್ತ್ರೀ ವಾದ ಕುರಿತು ಮಾತನಾಡುತ್ತಾರೆ ಶೀತಲ್ ಬೆಳಗಲಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ: ಡಾ.ಮಾಧವಿ ಭಂಡಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಹತ್ತಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು ಈ ಕುರಿತು ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹತ್ತಿ ಬೆಳೆಯ ಅಖಿಲಭಾರತ ಸುಸಂಘಟಿತ ಯೋಜನೆಯ ವಿಜ್ಞಾನಿ ಡಾ.ಸಿ. ಶಶಿಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ಯುಗಾದಿ ಹಬ್ಬದ ಸಂದರ್ಭದಲ್ಲಿ ವಿಶೇಷ ಚಿತ್ರಚಿತ್ತಾರ ಪ್ರಸ್ತುತಪಡಿಸುತ್ತಾರೆ ಮೈಸೂರಿನ G.S.S.S ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಸಿರಿ. ಎನ್.ಮೂರ್ತಿ., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೆ.ಜಿ.ರಾಮಸ್ವಾಮಿ–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 23 ಸೋಮವಾರ 2026

ಸಂಪುಟ: 46 | ಸಂಚಿಕೆ: 331 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಭಾರತದ ಇತಿಹಾಸದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಸರ್ಕಾರದ ಮುಖ್ಯಸ್ಥರಾಗಿ ಪ್ರಧಾನಿ ಮೋದಿ ದಾಖಲೆ

ಸಿಎಂ, ಪಿಎಂ ಆಗಿ 8,931 ದಿನ ಅಧಿಕಾರ

- ಸ್ವಾತಂತ್ರ್ಯಾನಂತರ ಜನಿಸಿದ ಮೊದಲ ಪ್ರಧಾನಿಗೆ ಮತ್ತೊಂದು ಹಿರಿಮೆ ಗರಿ
- ಎರಡು ಪೂರ್ಣ ಅವಧಿ ಪೂರೈಸಿ, ಮರು ಆಯ್ಕೆಯಾಗಿರುವ ಕಾಂಗ್ರೆಸ್ಸೇತರ ನಾಯಕ

ನವದೆಹಲಿ, ಮಾ.22– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ (ಮಾ.22) ಭಾರತದ ಇತಿಹಾಸದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಸರ್ಕಾರದ ಮುಖ್ಯಸ್ಥರು ಎಂಬ ಹೊಸ ದಾಖಲೆ ನಿರ್ಮಿಸಿದ್ದಾರೆ. ಈ ದಾಖಲೆ ಈವರೆಗೆ ಸಿಕ್ಕಿಂನ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ ಅವರ ಹೆಸರಲ್ಲಿತ್ತು.

ಚಾಮ್ಲಿಂಗ್ ಅವರು ಸಿಕ್ಕಿಂ ಮುಖ್ಯಮಂತ್ರಿ ಆಗಿ 8,930 ದಿನಗಳ ಕಾಲ ಸೇವೆ ಸಲ್ಲಿಸಿದ್ದರು. ಈಗ 8,931 ದಿನಗಳನ್ನು ಪೂರ್ಣಗೊಳಿಸಿರುವ ಮೋದಿ ಅವರು, ಗುಜರಾತ್ ಮುಖ್ಯಮಂತ್ರಿ ಹಾಗೂ ಭಾರತದ ಪ್ರಧಾನಮಂತ್ರಿ ಹುದ್ದೆಗಳಲ್ಲಿ ಅವರ ಒಟ್ಟು ಅವಧಿಯನ್ನು ಸೇರಿಸಿ ಈ ವಿಶಿಷ್ಟ ಸಾಧನೆ ಮಾಡಿದ್ದಾರೆ.

ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್, ಯೂಟ್ಯೂಬ್ ಚಾನಲ್‌ನಲ್ಲಿ 3 ಕೋಟಿ ಸಬ್‌ಸ್ಕ್ರೈಬರ್ ಹೊಂದುವ ಮೂಲಕ ದಾಖಲೆ ಬರೆದ ಪ್ರಧಾನಿ ಮೋದಿ, ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಯಾಗಿ 25 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲೇ ಈ ವಿಶಿಷ್ಟ ದಾಖಲೆಗೆ ಪಾತ್ರರಾಗಿರುವುದು ವಿಶೇಷ. ಅತೀ ಹೆಚ್ಚು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಗುಜರಾತ್ ಮುಖ್ಯಮಂತ್ರಿ ಎನ್ನುವ ಸಾಧನೆಯೂ ಮೋದಿ ಅವರದ್ದಾಗಿದೆ. ಈ ಮೈಲಿಗಲ್ಲು ಭಾರತೀಯ ರಾಜಕೀಯದಲ್ಲಿ ಅಪರೂಪದ ಸಾಧನೆಯಾಗಿದ್ದು, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ದಶಕಗಳ ನಿರಂತರ ಸಾರ್ವಜನಿಕ ಸೇವೆ ಹಾಗೂ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ.

ಮೋದಿ ಪಯಣ: ಗುಜರಾತ್‌ನ ವದಾನಗರದ ಮಧ್ಯಮವರ್ಗ ಕುಟುಂಬದಲ್ಲಿ ಜನಿಸಿದ ಮೋದಿ ಅವರು, ಬಾಲ್ಯದಲ್ಲಿ ರೈಲು ನಿಲ್ದಾಣದಲ್ಲಿ ತಮ್ಮ ತಂದೆಗೆ ಚಹಾ ಮಾರಾಟದಲ್ಲಿ ಸಹಾಯ ಮಾಡುತ್ತಿದ್ದರಂತೆ. ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಈ ಮೂಲಕ ಬಿಜೆಪಿ ಸೇರಿ ತಮ್ಮ ರಾಜಕೀಯ ಪಯಣ ಆರಂಭಿಸಿದರು. ಮೋದಿ ಅವರ ರಾಜಕೀಯ ಜೀವನ ಹಲವು ಸಾಧನೆಗಳಿಂದ ಕೂಡಿರುವುದು ವಿಶೇಷ.

ಹಂತ ಹಂತವಾಗಿ ಬೆಳೆದು ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿ ಮೊದಲ ಬಾರಿ 2001ರ ಅಕ್ಟೋಬರ್ 7ರಂದು ಅಧಿಕಾರ ಸ್ವೀಕರಿಸಿದರು. ಬಳಿಕ 2014ರ ಮೇ 21 ತನಕ ಮುಂದುವರಿದರು. ರಾಷ್ಟ್ರೀಯ ರಾಜಕಾರಣಕ್ಕೆ ಬದಲಾಗುವ ಮುನ್ನ 13 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಇದರೊಂದಿಗೆ ಗುಜರಾತ್‌ನ ದೀರ್ಘಕಾಲ ಸೇವೆ ಸಲ್ಲಿಸಿದ ಮುಖ್ಯಮಂತ್ರಿ ಎಂಬ ಗೌರವಕ್ಕೆ ಪಾತ್ರರಾದರು. 2014ರಲ್ಲಿ ಭಾರತದ ಪ್ರಧಾನಮಂತ್ರಿಯಾಗಿ ಆಯ್ಕೆಯಾದ ಮೋದಿ, ಮುಖ್ಯಮಂತ್ರಿ ಅನುಭವ ಹೊಂದಿದ ಪ್ರಧಾನಮಂತ್ರಿಗಳಲ್ಲಿ ಹೆಚ್ಚು ಅನುಭವ ಹೊಂದಿದವರೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಸ್ವಾತಂತ್ರ್ಯಾನಂತರ ಜನಿಸಿ, ಪ್ರಧಾನಮಂತ್ರಿಯಾಗಿರುವ ಮೊದಲಿಗರು ಇವರಾಗಿದ್ದಾರೆ.

ದೀರ್ಘಕಾಲದ ಪ್ರಭಾವಿ ನಾಯಕ: 2014ರಿಂದ ಅಧಿಕಾರದಲ್ಲಿರುವ ಮೋದಿ ಅವರು, 2014, 2019 ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ ತಮ್ಮ ಪಕ್ಷವನ್ನು ನಿರಂತರವಾಗಿ ಮೂರು ಬಾರಿ ಗೆಲುವಿನತ್ತ ಕೊಂಡೊಯ್ದಿದ್ದಾರೆ. ಈ ಮೂಲಕ ■6ನೇ ಪುಟಕ್ಕೆ

ಕಾಂಗ್ರೆಸ್ ಟಿಕೆಟ್ ಘೋಷಣೆ ಬೆನ್ನಲ್ಲೇ

ದಾವಣಗೆರೆಯಲ್ಲಿ ಬಂಡಾಯದ ಬಿಸಿ; ಬಾಗಲಕೋಟೆ ಬೂದಿಮುಚ್ಚಿದ ಕೆಂಡ



ಉಮೇಶ್ ಮೇಟಿ



ಸಮರ್ಥ್



ಸಾದಿಕ್ ಪೈಲ್ವಾನ್

ಬೆಂಗಳೂರು, ಮಾ.22– ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಗೆ ಅಭ್ಯರ್ಥಿಗಳ ಅಧಿಕೃತ ಘೋಷಣೆ ಬೆನ್ನಲ್ಲೇ ಆಡಳಿತಾರೂಢ ಕಾಂಗ್ರೆಸ್‌ಗೆ ಬಂಡಾಯದ ಸವಾಲು ಎದುರಾಗಿದೆ.

ಎರಡೂ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕಾಂಗ್ರೆಸ್‌ಗೆ ಕಗ್ಗಂಟಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖದಲ್ಲಿ ನಿನ್ನೆ ನಡೆದ ಸಂಧಾನ ಸಭೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಾಗಲಕೋಟೆ ಕ್ಷೇತ್ರದಿಂದ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಲು ನಿರ್ಧರಿಸಿದ ನಂತರ ಇದನ್ನು ಅಧಿಕೃತವಾಗಿ ಪ್ರಕಟಿಸಲಾಯಿತು.

ಆದರೆ ಟಿಕೆಟ್ ಘೋಷಣೆ ಬೆನ್ನಲ್ಲೇ ದಾವಣಗೆರೆ ಕ್ಷೇತ್ರದಲ್ಲಿ ಬಂಡಾಯ ಸ್ಫೋಟಗೊಂಡಿದೆ. ಟಿಕೆಟ್ ಆಕಾಂಕ್ಷಿಯಾಗಿದ್ದ ಸಾದಿಕ್ ಪೈಲ್ವಾನ್ ಅವರು ಸೋಮವಾರ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವುದಾಗಿ ಖಡಕ್ಕಾಗಿ ಹೇಳುವ ಮೂಲಕ ಸ್ವಪಕ್ಷಕ್ಕೇ ಸವಾಲೆಸೆದಿದ್ದಾರೆ. ಅತ್ತ ಬಾಗಲಕೋಟೆ ಕ್ಷೇತ್ರದಲ್ಲೂ ಅಭ್ಯರ್ಥಿ ಉಮೇಶ್ ಮೇಟಿ ಅವರ ಸಹೋದರ ಹಾಗೂ ಸಹೋದರಿಯೂ ಟಿಕೆಟ್ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್‌ಗೆ ತಕ್ಕ ಪಾಠ: ದಾವಣಗೆರೆ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಘೋಷಣೆ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಸಾದಿಕ್ ಪೈಲ್ವಾನ್, ಶುಕ್ರವಾರದವರೆಗೆ ಬಿ ಫಾರಂ ಸಿಗುವ ಭರವಸೆ ಇತ್ತು. ಆದರೆ, ಬಿ– ಫಾರಂ ಸಿಕ್ಕಿಲ್ಲ. ಕಾಂಗ್ರೆಸ್‌ಗೆ ಈ ಬಾರಿ ದಾವಣಗೆರೆಯಲ್ಲಿ ಪಾಠ ಕಲಿಸುತ್ತೇವೆ. ಸಾವಿರಾರು ಜನರ ಬೆಂಬಲದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆಗೆ ನಿರ್ಧಾರ ಮಾಡಿದ್ದೇನೆ. 40 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ದುಡಿದಿದ್ದೇನೆ. ಆದರೆ ಕಾಂಗ್ರೆಸ್‌ನಿಂದ ಅನ್ಯಾಯ ಆಗಿದೆ. ಶಾಮನೂರು ಕುಟುಂಬದ ವಿರುದ್ಧ ಅಖಾಡಕ್ಕೆ ಇಳಿಯಲು ನಾನು ಸಿದ್ಧವಾಗಿದ್ದೇನೆ. ನಮ್ಮ ಹೋರಾಟ ಕಾಂಗ್ರೆಸ್ ಪಕ್ಷದ ವಿರುದ್ಧ, ■6ನೇ ಪುಟಕ್ಕೆ

ಶತ್ರುಗಳ ಹಡಗುಗಳಿಗಷ್ಟೇ ಹಾರ್ಮುಜ್ ನಿರ್ಬಂಧ

- ವಿಶ್ವಸಂಸ್ಥೆಯ ಕಡಲ ಸಂಸ್ಥೆಗೆ ಇರಾನ್ ಸ್ಪಷ್ಟನೆ
- ಮೂಲ ಸೌಕರ್ಯ ನಾಶಪಡಿಸಿದರೆ ಭೀಕರ ಪ್ರತಿದಾಳಿ ಎಚ್ಚರಿಕೆ



ನವದೆಹಲಿ, ಮಾ.22– ಶತ್ರುಗಳಿಗೆ ಸಂಬಂಧಿಸಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ನೌಕಾ ಸಾಗಾಣಿಕೆಗೆ ಹಾರ್ಮುಜ್ ಜಲಸಂಧಿ ಮುಕ್ತವಾಗಿದೆ ಎಂದು ಇರಾನ್ ಸ್ಪಷ್ಟಪಡಿಸಿದೆ.

ಇನ್ನು 48 ಗಂಟೆಗಳಲ್ಲಿ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ತೆರೆಯದಿದ್ದರೆ ಇರಾನ್‌ನ ವಿದ್ಯುತ್ ಉತ್ಪಾದನಾ ಸ್ಥಾವರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದ ಬೆನ್ನಲ್ಲೇ ಇರಾನ್ ಪ್ರತಿನಿಧಿ ಅಲಿ ಮುಸಾವಿ, ವಿಶ್ವಸಂಸ್ಥೆಯ ಕಡಲ ಸಂಸ್ಥೆಗೆ ಭಾನುವಾರ ಈ ಸ್ಪಷ್ಟನೆ ನೀಡಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತಿದಾಳಿ ನಡೆಸುತ್ತಿರುವ ಇರಾನ್, ತನ್ನ ನಿಯಂತ್ರಣದಲ್ಲಿರುವ ಕಿರಿದಾದ ಹಾರ್ಮುಜ್ ಜಲಮಾರ್ಗದಲ್ಲಿ ಹೆಚ್ಚಿನ ಹಡಗು ಸಂಚಾರವನ್ನು ನಿರ್ಬಂಧಿಸಿತ್ತು. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲಗಳ ಅಗತ್ಯದ ಐದನೇ ಒಂದು ಭಾಗದಷ್ಟು ಸಾಗಾಟವಾಗುವ ಈ ಜಲಮಾರ್ಗವನ್ನೇ ಬಂದ್ ಮಾಡಿದ್ದರಿಂದ ಜಾಗತಿಕ ಇಂಧನ ಕೊರತೆ ಸೃಷ್ಟಿಯಾಗಿತ್ತು. ನಂತರ ಈ ಮಾರ್ಗದಲ್ಲಿ ಹಾದು ಹೋಗುವ ಹಡಗುಗಳಿಗೆ ಶುಲ್ಕ ವಿಧಿಸುವ ಎಚ್ಚರಿಕೆ ನೀಡಿತ್ತು. ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಕಡಲ ಸಂಸ್ಥೆಯು ಇರಾನ್‌ನಿಂದ ಮಾಹಿತಿ ಪಡೆದಿದೆ.

ಸುರಕ್ಷತೆಗಾಗಿ ಇರಾನ್ ಸಿದ್ಧ: ಕಡಲ ಸುರಕ್ಷತೆಯನ್ನು ಹೆಚ್ಚಿಸುವುದರ ಜೊತೆಗೆ ಕೊಲ್ಲಿಯಲ್ಲಿ ನಾವಿಕರನ್ನು ರಕ್ಷಿಸಲು ಅಂತರರಾಷ್ಟ್ರೀಯ ಕಡಲ ಸಂಘಟನೆಯೊಂದಿಗೆ ಸಹಕರಿಸಲು ಇರಾನ್ ಸಿದ್ಧವಿದೆ. ಇರಾನ್‌ನ ಶತ್ರುಗಳೊಂದಿಗೆ ಸಂಬಂಧ ಹೊಂದಿರದ ಹಡಗುಗಳು ಇರಾನ್ ಸರ್ಕಾರದೊಂದಿಗೆ ಭದ್ರತಾ ಮತ್ತು ■6ನೇ ಪುಟಕ್ಕೆ

ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡಿದರೆ ಹಾರ್ಮುಜ್ ಜಲಸಂಧಿ ಸಂಪೂರ್ಣ ಬಂದ್

ನವದೆಹಲಿ: ಅಮೆರಿಕ ನಮ್ಮ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸಿದರೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ಬಂದ್ ಮಾಡುವುದಾಗಿ ಇರಾನ್‌ನ ಮಿಲಿಟರಿ ಕಮಾಂಡ್ ಖತಮ್ ಅಲ್–ಅನ್ಬಿಯಾ ಎಚ್ಚರಿಕೆ ನೀಡಿದ್ದಾರೆ.

ಮಾಧ್ಯಮಕ್ಕೆ ನೀಡಿದ ಸಂದರ್ಶನವೊಂದರಲ್ಲಿ ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಹಾರ್ಮುಜ್ ಜಲಸಂಧಿಯನ್ನ ಸಂಪೂರ್ಣವಾಗಿ ಮುಚ್ಚುತ್ತೇವೆ. ನಾಶವಾದ ನಮ್ಮ ವಿದ್ಯುತ್ ಸ್ಥಾವರಗಳನ್ನ ಪುನರ್ನಿರ್ಮಿಸುವವರೆಗೆ ಜಲಸಂಧಿಯನ್ನ ತೆರೆಯಲಾಗುವುದಿಲ್ಲ ಎಂದಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ಹಡಗು ಸಂಚಾರಕ್ಕಾಗಿ ಮತ್ತೆ ತೆರೆಯದಿದ್ದರೆ ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಬೆದರಿಕೆ ಹಾಕಿದ್ದರು. ಆದರೆ ಇರಾನ್ ಹಾರ್ಮುಜ್ ಜಲಸಂಧಿಯನ್ನೇ ಯುದ್ಧದ ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ.

ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಎರಡು ಹಡಗುಗಳು ಮಂಗಳೂರಿಗೆ



ಮಂಗಳೂರು: ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಕಚ್ಚಾ ತೈಲ ಹಾಗೂ ದ್ರವೀಕೃತ ಪೆಟ್ರೋಲಿಯಂ ಅನಿಲ(ಎಲ್‌ಪಿಜಿ) ಹೊತ್ತ ಎರಡು ಹಡಗುಗಳು ಭಾನುವಾರ ನವ ಮಂಗಳೂರು ಬಂದರು ತಲುಪಿವೆ.

ರಷ್ಯಾದ 'ಆಕ್ವಾ ಟೈಟಾನ್' ಹೆಸರಿನ ತೈಲ ಟ್ಯಾಂಕರ್ ಮೂಲತಃ ಚೀನಾಕ್ಕೆ ತೆರಳಬೇಕಿತ್ತು. ದಕ್ಷಿಣ ಚೀನಾ ಸಮುದ್ರದಲ್ಲಿ ಸಂಚರಿಸುತ್ತಿದ್ದ ತೈಲ ಸಾಗಾಟದ ಈ ಬೃಹತ್ ಹಡಗು ಕಳೆದ ವಾರಾರಂಭದಲ್ಲಿ ಅಲ್ಲಿಂದ ಯು–ಟರ್ನ್ ಪಡೆದು ಭಾರತದತ್ತ ಮುಖ ಮಾಡಿತ್ತು.

ಇದೇ ವೇಳೆ ಅಮೆರಿಕದ ಟೆಕ್ಸಾಸ್‌ನಿಂದ ಬೃಹತ್ ಪ್ರಮಾಣದ ಎಲ್‌ಪಿಜಿ ಹೊತ್ತ 'ಪಿಕ್ಸಿಸ್ ಪಯೋನೀರ್' ಎಂಬ ಸರಕು ನೌಕೆಯೂ ಇಂದು ನವಮಂಗಳೂರು ಬಂದರು ತಲುಪಿದೆ. ಈ ಬೃಹತ್ ಕಾರ್ಗೋ ಹಡಗು, ಸುಮಾರು 16,714 ಮೆಟ್ರಿಕ್ ಟನ್ ಅಡುಗೆ ಅನಿಲವನ್ನು ಹೊತ್ತು ತಂದಿದೆ. ವಿದೇಶದಿಂದ ಕರ್ನಾಟಕಕ್ಕೆ ಆಗಮಿಸಿದ ಮೊದಲ ಎಲ್‌ಪಿಜಿ ಹಡಗು ಇದಾಗಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ತಾರಕಕ್ಕೇರಿದ ನಂತರ, ಪಶ್ಚಿಮ ಏಷ್ಯಾದ ಸಮುದ್ರ ಮಾರ್ಗಗಳಲ್ಲಿ ಸರಕು ಸಾಗಣೆ ಅಸ್ತವ್ಯಸ್ತಗೊಂಡಿತ್ತು. ಹಾರ್ಮುಜ್ ಜಲಸಂಧಿ ಸೇರಿದಂತೆ ಪ್ರಮುಖ ಮಾರ್ಗಗಳಲ್ಲಿ ಹಡಗುಗಳ ಸಂಚಾರಕ್ಕೆ ಅಡೆತಡೆ ಉಂಟಾಗಿದ್ದರಿಂದ ಭಾರತದಲ್ಲೂ ಇಂಧನ ಪೂರೈಕೆಯ ಆತಂಕ ಸೃಷ್ಟಿಯಾಗಿತ್ತು.

ಮೈಸೂರು ಮತ್ತೊಂದು ಬೆಂಗಳೂರು ಆಗುತ್ತಿದೆಯೆ...?

ಮೈಸೂರಿನಲ್ಲಿ ಕಳೆದ 2 ವರ್ಷದ ಅವಧಿಯಲ್ಲಿ 1.7 ಲಕ್ಷ ವಾಹನ ಹೆಚ್ಚಳ

- ಭವಿಷ್ಯತ್ತಿನಲ್ಲಿ ಬೆಂಗಳೂರಿನಂತೆ ಮೈಸೂರಿನಲ್ಲೂ ಟ್ರಾಫಿಕ್ ಜಾಮ್ ಗಂಡಾಂತರ
- ಮೈಸೂರಿನಲ್ಲಿ 16 ಲಕ್ಷದ ಗಡಿದಾಟಿದ ವಾಹನಗಳ ಸಂಖ್ಯೆ
- ದ್ವಿಚಕ್ರ ವಾಹನಗಳ ಸಂಖ್ಯೆ ಶೇಕಡ 82ರಷ್ಟು ಏರಿಕೆ
- ನಾಲ್ಕು ಚಕ್ರದ ವಾಹನಗಳ ಸಂಖ್ಯೆ ಶೇಕಡ 14ರಷ್ಟು ಹೆಚ್ಚಳ
- ಮೈಸೂರಿನ ಕೆಲವೆಡೆ ಪ್ರತಿದಿನ ಟ್ರಾಫಿಕ್ ಜಾಮ್ ಕಿರಿಕಿರಿ



ಮೈಸೂರಿನ ಸಯ್ಯಾಜಿರಾವ್ ರಸ್ತೆಯ ವಾಹನ ದಟ್ಟಣೆಯ ದೃಶ್ಯ

ಮೈಸೂರು, ಮಾ.22(ಬಿಎಲ್‌ಯು, ಬಿಸಿಟಿ, ಎಜಿ)– ಸಾಂಸ್ಕೃತಿಕ ನಗರಿ ಮೈಸೂರಿನ ಕೆಲವು ವೃತ್ತ ಹಾಗೂ ಜಂಕ್ಷನ್‌ಗಳಲ್ಲಿ ಹೊಸದಾಗಿ 43 ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿರುವ ಸಂಚಾರಿ ಪೊಲೀಸರ ಕ್ರಮವನ್ನು ಕೆಲವರು ಟೀಕಿಸಿದ್ದಾರೆ. ಮೈಸೂರಿನ ಜನಸಂಖ್ಯೆ ಹಾಗೂ ವಾಹನಗಳ ಪ್ರಮಾಣದಲ್ಲಿ ಹೆಚ್ಚಾಗುತ್ತಿದ್ದು, ಬೆಂಗಳೂರಿನ ಅತಿಯಾದ ಟ್ರಾಫಿಕ್ ಜಾಮ್ ಕಿರಿಕಿರಿಯ ಪರಿಸ್ಥಿತಿ ಅರಮನೆ ನಗರಿ ಮೈಸೂರಿಗೂ ಎದುರಾಗಬಹುದೆ ಎಂಬ ಆತಂಕ ವ್ಯಕ್ತವಾಗಿದೆ.

ಮೈಸೂರು ನಗರದ ವಾಹನಗಳ ಸಂಖ್ಯೆ 2025ಕ್ಕೆ 16 ಲಕ್ಷ ಗಡಿ ದಾಟಿದೆ. ಹಾಗೆಯೇ 1.70 ಲಕ್ಷ ವಾಹನಗಳ ಹೊಸದಾಗಿ ಸೇರ್ಪಡೆಯಾಗಿದೆ. ಹೆಚ್ಚಾಗುತ್ತಿರುವ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಹೊಸದಾಗಿ ಅಳವಡಿಸಿರುವ ಸಿಗ್ನಲ್ ಲೈಟ್‌ಗಳು ಅಗತ್ಯ ಎಂಬ ವಾದ ವ್ಯಕ್ತವಾಗಿದೆ.

ವಿಧಾನಸಭೆಯ ಅಧಿವೇಶನದ ವೇಳೆ ಬೆಂಗಳೂರಿನ ರಾಜಾಜಿನಗರದ ಶಾಸಕ ಎಸ್.ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿರುವ ಸಾರಿಗೆ ಸಚಿವ ಆರ್.ರಾಮಲಿಂಗರೆಡ್ಡಿ ಅವರು, ಮೈಸೂರಿನ ವಾಹನಗಳ ಸಂಖ್ಯೆ ಹೆಚ್ಚಳವನ್ನು ಅಂಕಿ ಅಂಶಗಳ ಸಹಿತ ವಿವರಿಸಿದ್ದಾರೆ. ಮೈಸೂರಿನಲ್ಲಿ 2023ರಲ್ಲಿ 14,54,115 ವಾಹನಗಳ ನೋಂದಣಿಯಾಗಿತ್ತು, 2024ರಲ್ಲಿ 15,39,464 ವಾಹನಗಳು ಹಾಗೂ 2025ರಲ್ಲಿ 16,24,214 ವಾಹನಗಳ ನೋಂದಣಿಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಮೈಸೂರಿನಲ್ಲಿ 1,70,099 ವಾಹನಗಳು ಹೆಚ್ಚಾಗಿದ್ದು, ಇದು ಶೇಕಡ 12ರಷ್ಟು ಏರಿಕೆಯನ್ನು ಪ್ರತಿಬಿಂಬಿಸುತ್ತದೆ. ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ)ನಿಂದ ಪಡೆದಿರುವ ಡಾಟಾ ಪ್ರಕಾರ 2023 ಮತ್ತು 2024ರ ನಡುವೆ ಮೈಸೂರಿನಲ್ಲಿ 85,349 ವಾಹನಗಳು ಸೇರಿವೆ. ತರುವಾಯ 2024 ಮತ್ತು 2025ರ ನಡುವೆ 84,750 ವಾಹನಗಳು ಸೇರಿದ್ದು, ■6ನೇ ಪುಟಕ್ಕೆ

ಮೈಸೂರಿನಲ್ಲಿ ಪ್ರತಿ 100 ಮೀಟರ್‌ಗೆ ಒಂದು ಟ್ರಾಫಿಕ್ ಸಿಗ್ನಲ್ ಅವೈಜ್ಞಾನಿಕ

ಮೈಸೂರು ನಗರದಲ್ಲಿ ಪ್ರತಿ 100 ಮೀಟರ್‌ಗೆ ಒಂದು ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿರುವುದು ಪ್ರಾಯೋಗಿಕ ಕ್ರಮವಲ್ಲ. ಅಲ್ಲದೆ ಇದು ಅವೈಜ್ಞಾನಿಕ ತೀರ್ಮಾನ. ಕಡಿಮೆ ವಾಹನ ಸಂಚಾರ ಇರುವ ಸ್ಥಳಗಳಲ್ಲಿ ಅನಗತ್ಯವಾಗಿ ಅಳವಡಿಸಿರುವ ಇಂತಹ ಸಿಗ್ನಲ್ ಲೈಟ್‌ಗಳಿಂದ ಟ್ರಾಫಿಕ್ ಜಾಮ್ ಕಿರಿಕಿರಿಯಾಗಲಿದ್ದು, ವಾಹನಗಳು ಸಾಗುವುದು ವಿಳಂಬ ವಾಗುತ್ತದೆ. ವೈಜ್ಞಾನಿಕವಾಗಿ ನಡೆಸಿರುವ ಅಧ್ಯಯನದ ಪ್ರಕಾರ ಅಗತ್ಯವಿರುವ ಸ್ಥಳಗಳಲ್ಲಿ ಮಾತ್ರ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಬೇಕು. ಈ ಮೊದಲು ಸಂಚಾರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಾಗ ಪೊಲೀಸರು ಸಾರ್ವಜನಿಕರ ಜೊತೆ ಸಮಾಲೋಚನೆ ನಡೆಸುತ್ತಿದ್ದರು. ಅವರ ಅಭಿಪ್ರಾಯವನ್ನು ಪರಿಗಣಿಸುತ್ತಿದ್ದರು. ಆದರೆ ಈಗ ಪೊಲೀಸರು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ವೈಜ್ಞಾನಿಕ ಅಧ್ಯಯನ ಮಾಡಿಸದೆ, ಸಾರ್ವಜನಿಕರ ಅಭಿಪ್ರಾಯ ಆಲಿಸದೆ ಕೈಗೊಳ್ಳುತ್ತಿರುವ ಇಂತಹ ಕ್ರಮಗಳು ಮೈಸೂರಿನ ಸಂಚಾರ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತಿದೆ.

ಮೈಸೂರಿನಲ್ಲಿ ಸಾಮಾನ್ಯ ದಿನಗಳಲ್ಲಿ ಟ್ರಾಫಿಕ್ ಜಾಮ್ ಕಿರಿಕಿರಿ ಇರುವುದಿಲ್ಲ. ಆದರೆ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ನಗರದ ಹೃದಯ ಭಾಗ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಇದರಿಂದ ವಾಣಿಜ್ಯ ಪ್ರದೇಶಗಳಲ್ಲಿ ಪಾರ್ಕಿಂಗ್ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ವಾಹನ ನಿಲುಗಡೆಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಯುತ್ತಾ ಕನಿಷ್ಠ ಅರ್ಧ ಗಂಟೆ ಹುಡುಕಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗುತ್ತಿದೆ. ಈ ತೊಂದರೆಯಿಂದ ಮುಕ್ತರಾಗಲು ಜನರು ನಗರದ ಹೃದಯ ಭಾಗಕ್ಕೆ ಬರಲು ಹಿಂದೇಟು ಹಾಕುತ್ತಿದ್ದು, ತಾವಿರುವ ಸ್ಥಳಗಳಲ್ಲೇ ವಸ್ತುಗಳನ್ನು ಖರೀದಿ ಮಾಡುತ್ತಿದ್ದಾರೆ. ಜೊತೆಗೆ ಆನ್‌ಲೈನ್ ಶಾಪಿಂಗ್ ಮೇಲೆ ಅವಲಂಬಿತರಾಗುತ್ತಿದ್ದಾರೆ.

– ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್

ನಕ್ಕರೆ ಅದೇ ಸ್ವರ್ಗ

ಗುಂಡ ಬಸ್ಸಿನಲ್ಲಿ ಹೋಗಬೇಕಾದರೆ ಪಕ್ಕದಲ್ಲಿ ಒಬ್ಬ ಮಹಿಳೆ ಮಗುವಿಗೆ ಜಾಮೂನ್ ತಿನ್ನಿಸ್ತಾ ಇದ್ರು.
ತಾಯಿ : ನೋಡು ನೀನು ತಿನ್ನಲಿಲ್ಲ ಅಂದ್ರೆ ಅಂಕಲ್‌ಗೆ ಕೊಟ್ಟು ಬಿಡ್ತೀನಿ...
ಆದ್ರೂ ಮಗು ತಿನ್ನಲಿಲ್ಲ.. ಪದೇ ಪದೆ ಅಂಕಲ್‌ಗೆ ಕೊಟ್ ಬಿಡ್ತೀನಿ ಅಂತಿದ್ರು,
ಗುಂಡ ಕೋಪದಿಂದ : ಮೇಡಂ ಕೊಡೊದಾದ್ರೆ ಬೇಗ ಕೊಡಿ... ನಿಮ್ಮ ಜಾಮೂನು ಆಸೆಯಿಂದ ನಮ್ಮೂರು ಬಿಟ್ಟು 4 ಕಿ.ಮೀ. ದೂರ ಬಂದಿದ್ದೀನಿ!

ಮೈಸೂರು ಮಿತ್ರ

ಸೋಮವಾರ, ಮಾರ್ಚ್ 23, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಿಜವಾದ ಪ್ರೀತಿ, ನಂಬಿಕೆ, ವಿಶ್ವಾಸ ಮತ್ತು ನಿಷ್ಠೆಯನ್ನೂ ಬಯಸುತ್ತದೆ. ಚಾಕೋಲೇಟ್‌ಗಳು, ಹೂವುಗಳು ಮತ್ತು ದುಬಾರಿ ಉಡುಗೊರೆಗಳನ್ನಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುರುಡರ ರಾಜ್ಯದಲ್ಲಿ ಒಕ್ಕಣ್ಣನೆ ರಾಜ

ನಿಮ್ಮ ಪತ್ರಗಳು

ಗೀತೆ ರಚನಾಕಾರರ ವಿರುದ್ಧ ಸುಮಟೋ ಕೇಸ್ ದಾಖಲಿಸಲಿ

ಮಾನ್ಯರೆ,

ಪ್ರೇಮ್ ನಿರ್ದೇಶನದ ಕನ್ನಡ ಚಿತ್ರವೊಂದರಲ್ಲಿ ಸರ್ಸೆ ನಿನ್ನ ಸೆರಗ ಸರ್ಸೆ.. ಗೀತೆ ದ್ವಂದ್ವಾರ್ಥದ ಕೀಳು ಅಭಿರುಚಿಯ ಈ ಹಾಡು ಈಗ ವಿವಾದವೆಬ್ಬಿಸಿದೆ.

ಹಿಂದಿಯಲ್ಲೂ ಇರುವ ಈ ಹಾಡಿನ ಬಗ್ಗೆ ಬಾಲಿವುಡ್ ಗಾಯಕ ಅರ್ಮಾನ್ ಮಲ್ಲಿಕ್ ಅವರು, ಗೀತೆ ರಚನಾಕಾರರು ಇಷ್ಟು ಕೆಳಮಟ್ಟಕ್ಕೆ ಇಳಿದಿದ್ದನ್ನು ನೋಡಲು ಬೇಸರವಾಗುತ್ತದೆ ಎಂದಿದ್ದಾರೆ. ಸಾಮಾಜಿಕ ಜಾಲತಾಣದಲ್ಲೂ ಆಕ್ರೋಶ ವ್ಯಕ್ತವಾಗಿದೆ. ಆದರೂ ಗೀತೆ ರಚನಾಕಾರರು ಇದನ್ನು, ನೋಡುವ, ಕೇಳುವ, ದೃಷ್ಟಿಕೋನ ಅವಲಂಬಿಸಿದೆ ಎಂದು ಸಮರ್ಥಿಸಿಕೊಂಡಿರುವುದು, ಇಷ್ಟಾದರೂ ಚಿತ್ರದಲ್ಲಿ ಈ ಹಾಡು ಇರಲಿದೆ ಎಂದಿರುವುದು ಅವರ ಕೀಳು ಅಭಿರುಚಿಗೆ ಕನ್ನಡಿ ಹಿಡಿದಿದೆ.

ಹಾಗೆ ನೋಡಿದರೆ ಕನ್ನಡ ಚಿತ್ರ ಸಂಭಾಷಣೆ, ಗೀತೆಗಳಲ್ಲಿ ಇಂತಹ ಕೀಳು ಅಭಿರುಚಿಯ ಹಾಡು, ಸಂಭಾಷಣೆಗಳು ಹೊಸತೇನಲ್ಲ. ಅನೇಕ ನಟ, ನಿರ್ದೇಶಕರ ಚಿತ್ರಗಳಲ್ಲಿ 80ರ ದಶಕಗಳಿಂದಲೂ ಇಂತಹ ದ್ವಂದ್ವಾರ್ಥದ ಪದಗಳು ಹಾಸು ಹೊಕ್ಕಾಗಿ ಗಲ್ಲಾ ಪೆಟ್ಟಿಗೆ ತುಂಬಿಸಿವೆ. (ಅದು ಇತ್ತೀಚಿನ ವರ್ಷಗಳಲ್ಲಿ ಕಿರುತೆರೆಯ ಮನರಂಜನಾ ಕಾರ್ಯಕ್ರಮಗಳಲ್ಲಿ ವ್ಯಾಪಾಕವಾಗಿ ಹಬ್ಬಿದೆ.)

ಆಗ ಈಗಿನಂತೆ ಸಾಮಾಜಿಕ ಮಾಧ್ಯಮಗಳು ಇಲ್ಲದಿದ್ದ ಕಾರಣ ಕೇಳುಗರ ಪ್ರತಿಕ್ರಿಯೆ ಇರುತ್ತಿರಲಿಲ್ಲ. ಆದರೆ ಈಗಲೂ ಇಂತಹ ಹಾದಿಯನ್ನೇ ಹಿಡಿದು ಗಲ್ಲಾಪೆಟ್ಟಿಗೆ ಲೂಟಿ ಮಾಡಲು ಹೊರಟಿರುವುದು ಖಂಡನೀಯ. ನ್ಯಾಯಾಲಯಗಳು ಇದನ್ನು ಗಮನಿಸಿ ಸುಮೋಟೊ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಅಂದ ಹಾಗೆ ಮಾದಕ ವಸ್ತು ವ್ಯಸನಿಯಂತಾಗಿರುವ ಸೆನ್ಸಾರ್ ಮಂಡಳಿಯನ್ನು ಬಡಿದೆಬ್ಬಿಸಬೇಕು. ಇಂತಹ ದ್ವಂದ್ವಾರ್ಥದ ಪದ, ಹಾಡು ಸಂಭಾಷಣೆಗಳನ್ನು ಕೇಳಿ ಕೇಳಿ ಅದು ಕೂಡ ಕೆಳ ಮಟ್ಟಕ್ಕೆ ಇಳಿದಿರಬಹುದು ಎನ್ನುವ ಅನುಮಾನ ಸಾರ್ವಜನಿಕರಲ್ಲಿ ಮನೆ ಮಾಡಿದೆ. ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ ಏನು ಮಾಡುತ್ತಿದೆ? –ಮುಳ್ಳೂರು ಪ್ರಕಾಶ್, ಮೈಸೂರು.

ಲಂಚವೆಂಬುದು ಕೆಲವರ ಮನಸ್ಸಿಗೆ ಅಂಟಿದ ಒಂದು ಮಾನಸಿಕ ರೋಗ

ಮಾನ್ಯರೆ,

ಲಂಚವೆಂಬುವುದು ಕೆಲವರ ರಂಗದಲ್ಲೂ ತನ್ನ ಬಾಹುಗಳನ್ನು ಚಾಚಿ ನಿಂತಿದೆ. ಸೇವಾ ಮನೋಭಾವ ಹೊಂದಿರಬೇಕಾದ ಕೆಲವು ಸಂಸ್ಥೆಗಳಿಂದ ಹಿಡಿದು ಇಂದು ಕೆಲವು ಜನ ಪ್ರತಿನಿಧಿಗಳಿಗೂ ಹಬ್ಬಿದೆ. ಶಿರಹಟ್ಟಿ ಎಂಎಲ್‌ಎ ರವರ ಪರವಾಗಿ ಅವರ ಇಬ್ಬರ ಆಪ್ತರು ಲಂಚ ಪಡೆಯುವಾಗ ಲೋಕಾಯುಕ್ತರ ಅಧಿಕಾರಿಗಳಿಗೆ ಸಿಕ್ಕಿ ಬಿದ್ದಿರುವುದು ಮಾಧ್ಯಮಗಳ ಮೂಲಕ ನೋಡಿದ್ದೇವೆ.

ಸರಕಾರದ ಸಂಬಳ ತಿಂದರೂ ಕೂಡ ಭ್ರಷ್ಟಾಚಾರ ಮತ್ತು ಲಂಚ ಪಡೆಯುವ ಕೆಲವು ಅಧಿಕಾರಿಗಳಿಗೆ ಏನು ಹೇಳಬೇಕು? ಇತ್ತೀಚಿನ ಕೆಲವು ವರ್ಷಗಳಲ್ಲಿ ಪ್ರಕೃತಿ ವಿಕೋಪ, ಜಲಪ್ರಳಯ, ಭೂಕಂಪ, ಕೊರೊನಾದಂತ ಘಟನೆಗಳು ನಡೆಯುತ್ತಿದ್ದರೂ ಕೆಲವರಂತೂ ಎಚ್ಚೆತ್ತುಕೊಂಡಿಲ್ಲ ಹಾಗೂ ದಿನ ಬೆಳಗ್ಗೆ ಎದ್ದರೆ ಒಂದು ತುತ್ತಿನ ಹೊಟ್ಟೆ ಪಾಡಿಗಾಗಿ ದುಡಿಯುವ ಶ್ರಮಿಕರ ದುಡಿಮೆ ಕೂಡ ಇವರಿಗೆ ಆತ್ಮಾವಲೋಕನ ಆಗುವುದಿಲ್ಲ.

ಇಂತಹ ಜೀವಂತ ಸಮಸ್ಯೆಗಳು ಸಮಾಜದ ಮುಂದೆ ಇದ್ದರೂ, ಇವರ ಬದಲಾವಣೆಗೆ ಅಭಿವೃದ್ಧಿಗೆ ಸಮಾಜಮುಖಿ ಕೆಲಸ ಮಾಡಬೇಕಾದ ಅಧಿಕಾರಿಗಳಿರಬಹುದು ಅಥವಾ ಜನ ಪ್ರತಿನಿಧಿಗಳು ತಮ್ಮ ಪೂರ್ವ ನಿಗದಿತ ಕೆಲಸಗಳ ಬಗ್ಗೆ ಎಚ್ಚರಗೊಳ್ಳದೆ ತನ್ನ ಭ್ರಷ್ಟತೆಯ ಲಂಚದ ಹಣಕ್ಕೆ ಆಸೆ ಪಡುತ್ತಿರುವುದು ಮನಸ್ಸಿನ ವಿಕಾರತೆಗೆ ಅಂಟಿದರೋಗ ಸಮಾಜ ತಪ್ಪು ಮಾಡಿದವರನ್ನು ಮತ್ತು ಭಷ್ಟರನ್ನು ಬಹಿಷ್ಕರಿಸುವ ಮೂಲಕ ನೈತಿಕತೆಯನ್ನು ಕಾಪಾಡಿಕೊಳ್ಳಬೇಕೇನೋ ಎಂದೆನಿಸುತ್ತದೆ.

ಐಷಾರಾಮಿ ಮನೆ, ಕಾರು ದಿನ ನಿತ್ಯ ಮೃಷ್ಟಾನ್ನಾ ಭೋಜನ ಇಂತಹ ವ್ಯವಸ್ಥೆ ಕೊಟ್ಟಂತಹ ಸಮಾಜಕ್ಕೆ ಸಮಾಜಮುಖಿ ಕೆಲಸ ಮಾಡಬೇಕಾಗುತ್ತೆ. ಕೆಲವರು ಭ್ರಷ್ಟಾಚಾರಕ್ಕೆ ಇಳಿದು ಲಂಚ ಪಡೆದು ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ. ಲಂಚವೆಂಬುವುದು ಮನಸ್ಸಿಗೆ ಅಂಟಿದ ಒಂದು ಮಾನಸಿಕ ರೋಗಕ್ಕೆ ಬಲಿಯಾಗಬೇಡಿ. –ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು.

ನಗರ ಆರ್ಥಿಕ ವಲಯ ಯೋಜನೆಗೆ ಮೈಸೂರು

ಮಾನ್ಯರೆ,

ಕೇಂದ್ರ ಸರ್ಕಾರವು ನಗರಗಳ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ನಗರ ಆರ್ಥಿಕ ವಲಯ ಯೋಜನೆ ರೂಪಿಸಿದ್ದು, ಈಗಾಗಲೇ ದೇಶದಲ್ಲಿ ಹಲವಾರು ನಗರಗಳು ಸೇರ್ಪಡೆಗೊಂಡಿದೆ. ಈಗ ಮೈಸೂರನ್ನು ಈ ಯೋಜನೆಗೆ ಸೇರಿಸಲು ಮೈಸೂರು–ಕೊಡಗು ಲೋಕಸಭಾ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಸಲ್ಲಿಸಿದ್ದು ಭರವಸೆ ದೊರೆತಿರುವುದು ತುಂಬ ಶ್ಲಾಘನೀಯ.

ಈ ಯೋಜನೆಯಿಂದ ಪ್ರತಿ ವರ್ಷವೂ 5000 ಕೋಟಿ ಅನುದಾನ ಸಿಗಲಿದ್ದು ನಗರದ ಅಭಿವೃದ್ಧಿಗೋಸ್ಕರ ಬಳಸಲಾಗುವುದು. ಮೈಸೂರು ಈಗಾಗಲೇ ಶ್ರೀಮಂತ ಪರಂಪರೆ ಹಾಗೂ ಪರಿಸರವನ್ನು ಹೊಂದಿದ್ದು, ಅದನ್ನು ಗಮನದಲ್ಲಿ ಇಟ್ಟುಕೊಂಡು ನಗರದ ಅಭಿವೃದ್ಧಿಗೆ ಪೂರಕವಾಗುವ ನಿಟ್ಟಿನಲ್ಲಿ ಕ್ಷೇತ್ರದ ತಜ್ಞರು, ಮುಖಂಡರು, ವಾಸ್ತುಶಿಲ್ಪ ತಜ್ಞರು ಹಾಗೂ ಸಾರ್ವಜನಿಕರೊಂದಿಗೆ ಸಭೆ ನಡೆಸಿ ಅವರ ಸಲಹೆ, ಸೂಚನೆ, ಅಭಿಪ್ರಾಯ ಸಂಗ್ರಹಿಸಿ ಸೂಕ್ತ ಯೋಜನೆ ರೂಪಿಸಿ ಮೈಸೂರಿನ ಸಂಸ್ಕೃತಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುತ್ತೇವೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಹೇಳಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸುಂದರ ಬದುಕಿಗೆ ಲಕ್ಷದಷ್ಟೇ ಲಕ್ಷ್ಯವೂ ಮುಖ್ಯ...!

ಯೋಗಿ ತಂದದ್ದು ಯೋಗಿಗೆ, ಜೋಗಿ ತಂದದ್ದು ಜೋಗಿಗೆ ಎಂಬ ಗ್ರಾಮ್ಯ ಮಾತೊಂದಿದೆ. ಇದರ ಅರ್ಥ ಎಲ್ಲರ ಬದುಕು ಒಂದೇ ರೀತಿ ಇರುವುದಿಲ್ಲ. ಅವರವರ ಜೀವನ ಮಟ್ಟ ಅವರವರಿಗೆ ಇರುತ್ತದೆ ಎಂದು. ಪ್ರತಿಯೊಬ್ಬರು ತಮ್ಮ ಜೀವನಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ಪ್ರಯತ್ನಿಸುವುದು ಸಹಜ. ಅದನ್ನು ಜೀವನ ಪ್ರೀತಿ ಎನ್ನಬಹುದು. ಒಮ್ಮೆ ಯಾರದೋ ಮಾತಿಗೆ, ಯಾವುದೋ ಕಾರಣಕ್ಕೆ ವೈರಾಗ್ಯ ಮೂಡಿದರೆ ಜೀವನ ಒಂದು ಯಾತ್ರೆಯಾಗಿರದೆ ಯಾತನೆಯಾಗುವ ಸಾಧ್ಯತೆ ಇರುತ್ತದೆ. ಹಾಗೆಯೇ ಮತ್ತಾರದೋ ಮಾತಿನಿಂದ ನೆಮ್ಮದಿಯ ಜೀವನಕ್ಕೆ ಹಣವೇ ಮುಖ್ಯ ಎಂದು ಅನೇಕರು ನಂಬಿರುತ್ತಾರೆ. ಹೌದು, ಸುಖ ಜೀವನಕ್ಕೆ ಅಗತ್ಯವಿರುವಷ್ಟು ಹಣ ಬೇಕು. ಆದರೆ ಲಕ್ಷಾಂತರ ಹಣದಷ್ಟೆ ಜೀವನದ ಕುರಿತು ಲಕ್ಷ್ಯವೂ ಮುಖ್ಯ.

ಐಸ್‌ಕ್ರೀಂ ಪಾರ್ಲರ್‌ನಲ್ಲಿ ನೂರಾರು ರೂಪಾಯಿ ಕೊಟ್ಟು ಐಸ್‌ಕ್ರೀಂ ತಿನ್ನುವವರೆಲ್ಲಾ ಖುಷಿಯಿಂದ ಅನುಭವಿಸುತ್ತಾ ತಿನ್ನುತ್ತಾರೆ ಎಂದು ಹೇಳಲಾಗುವುದಿಲ್ಲ. ರಸ್ತೆಯಲ್ಲಿ ಸೈಕಲ್‌ನಲ್ಲಿ ಮಾರಾಟ ಮಾಡುವ ಹತ್ತು ರೂಪಾಯಿ ಐಸ್‌ಕ್ರೀಂ ಸವಿಯುವ ಮಕ್ಕಳು ಖುಷಿ ಅನುಭವಿಸುವುದಿಲ್ಲ ಎಂದು ಹೇಳಲಾಗುವುದಿಲ್ಲ. ದುಬಾರಿ ವಸ್ತುಗಳು, ಐಷಾರಾಮದ ಜೀವನ ಮನುಷ್ಯನಿಗೆ ಖುಷಿ ಕೊಡುತ್ತವೆ ಎಂದು ನಂಬಲಾಗಿದೆ. ಆದರೆ ಇವುಗಳು ಅನೇಕ ರೀತಿಯಲ್ಲಿ ಒತ್ತಡವನ್ನು ನಿರ್ಮಾಣ ಮಾಡುತ್ತವೆ.

ಬಡವರಿಗೆ ಆರ್ಥಿಕ ಸಮಸ್ಯೆಯ ಒತ್ತಡವಿರುವಂತೆ ಹಣ, ಆಸ್ತಿ, ಅಂತಸ್ತು, ಅಧಿಕಾರ ಹೊಂದಿರುವವರಿಗೂ ಬಹು ಬಗೆಯ ಒತ್ತಡವಿರುತ್ತದೆ. ಅನೇಕರಿಗೆ ಸರ್ಕಾರಿ ಕೆಲಸ ಗಿಟ್ಟಿಸಬೇಕೆಂಬ ಕನಸಿರುತ್ತದೆ. ಆದರೆ ಸರ್ಕಾರಿ ಕೆಲಸ ಗಿಟ್ಟಿಸಿರುವ ಅನೇಕರು ನಾನಾ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಿದೆ. ಹಾಗಾಗಿ ಬದುಕಿನಲ್ಲಿ ಲಕ್ಷ ರೂಪಾಯಿ ಇದ್ದ ಕಾರಣಕ್ಕೆ ಸುಖಮಯವಾಗಿರುತ್ತೆ ಎಂದು ಹೇಳಲಾಗದು, ಬದುಕಿನ ಕುರಿತು ಸರಿಯಾದ ಲಕ್ಷ್ಯವಿಲ್ಲದಿದ್ದರೆ ಸುಖ ಮಾಯವಾಗಿಬಿಡಬಹುದು.

ಎಷ್ಟೋ ಸಂದರ್ಭಗಳಲ್ಲಿ ಬಾಡಿಗೆಗೆ ಕಾರು ತೆಗೆದುಕೊಂಡವರು ಪ್ರಯಾಣದ ಸುಖ ಅನುಭವಿಸುವ ಖುಷಿಯನ್ನು ಸ್ವಂತ ಕಾರು ಹೊಂದಿರುವವರು ಅನುಭವಿಸುತ್ತಾರೆ ಎಂದು ಹೇಳಲಾಗದು. ದಿನನಿತ್ಯವೂ ಅನೇಕ ಕೆಲಸಗಳನ್ನು ಹುಮ್ಮಸ್ಸು, ಸಡಗರ, ಸಂಭ್ರಮದಿಂದ ಮಾಡಬಹುದಾಗಿರುತ್ತದೆ. ಆದರೆ ಅನೇಕರು ಅದನ್ನು ಯಾಂತ್ರಿಕವಾಗಿ ಮಾಡಿ ಅದರಲ್ಲಿ ಸಿಗುವ ಆನಂದವನ್ನೇ ಮಿಸ್ ಮಾಡಿಕೊಳ್ಳುತ್ತಾರೆ. ಖುಷಿ ಪಡಲು ಅನೇಕ ಕಾರಣಗಳಿದ್ದರೂ, ದುಃಖ ಪಡಲು ಇರುವ ನೆಪಗಳಿಂದ ಬದುಕನ್ನು ಸುಂದರವಾಗಿಸಿಕೊಳ್ಳುವ ಬದಲು ಅನೇಕರು ನರಕ ಮಾಡಿಕೊಳ್ಳುತ್ತಾರೆ. ವಿನಾ ಕಾರಣ ಮುನಿಸು, ಆತಂಕ, ಒತ್ತಡ ಅನುಭವಿಸುತ್ತಾ ಆ ಕ್ಷಣದ ಸುಖವನ್ನು ಕಳೆದುಕೊಂಡು ಪಶ್ಚಾತ್ತಾಪ ಪಡುತ್ತಾರೆ.

ಶ್ರೀಮಂತರ ಬಂಗಲೆಗಳಲ್ಲಿ ಮನೆಯ ಮಾಲೀಕರಿಗಿಂತ ಅಲ್ಲಿನ ಕೆಲಸದವರೇ ಸುಖ ನಿದ್ರೆ ಅನುಭವಿಸುತ್ತಾರೆ ಎನ್ನಬಹುದು. ಲಕ್ಷ ರೂಪಾಯಿ ಕೊಟ್ಟು ತಂದ ಮಂಚದ ಮೇಲೆ ವಿವಿಧ ಬಗೆಯ ಒತ್ತಡದಿಂದ ಸಕಾಲದಲ್ಲಿ ನಿದ್ರೆ ಬರದೆ ಒದ್ದಾಡುವ ಸಮಯದಲ್ಲಿ ದಿನದ ಕೆಲಸದಿಂದ ದಣಿದ ಕೆಲಸದವರು ಚಾಪೆಯ ಮೇಲೆ ಸುಖ ನಿದ್ರೆಯನ್ನು ಅನುಭವಿಸುತ್ತಿರುತ್ತಾರೆ. ಹಣ ಕೊಟ್ಟು ಮಂಚ–ಹಾಸಿಗೆ ಕೊಳ್ಳಬಹುದು, ಸುಖನಿದ್ರೆಯನ್ನು ಕೊಳ್ಳಲಾದೀತೆ? ಅನೇಕ ಸಿರಿವಂತರು ಊಟವಾದ ಮೇಲೆ ಜೀರ್ಣವಾಗಲು ಔಷಧಿ ತೆಗೆದುಕೊಳ್ಳುವಂತೆ, ನಿದ್ರಿಸಲು ಸಹ ಮಾತ್ರೆ ತೆಗೆದುಕೊಳ್ಳುತ್ತಿರುವುದು ವಿಪರ್ಯಾಸ.

ಮನುಷ್ಯನಿಗೆ ಎಷ್ಟೇ ಸೌಕರ್ಯ, ಸವಲತ್ತುಗಳಿದ್ದರೂ ತೃಪ್ತಿ ಎಂಬುದಿರುವುದಿಲ್ಲ. ಒಂದಷ್ಟು ಸಿಕ್ಕಾಗ ಮತ್ತಷ್ಟಕ್ಕೆ ಆಸೆ ಪಡುತ್ತಿರುತ್ತಾನೆ. ಮತ್ತಷ್ಟು ಸಿಕ್ಕಾಗ ಮಗದಷ್ಟಕ್ಕೆ ದುರಾಸೆ ಪಡುತ್ತಾನೆ. ಅವನ ಅಗತ್ಯಗಳು ತಳವಿಲ್ಲದ ಬಾವಿಯಂತೆ ಇರುತ್ತದೆ. ಎಷ್ಟೇ ತುಂಬಿದರೂ ಸಮಾಧಾನ, ಸಂತೃಪ್ತಿ ಎಂಬುದಿರುವುದಿಲ್ಲ. ಕೆಲವರಿಗೆ ಗಳಿಸುವುದರಿಂದಲೇ ಸುಖ, ನೆಮ್ಮದಿ ದೊರಕುತ್ತದೆ ಎಂದು ನಂಬುತ್ತಾರೆ. ಗಳಿಸುವುದರಿಂದ, ಉಳಿಸುವುದರಿಂದಷ್ಟೇ ನೆಮ್ಮದಿ ದೊರಕುವುದಿಲ್ಲ. ಒಂದಷ್ಟನ್ನು ಇತರರಿಗೆ ನೀಡುವುದರಿಂದಲೂ ಸಮಾಧಾನ ಹಾಗೂ ನೆಮ್ಮದಿ ದೊರಕುತ್ತದೆ. ಈ ಅನುಭವ ಅನೇಕರಿಗೆ ಆಗಿರುವುದಿಲ್ಲ. ಎಲ್ಲದಕ್ಕೂ ಒಂದು ಮಿತಿ ಇರುವಂತೆ ಅಗತ್ಯಗಳಿಗೂ ಒಂದು ಮಿತಿ ಹೇರಿಕೊಳ್ಳಬೇಕು. ಇಲ್ಲವಾದಲ್ಲಿ ಎಷ್ಟೇ ಇದ್ದರೂ, ಏನೇ ಇದ್ದರೂ ಕೊರತೆ ಎಂಬುದು ಕಾಡುತ್ತಲೇ ಇರುತ್ತದೆ. ಅದರಿಂದ ಅಶಾಂತಿ, ಅತೃಪ್ತಿ ಉಂಟಾಗುತ್ತಿರುತ್ತದೆ. ಬದುಕಿನ ಮೇಲೆ ಪ್ರೀತಿ ಕಡಿಮೆಯಾಗುತ್ತಾ ಹೋಗುತ್ತದೆ.



> ಮನುಷ್ಯನಿಗೆ ಲಕ್ಷ ಹಣವಿದ್ದಾಕ್ಷಣ ಬದುಕು ಸುಂದರವಾಗಿರುತ್ತದೆ ಎನ್ನಲಾಗದು. ಬದುಕಿನ ಕುರಿತು ಲಕ್ಷ್ಯವಿರಬೇಕು. ಶಿಸ್ತುಬದ್ಧ ಜೀವನಶೈಲಿ ಹೊಂದಬೇಕು, ಆರೋಗ್ಯದ ಬಗ್ಗೆ ಕಾಳಜಿ ಇರಬೇಕು, ಜೀವನ ಪ್ರೀತಿ ಇರಬೇಕು, ಹಣ ಹಾಗೂ ಕೀರ್ತಿ ಹೆಚ್ಚಾದಾಗ ಸಂಯಮದಿಂದ ವರ್ತಿಸಬೇಕು, ಬಂಧುಬಳಗ–ಸ್ನೇಹಿತರೊಂದಿಗೆ ಆರೋಗ್ಯಕರ ಬಾಂಧವ್ಯ ಹೊಂದಿರಬೇಕು. ಕುಟುಂಬಕ್ಕೆ ಹೆಚ್ಚು ಸಮಯ ಹಾಗೂ ಪ್ರಾಶಸ್ತ್ಯ ಕೊಡಬೇಕು. ಪುಸ್ತಕ ಓದುವ ಹವ್ಯಾಸವಿರಬೇಕು, ಅವಕಾಶವಾದಾಗ ಪ್ರವಾಸಕ್ಕೆ ತೆರಳಬೇಕು ಅಂದರೆ ದೇಶ ಸುತ್ತಬೇಕು, ಕೋಶ ಓದಬೇಕು. ಬದುಕಿನಲ್ಲಿ ವೈರಾಗ್ಯವೂ ಇರಬಾರದು, ಸ್ವೇಚ್ಛಾಚಾರವೂ ಇರಬಾರದು. ಸಕಲವನ್ನು ಸಮಪ್ರಮಾಣದಲ್ಲಿ ಪರಿಗಣಿಸುವ ಗುಣವಿರಬೇಕು. ಹಣ ಹೆಚ್ಚಾದಾಗ ಮೆರೆಯಬಾರದು, ಕಡಿಮೆಯಾದಾಗ ಕೊರಗಬಾರದು. ಅಂತಿಮವಾಗಿ ಯಾವುದೂ ಶಾಶ್ವತವಲ್ಲ ಎಂಬ ಅರಿವಿರಬೇಕು.

ಮನುಷ್ಯನಿಗೆ ಕೀರ್ತಿ ಶನಿ ಹೆಗಲಿಗೆ ಏರಿದರೆ ನೆಮ್ಮದಿ ಮರೀಚಿಕೆಯಾಗಿಬಿಡುತ್ತದೆ. ಖ್ಯಾತಿ ಪಡೆಯಬೇಕು, ಹೆಸರುವಾಸಿಯಾಗಬೇಕು, ನಾನು ಸಮಾಜದಲ್ಲಿ ಗುರುತಿಸಿಕೊಳ್ಳಬೇಕು, ವಿಐಪಿಯಂತೆ ಮೆರೆಯಬೇಕು, ನನ್ನ ಯಶಸ್ಸು ಎಲ್ಲರಿಗೂ ತಿಳಿಯಬೇಕು ಎಂದು ಬಯಸುವವರು ವಾಸ್ತವದಲ್ಲಿ ಒತ್ತಡದಲ್ಲಿ ಇರುತ್ತಾರೆ. ಸದಾ ಇತರರನ್ನು ಮೆಚ್ಚಿಸುವ ಹುಚ್ಚು ಅವರಿಗೆ ಇರುತ್ತದೆ. ಕೀರ್ತಿಗಾಗಿ ಏನೆಲ್ಲಾ ಕೆಲಸಗಳನ್ನು ಮಾಡುತ್ತಿರುತ್ತಾರೆ. ಕೊನೆಗೆ ತಮಗಾಗಿ ಬದುಕದೆ ಇತರರಿಗಾಗಿ ಬದುಕಲು ಪ್ರಾರಂಭಿಸುತ್ತಾರೆ. ಯಾವಾಗ ಇತರರಿಗಾಗಿ ಬದುಕಲು ಪ್ರಾರಂಭಿಸುತ್ತಾರೆಯೋ ಜೀವನ ನಿರರ್ಥಕವಾಗಿಬಿಡುತ್ತದೆ. ಅವರ ಬದುಕಿನ ಉದ್ದೇಶವೇ ಬದಲಾಗುತ್ತಾ ಹೋಗುತ್ತದೆ. ಒಮ್ಮೆ ದಕ್ಕಿದ ಯಶಸ್ಸನ್ನು ಉಳಿಸಿಕೊಳ್ಳುವ ಒತ್ತಡದಲ್ಲಿರುತ್ತಾರೆ. ಅಂತಹವರಿಗೆ ಚಿತೆ ಏರುವವರೆವಿಗೂ ಚಿಂತೆ ಕಾಡುತ್ತಲೇ ಇರುತ್ತದೆ. ಅಥವಾ ಚಿಂತೆಯೇ ಅವರಿಗೆ ಬೇಗ ಚಿತೆ ಏರುವಂತೆ ಮಾಡಿಬಿಡುತ್ತದೆ.

ಮನುಷ್ಯನಿಗೆ ಅನೇಕ ಬಾರಿ ವೈರಾಗ್ಯ ಮೂಡುತ್ತಿರುತ್ತದೆ. ಸಿರಿವಂತರು ಅಕಾಲ ಮೃತ್ಯುವಿಗೆ ಒಳಗಾದಾಗ, ಶಕ್ತಿಶಾಲಿಗೆ ಸೋಲುಂಟಾದಾಗ, ಯಾರಾದರೂ ಯೋಗಿಗಳ ಪ್ರವಚನ ಕೇಳಿದಾಗ ವೈರಾಗ್ಯ ಉಂಟಾಗುತ್ತದೆ. ಆ ವೈರಾಗ್ಯ ಕ್ಷಣಿಕವಾಗಿರಬೇಕು. ಏಕೆಂದರೆ ಎಲ್ಲದಕ್ಕಿಂತ ಜೀವನ ಮುಖ್ಯ. ಸರಳ ಜೀವನ ಎನ್ನುವ, ಹಣ ಗಳಿಕೆಯಿಂದ ಏನು ಸುಖವಿಲ್ಲ ಎಂದು ಹೇಳುವ ಯೋಗಿಗಳು ಐಷಾರಾಮದ ಜೀವನ ನಡೆಸುತ್ತಿರುತ್ತಾರೆ. ಹಾಗಾಗಿ ಬದುಕಿಗೆ ಅಗತ್ಯವಿರುವಷ್ಟು ಹಣವನ್ನು ಗಳಿಸಬೇಕು. ಹೊಟ್ಟೆ ತುಂಬಿದಾಗಲೇ ಉಪನ್ಯಾಸವನ್ನು ನೆಮ್ಮದಿಯಾಗಿ ಆಲಿಸಲು ಸಾಧ್ಯ. ಹಾಗಾಗಿ ಬದುಕಿನ ಉದ್ದೇಶಗಳಲ್ಲಿ ಅಗತ್ಯವಿರುವಷ್ಟು ಹಣ ಗಳಿಸಬೇಕು ಎಂಬುದು ಇರಬೇಕು. ಅತಿಯಾದ ಹಣ ನಿದ್ರೆಗೆಡಿಸುವುದು ನಿಜ, ಹಾಗಂದ ಮಾತ್ರಕ್ಕೆ ಹಣವೇ ಇಲ್ಲದಿದ್ದರೆ ಅದರಿಂದಲೂ ನಿದ್ರೆಗೆಡಬೇಕಾಗುತ್ತದೆ. ಹಾಗಾಗಿ ಉತ್ತಮ ಮಾರ್ಗದಲ್ಲಿ ಹಣ ಗಳಿಸಬೇಕು, ಮಲಗಿದ ತಕ್ಷಣ ನಿರುಮ್ಮಳವಾಗಿ ನಿದ್ರಿಸುವಷ್ಟು ಹಣವಿರಬೇಕು. ಒಳ್ಳೆ ಮಾರ್ಗದಲ್ಲಿ ಹಣ ಗಳಿಸಿದರೆ ಖಂಡಿತಾ ನಿದ್ರೆ ಬರುತ್ತದೆ.

ಎಷ್ಟೋ ಜನರು ನಮಗೆ ಕೋಟಿ ರೂಪಾಯಿಯಷ್ಟು ಹಣ ಲಾಟರಿಯಲ್ಲಿ ಸಿಕ್ಕರೆ ನೆಮ್ಮದಿಯಾಗಿ ಬದುಕಬಹುದು ಎಂಬ ಭ್ರಮೆಯಲ್ಲಿರುತ್ತಾರೆ. ಎಷ್ಟೋ ಜನರಿಗೆ ಹಣವಾಗಲಿ, ಖ್ಯಾತಿಯಾಗಲಿ ದಿಢೀರನೆ ಸಿಕ್ಕರೆ ಅದನ್ನು ನಿರ್ವಹಿಸುವಲ್ಲಿ ಸೋಲುತ್ತಾರೆ ಎಂಬುದಕ್ಕೆ 'ಕೌನ್ ಬನೇಗಾ ಕರೋಡ್‌ಪತಿ' ಐದನೇ ಸೀಸನ್‌ನ ವಿನ್ನರ್ ಶ್ರೀ ಸುಶೀಲ್‌ಕುಮಾರ್ ಎಂಬುವವರ ಉದಾಹರಣೆ ನೀಡಬಹುದು. ಖ್ಯಾತ ಚಿತ್ರನಟ ಅಮಿತಾಭ್ ಬಚ್ಚನ್ ನಡೆಸಿಕೊಡುವ 'ಕೌನ್ ಬನೇಗಾ ಕರೋಡ್‌ಪತಿ' ಕ್ವಿಜ್ ಕಾರ್ಯಕ್ರಮದಲ್ಲಿ 2011ರಲ್ಲಿ ಐದು ಕೋಟಿ ರೂಪಾಯಿಯನ್ನು ಬಹುಮಾನವಾಗಿ ಗಳಿಸುತ್ತಾರೆ ಸುಶೀಲ್‌ಕುಮಾರ್ ಅವರು. ಬಿಹಾರ ರಾಜ್ಯದವರಾದ ಸುಶೀಲ್ ವೃತ್ತಿಯಲ್ಲಿ ಒಬ್ಬರು ಕಂಪ್ಯೂಟರ್ ಆಪರೇಟರ್ ಕಮ್ ಶಿಕ್ಷಕರಾಗಿರುತ್ತಾರೆ. ಅವರಿಗೆ ಇಷ್ಟು ದೊಡ್ಡ ಮೊತ್ತ ಬಹುಮಾನವಾಗಿ ಬಂದಾಗ ಅವರ ಬಂಧುಮಿತ್ರರು ಸುಶೀಲ್ ಅವರ ಜೀವನ ಸುಖದ ಪ್ರಯಾಣ ಎಂದು ಭಾವಿಸಿರುತ್ತಾರೆ. ಆದರೆ ದಿಢೀರನೆ ಗಳಿಸಿದ ಹಣವನ್ನು ಸಮರ್ಪಕವಾಗಿ ನಿರ್ವಹಿಸಲು ಬರದ ಸುಶೀಲ್ ಅವರು ಎಲ್ಲೆಲ್ಲೋ ಬಂಡವಾಳ ಹೂಡಿಕೆ ಮಾಡಿ ನಷ್ಟ ಮಾಡಿಕೊಳ್ಳುತ್ತಾರೆ. ಅವರ ಬಂಧುಗಳು ಸಾಲ ಕೇಳಿದಾಗ ಅವರಿಗೆ ಕೊಡದೆ ಕೆಟ್ಟವರಾಗುತ್ತಾರೆ. ಒಂದು ಹಂತದಲ್ಲಿ ಸುಶೀಲ್ ಸಾಲಗಾರರಾದ ಕಾರಣಕ್ಕೆ ಅವರ ಮಡದಿ ಅವರನ್ನು ತೊರೆದು ಹೋಗುತ್ತಾರೆ. ಅವರು ಮದ್ಯವ್ಯಸನಿಯಾಗುತ್ತಾರೆ. ಕಾಲಾ ನಂತರ ಸುಧಾರಿಸಿಕೊಂಡು ಮತ್ತೆ ಅವರ ಮೂಲ ವೃತ್ತಿಯಾದ ಕಂಪ್ಯೂಟರ್ ಆಪರೇಟರ್ ಆಗಿ ಈಗ ಕೆಲಸ ನಿರ್ವಹಿಸುತ್ತಿದ್ದಾರೆ.

ಇದೇ ರೀತಿ ಕ್ರಿಕೆಟ್ ರಂಗದಲ್ಲಿ ಸಚಿನ್ ತೆಂಡೂಲ್ಕರ್ ಅವರೊಂದಿಗೆ ಸರಿಸಾಟಿಯಾಗಿ ಇದ್ದ ವಿನೋದ್ ಕಾಂಬ್ಳಿ ಒಂದೊಳ್ಳೆ ಉದಾಹರಣೆಯಾಗುತ್ತಾರೆ. ಉತ್ತಮ ಎಡಗೈ ಬ್ಯಾಟ್ಸ್‌ಮನ್ ಆಗಿದ್ದ ಅವರು ಸಚಿನ್ ಅವರಿಗೆ ಸರಿಗಟ್ಟುವ ಕೌಶಲ್ಯವನ್ನು ಹೊಂದಿದ್ದರು. ಉತ್ತಮವಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಯಾನ ಪ್ರಾರಂಭವಾಯಿತು. ಹಣ ಹಾಗೂ ಕೀರ್ತಿ ಬಹುಬೇಗ ಬಂದಿತು. ಆದರೆ ಸಚಿನ್ ತೆಂಡೂಲ್ಕರ್ ಅವರಂತೆ ಶಿಸ್ತುಬದ್ಧ ಜೀವನ ಹೊಂದಿರದ ಕಾರಣ, ಸಂಯಮ ಇರದಿದ್ದ ಕಾರಣ ಅನೇಕ ದುಶ್ಚಟಗಳಿಗೆ ಬಲಿಯಾಗಿ, ಬಹುಬೇಗ ತಮ್ಮ ಕ್ರಿಕೆಟ್ ವೃತ್ತಿಯಿಂದ ನಿವೃತ್ತಿಯಾಗಿ ಇಂದು ಆರೋಗ್ಯವೂ ಇಲ್ಲದೆ, ಶೋಚನೀಯ ಬದುಕನ್ನು ನಡೆಸುತ್ತಿದ್ದಾರೆ.

ಹಾಗಾಗಿ ಮನುಷ್ಯನಿಗೆ ಲಕ್ಷ ಹಣವಿದ್ದಾಕ್ಷಣ ಬದುಕು ಸುಂದರವಾಗಿರುತ್ತದೆ ಎನ್ನಲಾಗದು. ಬದುಕಿನ ಕುರಿತು ಲಕ್ಷ್ಯವಿರಬೇಕು. ಶಿಸ್ತುಬದ್ಧ ಜೀವನಶೈಲಿ ಹೊಂದಬೇಕು, ಆರೋಗ್ಯದ ಬಗ್ಗೆ ಕಾಳಜಿ ಇರಬೇಕು, ಜೀವನ ಪ್ರೀತಿ ಇರಬೇಕು, ಹಣ ಹಾಗೂ ಕೀರ್ತಿ ಹೆಚ್ಚಾದಾಗ ಸಂಯಮದಿಂದ ವರ್ತಿಸಬೇಕು, ಬಂಧುಬಳಗ–ಸ್ನೇಹಿತರೊಂದಿಗೆ ಆರೋಗ್ಯಕರ ಬಾಂಧವ್ಯ ಹೊಂದಿರಬೇಕು. ಕುಟುಂಬಕ್ಕೆ ಹೆಚ್ಚು ಸಮಯ ಹಾಗೂ ಪ್ರಾಶಸ್ತ್ಯ ಕೊಡಬೇಕು. ಪುಸ್ತಕ ಓದುವ ಹವ್ಯಾಸವಿರಬೇಕು, ಅವಕಾಶವಾದಾಗ ಪ್ರವಾಸಕ್ಕೆ ತೆರಳಬೇಕು ಅಂದರೆ ದೇಶ ಸುತ್ತಬೇಕು, ಕೋಶ ಓದಬೇಕು. ಬದುಕಿನಲ್ಲಿ ವೈರಾಗ್ಯವೂ ಇರಬಾರದು, ಸ್ವೇಚ್ಛಾಚಾರವೂ ಇರಬಾರದು. ಸಕಲವನ್ನು ಸಮಪ್ರಮಾಣದಲ್ಲಿ ಪರಿಗಣಿಸುವ ಗುಣವಿರಬೇಕು. ಹಣ ಹೆಚ್ಚಾದಾಗ ಮೆರೆಯಬಾರದು, ಕಡಿಮೆಯಾದಾಗ ಕೊರಗಬಾರದು. ಅಂತಿಮವಾಗಿ ಯಾವುದೂ ಶಾಶ್ವತವಲ್ಲ ಎಂಬ ಅರಿವಿರಬೇಕು.

ಹೂರಣ: ಹಣವಂತನಷ್ಟೇ ಗುಣವಂತನಿಗೂ ಬದುಕು ಸುಂದರವಾಗಿರುತ್ತದೆ !

ಧರ್ಮದ ಪರಿಪಾಲನೆಯಿಂದ ಶ್ರೇಯಸ್ಸು, ಮುಕ್ತಿ ದೊರೆಯುತ್ತದೆ



ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಸಭಾಂಗಣದಲ್ಲಿ ಡಿವಿಜಿ ಬಳಗ ಪ್ರತಿಷ್ಠಾನದಿಂದ ಖ್ಯಾತ ಸಾಹಿತಿ ಡಿ.ವಿ.ಗುಂಡಪ್ಪ (ಡಿವಿಜಿ) ಅವರ ಮೊಮ್ಮಗ ಕೆ.ನಟರಾಜನ್ ಅವರಿಗೆ ಡಿವಿಜಿ ಪ್ರಶಸ್ತಿ ಹಾಗೂ ಬಿಜಿಎಲ್ ಸ್ವಾಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಟರಾಜನ್ ಅವರ ಪತ್ನಿ ಜ್ಯೋತಿ ಅವರನ್ನು ಈ ವೇಳೆ ಅಭಿನಂದಿಸಲಾಯಿತು.

ಮೈಸೂರು, ಮಾ.22(ಬಿಎಲ್‌ಯು)– ಧರ್ಮದ ಪರಿಪಾಲನೆಯಿಂದ ಶ್ರೇಯಸ್ಸು ಹಾಗೂ ಮುಕ್ತಿ ದೊರೆಯುತ್ತದೆ ಎಂದು ಖ್ಯಾತ ಸಾಹಿತಿ ಡಿ.ವಿ.ಗುಂಡಪ್ಪ (ಡಿವಿಜಿ) ಅವರ ಮೊಮ್ಮಗನೂ ಆದ ಮಂಕುತಿಮ್ಮನ ಕಗ್ಗದ ಆಂಗ್ಲ ಅನುವಾದಕ ಕೆ.ನಟರಾಜನ್ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಸಭಾಂಗಣದಲ್ಲಿ ಭಾನುವಾರ ಡಿವಿಜಿ ಬಳಗ ಪ್ರತಿಷ್ಠಾನದಿಂದ ಡಿವಿಜಿ ಪ್ರಶಸ್ತಿ ಹಾಗೂ ಬಿಜಿಎಲ್ ಸ್ವಾಮಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಸತ್ತ ನಂತರ ಮುಕ್ತಿ ದೊರೆಯುತ್ತದೆ ಎನ್ನುವುದು ತಪ್ಪು. ನಮ್ಮ ಜೀವನದ ಪಯಣದ ಅನುಭವವೇ ಮುಕ್ತಿಯಾಗಿರುತ್ತದೆ. ಈ ವಿಚಾರದ ಬಗ್ಗೆ ಡಿ.ವಿ.ಗುಂಡಪ್ಪನವರು ಬೆಳಕು ಚೆಲ್ಲಿದ್ದಾರೆ ಎಂದು ಹೇಳಿದರು.

ಮನುಷ್ಯನಿಗೆ ಕರ್ಮ ಬಹಳ ಮುಖ್ಯ. ಉತ್ತಮ ಕರ್ಮದ ಹಾದಿಯಲ್ಲಿ ಸಾಗಿದರೆ ಅದೇ ಧರ್ಮವಾಗುತ್ತದೆ. ಆಡಂಬರವಿಲ್ಲದ ಸರಳತೆಯೇ ಕರ್ಮದ ಪರಿಕಲ್ಪನೆಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ಮದ ಮೂಲಕ ಧರ್ಮವನ್ನು ಪರಿಪಾಲನೆ ಮಾಡಬೇಕು ಎಂದು ನಟರಾಜನ್ ಅವರು ಧರ್ಮ ಹಾಗೂ ಕರ್ಮವನ್ನು ವ್ಯಾಖ್ಯಾನಿಸಿದರು.

ಮನುಷ್ಯನಿಗೆ ಕರ್ಮದ ಅನಿವಾರ್ಯತೆ ಇರಬೇಕು, ಕರ್ಮ ಮಾಡಿದ ತಕ್ಷಣ ಫಲ ಸಿಗುತ್ತದೆ ಎಂಬ ಖಚಿತವಾದ ಅಪೇಕ್ಷೆ ಇರಬಾರದು. ನಮ್ಮ ಕರ್ಮವನ್ನು ನಾವು ಪ್ರಾಮಾಣಿಕತೆಯಿಂದ ಮಾಡಿದರೆ ಫಲಾಪೇಕ್ಷೆ ಭವಿಷ್ಯದ ದಿನಗಳಿಗೆ ಬಿಟ್ಟಿದ್ದು, ಫಲ ಲಭಿಸಲೆಂದೆ ಕರ್ಮ ಮಾಡಬಾರದು ಎಂದು ತಿಳಿಸಿದರು.

ಉದಾಹರಣೆಗೆ ಸನ್ಯಾಸಿಗಳು ಕರ್ಮದ ಹಾದಿಯಲ್ಲಿ ಸಾಗುತ್ತಾರೆ, ಆದರೆ ಅವರು ಎಂದೂ ಯಾರಿಂದ, ಏನನ್ನೂ ನಿರೀಕ್ಷೆ ಮಾಡುವುದಿಲ್ಲ. ಜ್ಞಾನ ಯೋಗ ಹಾಗೂ ಕರ್ಮ ಯೋಗ ಜೀವನದಲ್ಲಿ ಪ್ರಮುಖವಾಗಿದೆ. ಆದರೆ ಅದರಿಂದ ನಿರೀಕ್ಷೆ ಮಾಡಬಾರದು ಎಂದು ಪುನರುಚ್ಚರಿಸಿದರು.

ನನ್ನ ಬರಹಕ್ಕೆ ನಮ್ಮ ತಾತನೆ ಪ್ರೇರಣೆ.

ಡಿವಿಜಿ ಮೊಮ್ಮಗ ನಟರಾಜನ್ ಅಭಿಪ್ರಾಯ

ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ಸೇರಿದಂತೆ ಹಲವು ಪುಸ್ತಕಗಳನ್ನು ನನ್ನ ಕೈಗಿಟ್ಟು ಓದಲು ಉತ್ತೇಜನ ನೀಡಿದರು. ನನ್ನ ತಾತ ಡಿವಿಜಿ ಅವರು ನೀಡಿದ ಪುಸ್ತಕಗಳಲ್ಲಿ ಮ್ಯಾಕ್ ಬೆತ್ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತು ಎಂದು ನಟರಾಜನ್ ಅವರು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಈ ವೇಳೆ ಮಾತನಾಡಿದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿವೃತ್ತ ತಾಂತ್ರಿಕ ನಿರ್ದೇಶಕ ಎಸ್.ಟಿ.ರಾಧಾಕೃಷ್ಣ ಅವರು ಮಾತನಾಡಿ, ಪ್ರಶಸ್ತಿ ಪುರಸ್ಕೃತರಾದ ನಟರಾಜನ್ ಅವರು ಸರಳತೆ, ತಾಳ್ಮೆ ಹಾಗೂ ಸಹನೆಗೆ ಹೆಸರುವಾಸಿಯಾಗಿದ್ದಾರೆ. ಘನತೆ, ಗಾಂಭೀರ್ಯತೆ ಅವರ ವ್ಯಕ್ತಿತ್ವದ ವೈಶಿಷ್ಟ್ಯತೆಯಾಗಿದೆ. ಎಂದೂ ಕೋಪ ಮಾಡಿಕೊಳ್ಳದ, ಕೆಟ್ಟ ಪದ ಪ್ರಯೋಗಿಸದ ನಟರಾಜನ್ ಅವರು ಹಸನ್ಮುಖಿ ಹಾಗೂ ಮಿತಭಾಷಿಯಾಗಿದ್ದಾರೆ ಎಂದು ಹೇಳಿದರು.

ಬಳ್ಳಾರಿಯ ಶ್ರೀ ರಾಮಕೃಷ್ಣ ವಿವೇಕಾನಂದ ಕೇಂದ್ರದ ಅಧ್ಯಕ್ಷ ಸ್ವಾಮಿ ಮಂಗಳನಾಥಾನಂದಜಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಲಹೆಗಾರ ಡಾ.ಎಂ.ಆರ್.ಸೀತಾರಾಂ, ಡಿವಿಜಿ ಬಳಗ ಪ್ರತಿಷ್ಠಾನದ ಸಂಸ್ಥಾಪಕ ಸಿ.ಕನಕರಾಜು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಏ.3ರಿಂದ 24ರವರೆಗೆ ಎಳೆಯರ ಮೇಳ

ಮೈಸೂರು, ಮಾ. 22–ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಎಳೆಯರ ಮೇಳ–2026 ಬೇಸಿಗೆ ಶಿಬಿರವನ್ನು ಏಪ್ರಿಲ್ 3ರಿಂದ 24ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ.

8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಭಾಗವಹಿಸಲು ಅವಕಾಶವಿರುತ್ತದೆ. ಇದೇ ತಿಂಗಳ 20ರಿಂದ ಅರ್ಜಿಗಳನ್ನು ವಿತರಿಸಲಾಗುತ್ತದೆ.


ಮಕ್ಕಳ ಸುಪ್ತ ಪ್ರತಿಭೆಯ ಬೆಳವಣಿಗೆ ಮತ್ತು ಪ್ರದರ್ಶನಕ್ಕೆ ಇದೊಂದು ಉತ್ತಮ ವೇದಿಕೆ. ಶಿಬಿರದಲ್ಲಿ ರಂಗದಾಟಗಳು, ಬಣ್ಣದ ಕಲೆ, ಜೇಡಿಮಣ್ಣಿನ ಕಲೆ, ಕಾಳುಗಳಿಂದ ಚಿತ್ರ ರಚನೆ, ಮಕ್ಕಳ ಸಂತೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಪವಾಡ ರಹಸ್ಯ ಬಯಲು, ಪೇಪರ್ ಕ್ರಾಫ್ಟ್, ಹಾಡು, ನೃತ್ಯ, ನಾಟಕಗಳು, ಗಣ್ಯ ವ್ಯಕ್ತಿಗಳೊಡನೆ ಸಂವಾದ ಮತ್ತು ಒಂದು ದಿನದ ಪ್ರವಾಸ, ಹೀಗೆ ಹತ್ತು ಹಲವು ಕಾರ್ಯಕ್ರಮಗಳಿರುತ್ತವೆ. ಶಿಬಿರದ ಕೊನೆಯ ದಿನ ಶಿಬಿರಾರ್ಥಿಗಳಿಂದ ಹಾಡು, ನೃತ್ಯ, ನಾಟಕಗಳ ಪ್ರದರ್ಶನಗಳಿರುತ್ತವೆ. ಹೆಚ್ಚಿನ ವಿವರಗಳಿಗೆ ಚಂದ್ರಶೇಖರಾಚಾರ್ (94487 39365), ಎಂ. ಗುರುಸ್ವಾಮಿ (99454 72541), ಮಂಜುನಾಥ (ಕಾಚಕ್ಕಿ) (91649 91992), ಶ್ರೀಮತಿ ಶಕುಂತಲಾ ಹೆಗಡೆ (86607 50218) ಹಾಗೂ ಬಿ. ಜೀವನ್‌ಕುಮಾರ್ (98801 01305) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೆಂಗಳೂರು, ಹೊರವಲಯದಲ್ಲಿ ಪ್ರತ್ಯೇಕ ಅಪಘಾತ: ಮೂವರು ಮಹಿಳೆಯರು ಸೇರಿ 7 ಮಂದಿ ದುರ್ಮರಣ

ಬೆಂಗಳೂರು: ಬೆಂಗಳೂರು ಹೊರವಲಯದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಮಹಿಳೆಯರು ಸೇರಿ 7 ಮಂದಿ ಸಾವನ್ನಪ್ಪಿದ್ದಾರೆ.

ಘಟನೆ 1: ದೇವನಹಳ್ಳಿ ರಾಣಿ ಕ್ರಾಸ್ ಬಳಿ ಶನಿವಾರ ಮಧ್ಯರಾತ್ರಿ ಹೈವೇಯಿಂದ ಸರ್ವೀಸ್ ರಸ್ತೆಗೆ ಬರುತ್ತಿದ್ದ ಟಿಟಿ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ವಾಹನದಲ್ಲಿದ್ದ 13 ಮಂದಿ ಪೈಕಿ ಜಯಮ್ಮ(60), ಯಶೋದಮ್ಮ (60) ಹಾಗೂ ಗಂಗಾ(38) ಅವರು ಮೃತಪಟ್ಟಿದ್ದು, ಟಿಟಿ ವಾಹನ ಚಾಲಕ ಸೇರಿದಂತೆ 8 ಜನ ಗಾಯಗೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಕೆಂಪಮ್ಮ ಎಂಬುವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.





ಸ್ತ್ರೀ ಶಕ್ತಿ ಸಂಘಟನೆ ಚೀಟಿ ಮೂಲಕ 15 ದಿನಗಳ ಪ್ರವಾಸಕ್ಕೆ ಹೊರಟಿದ್ದ ತಿಪಟೂರಿನ 12 ಜನರ ತಂಡ, ಇಂದು ಬೆಳಗ್ಗೆ 6 ಗಂಟೆಯ ವಿಮಾನದಲ್ಲಿ ಕಾಶಿಗೆ ಟಿಕೆಟ್ ಬುಕ್ ಮಾಡಿತ್ತು. ಹೀಗಾಗಿ ತಿಪಟೂರಿನಿಂದ ಕೆಂಪೇಗೌಡ ಏರ್ಪೋರ್ಟ್‌ಗೆ ಟಿಟಿ ವಾಹನದ ಮೂಲಕ ರಾತ್ರಿ 10 ಗಂಟೆ ಸುಮಾರಿಗೆ ಹೊರಟಿದ್ದರು. ಏರ್‌ಪೋರ್ಟ್‌ನ ಟರ್ಮಿನಲ್ ದಾರಿ ಸರಿಯಾಗಿ ತಿಳಿದಿರದ ಕಾರಣ ಗೂಗಲ್ ಮ್ಯಾಪ್ ಹಾಕಿಕೊಂಡು ಟಿಟಿ ಚಾಲಕ ವಾಹನ ಚಾಲನೆ ಮಾಡುತ್ತಿದ್ದ. ಅಪಘಾತ ನಡೆದ ಸ್ಥಳಕ್ಕೂ ಹಿಂದೆಯೇ ಸರ್ವೀಸ್ ರಸ್ತೆಗೆ ಮೊದಲ ಟರ್ನಿಂಗ್ ಇತ್ತು. ಆದರೆ ಅದು ಗೊತ್ತಾಗದೆ ಮುಂದೆ ಪಾಸ್ ಆಗಿದ್ದ ಟಿಟಿ ವಾಹನ ಮುಂದಿನ ಟರ್ನಿಂಗ್‌ನಲ್ಲಿ ಯೂಟರ್ನ್ ಪಡೆಯುವ ವೇಳೆ ಲಾರಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಟಿಟಿಯ ಎಡಭಾಗ ಸಂಪೂರ್ಣ ಜಖಂ ಆಗಿದ್ದು, ಸಿಂಗಲ್ ಸೀಟ್‌ಗಳಲ್ಲಿ ಕುಳಿತಿದ್ದ ಮೂವರು ಮಹಿಳೆಯರ ಮೃತಪಟ್ಟಿದ್ದಾರೆ.

ಘಟನೆ 2: ಕೆ.ಆರ್.ಪುರಂ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಮೇಡಹಳ್ಳಿ ಮೇಲ್ಸೇತುವೆ ಮೇಲೆ ಪಂಚರ್ ಆಗಿ ನಿಂತಿದ್ದ ಕ್ಯಾಂಟರ್ ವಾಹನಕ್ಕೆ ಟಾಟಾಏಸ್ ಡಿಕ್ಕಿ ಹೊಡೆದು ಮೂವರು ಯುವಕರು ಸಾವನ್ನಪ್ಪಿದ್ದಾರೆ. ವೈಟ್‌ಫೀಲ್ಡ್ ನಿವಾಸಿಗಳಾದ ಮಣಿಕಂಠ, ಸುರೇಶ್, ಶ್ರೀನಿವಾಸ್ ಮೃತರು. ಕೋಲಾರದಿಂದ ಬೆಂಗಳೂರಿಗೆ ಆಲೂಗಡ್ಡೆ ತುಂಬಿಸಿಕೊಂಡು ಬಂದಿದ್ದ ಕ್ಯಾಂಟರ್ ಪಂಚರ್ ಆಗಿ ಮೇಲ್ಸೇತುವೆಯಲ್ಲಿ ನಿಂತಿರುವುದನ್ನು ಟಾಟಾ ಏಸ್ ವಾಹನದ ಚಾಲಕ ಗಮನಿಸದೆ ಡಿಕ್ಕಿ ಹೊಡೆಸಿದ್ದು, ಇದರಲ್ಲಿದ್ದ ಮೂವರೂ ಸಾವನ್ನಪ್ಪಿದ್ದಾರೆ.

ಘಟನೆ 3: ಬೆಂಗಳೂರಿನ ಇಸ್ಕಾನ್ ಬಳಿ ಇರುವ ಕಮಲಮ್ಮನ ಗುಂಡಿ ಬಳಿ ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದು ನೆಲಕ್ಕುರುಳಿದ ಪರಿಣಾಮ 24 ವರ್ಷದ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅತಿಯಾದ ವೇಗದಿಂದ ನಿಯಂತ್ರಣ ಕಳೆದುಕೊಂಡು ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂದು ಒಳ ಮೀಸಲಾತಿ ವರದಿ ತಿರಸ್ಕಾರಕ್ಕೆ ಆಗ್ರಹಿಸಿ ಬೈಕ್ ರ್‍ಯಾಲಿ

ಮೈಸೂರು,ಮಾ.22(ಪಿಎಂ)– ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಒಳ ಮೀಸಲಾತಿ ವರದಿ ತಿರಸ್ಕರಿಸುವಂತೆ ಆಗ್ರಹಿಸಿ ಮಾ.23ರಂದು ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆ ಭಾಗವಾಗಿ ಸಾವಿರ ಬೈಕ್‌ಗಳ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿಸಿದರು.



ಭಾನುವಾರ ಸಂಜೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಾ.25ರಂದು ಬೆಂಗಳೂರಲ್ಲಿ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಯ ಪೂರ್ವಭಾಗಿಯಾಗಿ ಮೈಸೂರಿನಲ್ಲಿ ಹಮ್ಮಿಕೊಂಡಿರುವ ಹೋರಾಟದಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಮತ್ತು ಅಶೋಕಪುರಂ ದಲಿತ ಸಂಘಟನೆಗಳ ಸಹಯೋಗದಲ್ಲಿ ಬೈಕ್ ರ್‍ಯಾಲಿ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಾದ್ಯಂತ ದಲಿತ ಸಂಘಟನೆಗಳು, ಅಂಬೇಡ್ಕರ್ ಸಂಘಟನೆಗಳು, ಪಕ್ಷಾತೀತವಾಗಿ ವಿವಿಧ ಪಕ್ಷದ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದಾರೆ. ಸುಮಾರು 5 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ಬಲಗೈ ಸಮುದಾಯಕ್ಕೆ ಅನ್ಯಾಯವಾಗುವ ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಹೋರಾಟಕ್ಕೆ ಬಲಗೈ ಜನಾಂಗದವರು ಹೆಚ್ಚಿನ ಬೆಂಬಲ ನೀಡಬೇಕೆಂದು ಕೋರಿದರು.

ಮಾ.23ರಂದು ಬೆಳಗ್ಗೆ 10 ಗಂಟೆಗೆ ಬೈಕ್ ರ್‍ಯಾಲಿಯು ಬಲ್ಲಾಳ್ ವೃತ್ತದಲ್ಲಿ ಆರಂಭಗೊಂಡು, ಅಲ್ಲಿಂದ ಬನ್ನೂರು ರಸ್ತೆಯ ಹಳೇ ಹಾಲಿನ ಡೈರಿಯ ಗೌತಮ ಬುದ್ಧ ವೃತ್ತದಲ್ಲಿ ಸಮಾವೇಶಗೊಳ್ಳುತ್ತದೆ. ವಿವಿಧೆಡೆಯಿಂದ ಆಗಮಿಸುವ ಮುಖಂಡರೊಂದಿಗೆ ಕಾಲ್ನಡಿಗೆ ಜಾಥಾ ನಡೆಸಿ ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಯುದ್ಧದ ಎಫೆಕ್ಟ್: ಎಥನಾಲ್ ಬಳಕೆಗೆ ಅನುಮತಿ ನೀಡುವಂತೆ ಪ್ರಧಾನಿಗೆ ಆಗ್ರಹ

ಎಥನಾಲ್ ಉತ್ಪಾದಿಸುವ ರೈತರಿಗೆ ಸಬ್ಸಿಡಿ ನೀಡಲಿ

ಮೈಸೂರು, ಮಾ.22(ಎಸ್‌ಪಿಎನ್)– ಗಲ್ಫ್ ಯುದ್ಧ ಭೀತಿ ಹಿನ್ನೆಲೆಯಲ್ಲಿ ದೇಶಾದ್ಯಂತ ಅಡುಗೆ ಅನಿಲ ವಿತರಣೆಯಲ್ಲಿ ವ್ಯತ್ಯಯವಾಗಿದ್ದು, ಈ ಸಮಸ್ಯೆಯಿಂದ ಹೊರಬರಲು ಎಥನಾಲ್ ಬಳಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು ಹಾಗೂ ಎಥನಾಲ್ ಉತ್ಪಾದನೆ ಮಾಡುವ ರೈತನಿಗೆ ಸಬ್ಸಿಡಿ ನೀಡುವಂತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹಾಗೂ ಸಿಎಂ ಸಿದ್ದರಾಮಯ್ಯರಿಗೆ ರೈತ ಮುಖಂಡ ಕುರುಬೂರು ಶಾಂತಕುಮಾರ್ ಪತ್ರ ಬರೆದು ಒತ್ತಾಯಿಸಿದ್ದಾರೆ.

ದೇಶಾದ್ಯಂತ ಪೂರೈಕೆಯಾಗುವ ಗ್ಯಾಸ್ ವಿತರಣೆಯಲ್ಲಿ ಸಮಸ್ಯೆ ಉಂಟಾಗಿದೆ. ಕೇಂದ್ರ ಸರ್ಕಾರ ಉಜ್ವಲ್ ಯೋಜನೆಯಡಿ ಪ್ರತಿ ಮನೆಮನೆಗೂ ಸಿಲಿಂಡರ್ ಗ್ಯಾಸ್ ಸ್ಟವ್ ವಿತರಣೆ ಮಾಡಿದೆ. ಆದರೆ, ಈಗ ವಿದೇಶದಿಂದ ಆಮದಾಗುವ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವುದರಿಂದ ರೈತರು ಉತ್ಪಾದಿಸುವ ಎಥನಾಲ್ ಬಳಕೆಗೆ ಅನುಮತಿ ಮತ್ತು ಎಥನಾಲ್ ಉತ್ಪಾದಿಸುವ ರೈತರಿಗೆ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಗ್ಯಾಸ್ ಸಮಸ್ಯೆಯಿಂದಾಗಿ ದೇಶದ ಹಣದುಬ್ಬರದ ಮೇಲೆ ಪರಿಣಾಮ ಬೀರಿದ್ದು, ಇಂತಹ ಸಂದರ್ಭದಲ್ಲಿ ವಿದೇಶಿ ವಿನಿಮಯ ಉಳಿಸಲು ದೇಶಿಯ ಎಥನಾಲ್ ಉತ್ಪಾದನೆ ಹಾಗೂ ಮಾರಾಟಕ್ಕೆ ರೈತರಿಗೆ ಅನುಮತಿ ನೀಡಬೇಕು. ಈ ಮೊದಲು ಗ್ಯಾಸ್ ಸಿಲಿಂಡರ್‌ಗೆ ನೀಡುತ್ತಿದ್ದ ಸಬ್ಸಿಡಿಯನ್ನು ಎಥನಾಲ್ ಉತ್ಪಾದನೆಗೂ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಅಲ್ಲದೆ, ಈ ಹಿಂದೆ ಸೀಮೆಎಣ್ಣೆಯನ್ನು ನ್ಯಾಯಬೆಲೆ ಅಂಗಡಿ ಮೂಲಕ ವಿತರಣೆ ಮಾಡುತ್ತಿದ್ದರು. ಇದೀಗ ಅದೇ ಮಾದರಿಯಲ್ಲಿ ಎಲ್ಲಾ ನ್ಯಾಯಬೆಲೆ ಅಂಗಡಿ ಮೂಲಕ ಎಥನಾಲ್ ಮಿಶ್ರಿತ ಗ್ಯಾಸ್ ವಿತರಣೆಗೆ ಅನುಮತಿ ನೀಡಲಿ. ಗ್ಯಾಸ್ ಸಿಲಿಂಡರ್ ಜನಸಾಮಾನ್ಯರ ಬಳಕೆಯ ದೃಷ್ಟಿಯಿಂದ ಸಿಡಿಯುವ ಆತಂಕವಿದೆ. ಆದರೆ, ಎಥನಾಲ್ ಲಿಕ್ವಿಡ್ ಆದ ಕಾರಣ ಬೆಂಕಿ ಹತ್ತಿಕೊಳ್ಳುವ ಭಯ ಇರುವುದಿಲ್ಲ ಎಂದಿದ್ದಾರೆ.

'ಜನರೊಂದಿಗೆ ಜನತಾದಳ' ಕುರಿತು ಸಭೆ



ಮೈಸೂರು ತಾಲೂಕು ಜಯಪುರ ಹೋಬಳಿಯ ಗೋಪಾಲಪುರ ಗ್ರಾಮದಲ್ಲಿ ಜೆಡಿಎಸ್ ಮುಖಂಡ ಬಿ.ಕೆ.ಬಸವೇಗೌಡರ ಮನೆಯಲ್ಲಿ ಇತ್ತೀಚೆಗೆ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರ ನೇತೃತ್ವದಲ್ಲಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು. ಮುಖಂಡ ಬಿ.ಕೆ.ಬಸವೇಗೌಡ, ಮೈಮುಲ್ ಅಧ್ಯಕ್ಷ ಈರೇಗೌಡ, ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವು, ಗೋಪಾಲಪುರ ಗ್ರಾಮದ ಮುಖಂಡರಾದ ವಿಶ್ವಣ್ಣ, ರಾಮೇಗೌಡ, ಸುರೇಶ್, ದೇವರಾಜು, ಸ್ವಾಮಿಗೌಡ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಹುಟ್ಟುಹಬ್ಬದ ಶುಭಾಶಯ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ಕ್ಷೇತ್ರದ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ನಿಶಾಂತ್ ಪಟೇಲ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು. ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಮುಖಂಡರಾದ ನಿತಿನ್, ಪುಟ್ಟಸ್ವಾಮಿ, ಕಿರಣ್, ವಿನೋದ್, ರಾಘು, ಶಿವು, ಮಣಿ, ಪವನ್ ಮತ್ತಿತರು ಹಾಜರಿದ್ದರು.

ಮೈಸೂರು ಸಂಸ್ಥಾನದ ಇತಿಹಾಸ ಪಠ್ಯವಾಗಲಿ

ಉದ್ಯಮಿ ಜಗನ್ನಾಥ್ ಶೆಣೈ ಆಗ್ರಹ

ಮೈಸೂರು, ಮಾ.22(ಎಸ್‌ಪಿಎನ್)– ಹಲವು ಅಭಿವೃದ್ಧಿಗೆ ಮಾದರಿಯಾಗಿರುವ ಮೈಸೂರು ಸಂಸ್ಥಾನದ ಆಡಳಿತ, ಈ ಸಂಸ್ಥಾನವನ್ನಾಳಿದ ಒಡೆಯರ್ ಅವರ ಇತಿಹಾಸ ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಪಠ್ಯವಾಗಬೇಕು ಎಂದು ಉದ್ಯಮಿ ಜಗನ್ನಾಥ್ ಶೆಣೈ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಮೈಸೂರು ಗೋಕುಲಂ ಮೂರನೇ ಹಂತದ ಶ್ರೀ ಕೃಷ್ಣಗಾನಸಭಾ ಆಳ್ವಾರ್ ಕಲಾಭವನದಲ್ಲಿ ಮಹಾರಾಜ ಹತ್ತನೇ ಚಾಮರಾಜ ಒಡೆಯರ್ ಜಯಂತಿ ಪ್ರಯುಕ್ತ ಏರ್ಪಡಿಸಿದ್ದ ಕುರುಕ್ಷೇತ್ರ ಗಮಕ ವಾಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನವನ್ನಾಳಿದ ಎಲ್ಲಾ ರಾಜರು ಮೈಸೂರಿನ ಅಭಿವೃದ್ಧಿಗೆ ಉತ್ತಮ ಕೆಲಸ ಮಾಡಿದ್ದಾರೆ. ಕನ್ನಂಬಾಡಿ ಕಟ್ಟೆ(ಕೆಆರ್‌ಎಸ್), ಕೈಗಾರಿಕೆ, ನೀರಾವರಿ, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಪ್ರತಿಯೊಬ್ಬರಿಗೂ ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲಾ ರಂಗದಲ್ಲೂ ಅಭಿವೃದ್ಧಿಗೆ ಒತ್ತು ನೀಡಿ, ರಾಜ್ಯಭಾರ ಮಾಡಿದ್ದಾರೆ. ಅಂತಹ ಇತಿಹಾಸವನ್ನೇ ನಮ್ಮ ರಾಜ್ಯ ಸರ್ಕಾರ ಮರೆತಿರುವುದು ಬೇಸರ ಸಂಗತಿ ಎಂದರು.



ಮಹಾರಾಜ ಹತ್ತನೇ ಚಾಮರಾಜ ಒಡೆಯರ್ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಹಿರಿಯ ವಿದ್ವಾಂಸ ಡಾ.ನಂಜುಂಡಸ್ವಾಮಿ ಪುಷ್ಪಾರ್ಚನೆ ಮಾಡಿದರು.

ಹತ್ತನೇ ಚಾಮರಾಜ ಒಡೆಯರ್ ಕಾಲಾವಧಿಯಲ್ಲಿ ಸ್ವತಃ ಮಹಾರಾಜರೇ ಶಾಸ್ತ್ರೀಯ ಸಂಗೀತದ ಪೋಷಕರಾಗಿದ್ದರು. ಅವರ ಅಸ್ಥಾನದಲ್ಲಿ ವೀಣೆ ಶೇಷಣ್ಣ, ಮೈಸೂರು ವಾಸುದೇವಾಚಾರ್ ಸೇರಿದಂತೆ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ್ದರು. ಸ್ವತಃ ಚಾಮರಾಜ ಒಡೆಯರ್ ಅವರೇ ಪಿಟೀಲು ವಾದಕರಾಗಿದ್ದರಲ್ಲದೆ, ಸಾಂಸ್ಕೃತಿಕ ಚಟುವಟಿಕೆಗಳು ಮೈಸೂರಲ್ಲಿ ಬೇರೂರಲೂ ಮೈಸೂರು ಸಂಸ್ಥಾನದ ಕೊಡುಗೆ ಸಾಕ್ಷಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದ ಅಭಿವೃದ್ಧಿ ಉತ್ತುಂಗದಲ್ಲಿತ್ತು. ತದನಂತರ ಜಯಚಾಮರಾಜ ಒಡೆಯರ್ ಅವರೂ ಸಹ ಅದೇ ಹಾದಿಯಲ್ಲಿ ಆಳ್ವಿಕೆ ನಡೆಸಿದರು. ಇಂತಹ ಅಭಿವೃದ್ಧಿ ಹರಿಕಾರರಾಗಿರುವ ಸಂಸ್ಥಾನದ ಇತಿಹಾಸವನ್ನು ಪ್ರಾಥಮಿಕ ಶಿಕ್ಷಣದಿಂದಲೇ ಮಕ್ಕಳಿಗೆ ಪರಿಚಯಿಸುವುದು ರಾಜ್ಯ ಸರ್ಕಾರ ಮತ್ತು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಜವಾಬ್ದಾರಿ. ಬೇರೆಬೇರೆ ರಾಜರ ಇತಿಹಾಸಗಳಿವೆ ಆದರೆ, ಮೈಸೂರು ಸಂಸ್ಥಾನದ ಇತಿಹಾಸ ಪಠ್ಯ ಪ್ರಾಥಮಿಕ ಶಿಕ್ಷಣದಲ್ಲಿ ಇಲ್ಲದಿರುವುದು ಮಕ್ಕಳಲ್ಲಿ ಮೈಸೂರು ಸಂಸ್ಥಾನದ ಬಗ್ಗೆ ಮಾಹಿತಿ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ವಿದ್ವಾಂಸ ಡಾ.ನಂಜುಂಡಸ್ವಾಮಿ ಮಾತನಾಡಿ, ಸಂಗೀತ, ಸಾಹಿತ್ಯ ಹಾಗೂ ಕಲೆಗೆ ಮೈಸೂರು ಮಹಾರಾಜರು ತಮ್ಮ ಆಳ್ವಿಕೆಯಲ್ಲಿ ಹೆಚ್ಚಿನ ಆದ್ಯತೆ ನೀಡಿದ್ದರು. ಹತ್ತನೇ ಚಾಮರಾಜ ಒಡೆಯರ್ ಸೇರಿದಂತೆ ಸಂಸ್ಥಾನದ ಆಳ್ವಿಕೆ ನಡೆಸಿದ ಎಲ್ಲಾ ರಾಜರು ಕಲೆ, ಸಾಹಿತ್ಯ, ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದ ಪ್ರಸಂಗಗಳನ್ನು ವಿವರಿಸಿದರು.

ಈ ವೇಳೆ ಶ್ರೀಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇಅರಸ್, ವಿದುಷಿ ಶುಭಾ ರಾಘವೇಂದ್ರ ಗಮಕ ವಾಚಿಸಿದರೆ, ವಿದ್ವಾನ್ ಡಾ.ಕೃಷ್ಣಾ ಮಂಜುನಾಥ್ ವ್ಯಾಖ್ಯಾನಿಸಿದರು.

ಮಧ್ಯಪ್ರಾಚ್ಯ ಯುದ್ಧ: ಇಂಧನ, ರಸಗೊಬ್ಬರ ಲಭ್ಯತೆ ಕುರಿತು ಉನ್ನತ ಮಟ್ಟದ ಸಭೆ

ಅನಿಲ, ಪೆಟ್ರೋಲಿಯಂ ಉತ್ಪನ್ನ, ರಸಗೊಬ್ಬರಗಳ ಪೂರೈಕೆ ಖಾತ್ರಿಗೆ ಪ್ರಧಾನಿ ಮೋದಿ ಸೂಚನೆ

ನವದೆಹಲಿ: ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಮುಂದುವರೆದಿರುವ ಹಿನ್ನೆಲೆಯಲ್ಲಿ ಭಾರತದಲ್ಲಿನ ಕಚ್ಚಾತೈಲ, ನೈಸರ್ಗಿಕ ಅನಿಲ ಹಾಗೂ ಇತರ ಪೆಟ್ರೋಲಿಯಂ ಉತ್ಪನ್ನಗಳು, ಇಂಧನ ಪೂರೈಕೆ ಹಾಗೂ ರಸಗೊಬ್ಬರ ದಾಸ್ತಾನು ಸಂಬಂಧ ವಸ್ತುಸ್ಥಿತಿ ಅರಿಯಲು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಸಭೆ ನಡೆಸಿದರು.

ಅನಿಲ, ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ರಸಗೊಬ್ಬರಗಳ ಪೂರೈಕೆ ನಿರಂತರವಾಗಿರುವುದನ್ನು ಖಾತ್ರಿಪಡಿಸಬೇಕು, ದೇಶದಾದ್ಯಂತ ಇವುಗಳ ವಿತರಣೆಯಲ್ಲೂ ತೊಂದರೆಯಾಗದಂತೆ ನೋಡಿಕೊಳ್ಳುವ ಕುರಿತು ಹಿರಿಯ ಸಚಿವರು ಹಾಗೂ ಅಧಿಕಾರಿಗಳಿದ್ದ ಈ ಉನ್ನತ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಮಧ್ಯಪ್ರಾಚ್ಯದಲ್ಲಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳೇನು, ಕೈಗಾರಿಕೆಗಳು ಹಾಗೂ ಗ್ರಾಹಕರ ಹಿತಾಸಕ್ತಿ ಕಾಪಾಡುವುದು ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ತಿಳಿದುಬಂದಿದೆ

ಸಭೆಯಲ್ಲಿ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಶಿವರಾಜ್ ಸಿಂಗ್ ಚೌಹಾಣ್, ಎಸ್.ಜೈಶಂಕರ್, ನಿರ್ಮಲಾ ಸೀತಾರಾಮನ್, ಜೆ.ಪಿ.ನಡ್ಡಾ, ಪೀಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ಸರ್ವಾನಂದ ಸೋನೊವಾಲ್, ಮನೋಹರ್ ಲಾಲ್ ಖಟ್ಟರ್, ಪ್ರಹ್ಲಾದ ಜೋಶಿ, ಕೆ.ರಾಮಮೋಹನ್ ನಾಯ್ಡು, ಹರದೀಪ್ ಸಿಂಗ್ ಪುರಿ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಮೋದಿಯವರ ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ.ಮಿಶ್ರಾ ಹಾಗೂ ಶಕ್ತಿಕಾಂತ ದಾಸ್ ಪಾಲ್ಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಇಂದಿನಿಂದ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ

ಮೇಲುಕೋಟೆ, ಮಾ.22–ಇತಿಹಾಸ ಪ್ರಸಿದ್ಧ ಮೇಲುಕೋಟೆ ಶ್ರೀ ಚೆಲುವ ನಾರಾಯಣಸ್ವಾಮಿಯವರ ಹತ್ತು ದಿನಗಳ ವೈರಮುಡಿ ಬ್ರಹ್ಮೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ನಾಳೆಯಿಂದ ಚಾಲನೆಗೊಳ್ಳಲಿವೆ.

ವೈರಮುಡಿ ಉತ್ಸವವಲ್ಲದೆ ಜಾತ್ರೆಯಲ್ಲಿ ಪ್ರಮುಖ ಮಹೋತ್ಸವಗಳು ನೆರವೇರಲಿದ್ದು ಮಾ.24ರ ಸಂಜೆ 5ರಿಂದ 10ರವರೆಗೆ ಕಲ್ಯಾಣೋತ್ಸವ, 25ರ ಬುಧವಾರ ಬೆಳಗ್ಗೆ 8ರಿಂದ 10ರವರೆಗೆ ಗರುಡಧ್ವಜಾರೋಹಣ, ಮಾ.26 ರಂದು ಗುರುವಾರ ಬೆಳಗ್ಗೆ 10ಗಂಟೆಯಿಂದ 2ಗಂಟೆಯವರೆಗೆ ಆರಿದ್ರಾ ಮಾಸ ತಿರು ನಕ್ಷತ್ರ ವಿಶೇಷವಾಗಿ ರಾಮಾನುಜಾ ಚಾರ್ಯರಿಗೆ ಅಭಿಷೇಕ ಮಾ.27ರಂದು ಶ್ರೀರಾಮನವಮಿ ಮಧ್ಯಾಹ್ನ 2 ರಿಂದ 9ರವರೆಗೆ ನಾಗವಲ್ಲೀ ಮಹೋತ್ಸವ ನಡೆಯಲಿದೆ.

ವಿಶ್ವವಿಖ್ಯಾತ ವೈರಮುಡಿ ಕಿರೀಟ ಧಾರಣ ಮಹೋತ್ಸವ ಮಾ.28ರ ಶನಿವಾರ ರಾತ್ರಿ 8 ಗಂಟೆ ವೇಳೆಗೆ ಆರಂಭವಾಗಿ ತಡರಾತ್ರಿ 4ಗಂಟೆಯವರೆಗೆ ಪುಷ್ಯ ನಕ್ಷತ್ರ ಕೂಡಿದ ಶುಭದಿನ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಶಸ್ತ ದಿನ ನಡೆಯಲಿದೆ. ವೈರಮುಡಿ ಉತ್ಸವ ಮುಗಿಯುತ್ತಿದ್ದಂತೆ ಮೈಸೂರು ದೊರೆ ರಾಜ ಒಡೆಯರ್



ಶ್ರೀ ಚೆಲುವ ನಾರಾಯಣಸ್ವಾಮಿ

ಸಮರ್ಪಿಸಿದ ವಜ್ರಖಚಿತ ರಾಜಮುಡಿ ಕಿರೀಟ ಧರಿಸಿ ರಾಜಮುಡಿ ಉತ್ಸವ ನೆರವೇರಿಸಲಾಗುತ್ತದೆ. ಇಡೀ ಭಾರತದ ದೇವಾಲಯಗಳ ಪೈಕಿ ಒಂದೇ ರಾತ್ರಿ ಅಪರೂಪದ ಎರಡು ವಜ್ರದಕಿರೀಟಗಳ ಐತಿಹಾಸಿಕ ಉತ್ಸವ ನಡೆಯುವುದು ಚೆಲುವ ನಾರಾಯಣಸ್ವಾಮಿಯ ವೈರಮುಡಿ ಬ್ರಹ್ಮೋತ್ಸವದ ವಿಶೇಷವಾಗಿದೆ.

ವೈರಮುಡಿ ಜಾತ್ರಾಮಹೋತ್ಸವದ ಮತ್ತೊಂದು ಪ್ರಮುಖ ಮಹೋತ್ಸವ ಚೆಲುವ ನಾರಾಯಣಸ್ವಾಮಿಯವರ ಮಹಾರಥೋತ್ಸವ ಮಾ. 31ರಂದು ಬೆಳಿಗ್ಗೆ 7.30ರಿಂದ 3ರವರೆಗೆ ನಡೆಯಲಿದ್ದು, ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ರಾತ್ರಿ ನೆರವೇರಲಿದೆ. ಇದಕ್ಕೂ ಮುನ್ನಾ ದಿನವಾದ ಮಾ.30ರ ಸಂಜೆ ಗಜೇಂದ್ರ ಮೋಕ್ಷ ಉತ್ಸವ ಏ.1 ರಂದು ರಾತ್ರಿ ಕಲ್ಯಾಣಿಯಲ್ಲಿ ತೆಪ್ಪೋತ್ಸವ ಏ.2 ರಂದು ಬೆಳಿಗ್ಗೆ ತೀರ್ಥಸ್ನಾನ, ಸಂಜೆ ಪಟ್ಟಾಭಿಷೇಕ ಏ.3 ರಂದು ಚೆಲುವನಾರಾಯಣಸ್ವಾಮಿಗೆ ಮಹಾಭಿಷೇಕ ಏ.4 ರಂದು ಬೆಟ್ಟದೊಡೆಯ ಯೋಗನರಸಿಂಹಸ್ವಾಮಿ ಮತ್ತು ಮಹಾಲಕ್ಷ್ಮಿ ಯದುಗಿರಿ ನಾಯಕಿಗೆ ಮಹಾಭಿಷೇಕ ನೆರವೇರಲಿದೆ.

ದೇವಾಲಯದ ಸುತ್ತ ವಾಹನ ನಿಲುಗಡೆ ನಿಯಂತ್ರಣಕ್ಕೆ ಆದೇಶ



ದೇವಾಲಯದ ಸುತ್ತ ಅಡ್ಡಾದಿಡ್ಡಿ ವಾಹನ ನಿಲ್ಲಿಸಿರುವುದು.

ಮೇಲುಕೋಟೆ: ದೇವಾಲಯದ ಸುತ್ತ ಉತ್ಸವ ಬೀದಿಗಳಲ್ಲಿ ಭಕ್ತರ ವಾಹನ ನಿಲುಗಡೆಯನ್ನು ನಿಯಂತ್ರಿಸುವಂತೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿಯವರಿಗೆ ಆದೇಶಿಸಿದ್ದಾರೆ. ಮೇಲುಕೋಟೆಯಲ್ಲಿ ಕಾರ್ಯಕ್ರಮಕ್ಕೆ ಬರುತ್ತಿದ್ದ ವೇಳೆ ಚೆಲುವನಾರಾಯಣಸ್ವಾಮಿ ದೇವಾಲಯದ ಸುತ್ತಮುತ್ತ ಉಂಟಾಗಿದ್ದ ಟ್ರಾಫಿಕ್ ಜಾಮ್ ನಿಂದಾಗಿ ಕಾರನ್ನು ಅಲ್ಲೇ ಬಿಟ್ಟು ದ್ವಿಚಕ್ರವಾಹನದಲ್ಲಿ ಸಮಾರಂಭಕ್ಕೆ ಆಗಮಿಸಿದರು. ದೇವಾಲಯದ ಸುತ್ತಮುತ್ತ ಉಂಟಾಗಿದ್ದ ವಾಹನ ದಟ್ಟನೆಯ ಅವ್ಯವಸ್ಥೆಯನ್ನು ಗಮನಿಸಿದ ಶಾಸಕರು, ಇನ್ನು ಮುಂದೆ ಶನಿವಾರ ಭಾನುವಾರ ಮತ್ತು ರಜಾದಿನಗಳಂದು ಭಕ್ತರ ವಾಹನದಟ್ಟಣೆಯನ್ನು ನಿಯಂತ್ರಿಸಲು ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಭಕ್ತರ ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ ಕಲ್ಪಿಸಬೇಕು ಈ ನಿಟ್ಟಿನಲ್ಲಿ ಮೇಲುಕೋಟೆ ಪೊಲೀಸರಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು ಎಂದು ಖಡಕ್ ಸೂಚನೆ ನೀಡಿದರು

ನಾಳೆ (ಮಾ.23)ಯಿಂದ ಏ.4ರವರೆಗೆ ವೈರಮುಡಿ ಬ್ರಹ್ಮೋತ್ಸವ ನಡೆಯಲಿದ್ದು ಚೆಲುವನಾರಾಯಣಸ್ವಾಮಿಗೆ ಪ್ರತಿನಿತ್ಯ ವಿಶೇಷ ಉತ್ಸವಗಳು ಮತ್ತು ವಾಹನೋತ್ಸವಗಳು ನೆರವೇರುತ್ತದೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಉತ್ಸವಕ್ಕೆ ಅಡಚಣೆಯಾಗುತ್ತಿದೆ ಈ ಕಾರಣ ಜಾತ್ರಾ ಅವಧಿಯಲ್ಲಿ ಉತ್ಸವ ಬೀದಿಗಳಲ್ಲಿ ಯಾವುದೇ ವಾಹನಗಳು ನಿಲುಗಡೆಯಾಗದಂತೆ ಕ್ರಮ ಜರುಗಿಸಬೇಕು ಈ ಸಂಬಂಧ ಇನ್ನು ಮುಂದೆ ಯಾವುದೇ ದೂರು ಬರದಂತೆ ಪೊಲೀಸರು ಮತ್ತು ಗ್ರಾಪಂ ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದೂ ಡಿವೈಎಸ್.ಪಿ, ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಮೇಲುಕೋಟೆ ಪೊಲೀಸರಿಗೂ ಶಾಸಕರು ಸೂಚನೆ ನೀಡಿದರು.

ಗ್ಯಾಸ್ ಸಿಲಿಂಡರ್ ಪಡೆದುಕೊಳ್ಳಲು ಗ್ರಾಹಕರ ಹರಸಾಹಸ



ಹೆಚ್.ಪಿ.ಗ್ಯಾಸ್ ಏಜೆನ್ಸಿ ಶಾಖಾ ಕಚೇರಿ ಮುಂಭಾಗ ಅಡುಗೆ ಅನಿಲ ಸಿಲಿಂಡರ್ ಪಡೆದುಕೊಳ್ಳಲು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಕೆ.ಆರ್.ಪೇಟೆ, ಮಾ.22–ಅಡುಗೆ ಅನಿಲ ಸಿಲಿಂಡರ್ ಪಡೆದುಕೊಳ್ಳಲು ಗ್ರಾಹಕರು ಮುಗಿಬಿದ್ದು ಗ್ಯಾಸ್ ಪಡೆದುಕೊಳ್ಳಲು ಹರಸಾಹಸ ಪಟ್ಟ ಘಟನೆ ನಡೆದಿದೆ.

ಗ್ರಾಹಕರು 10ದಿನಗಳ ಹಿಂದೆ ಬುಕಿಂಗ್ ಮಾಡಿದ್ದರೂ ಗ್ಯಾಸ್ ವಿತರಣೆ ಮಾಡದೇ ಕಡಿಮೆ ಸಿಲಿಂಡರ್ ತಂದಿರುವ ಕಾರಣ ಪಟ್ಟಣದ ಹೇಮಗಿರಿ ವೃತ್ತದಲ್ಲಿರುವ ಹೆಚ್.ಪಿ. ಗ್ಯಾಸ್ ಏಜೆನ್ಸಿಯವರು ಗ್ರಾಹಕರ ಬೇಡಿಕೆಗೆ ತಕ್ಕಂತೆ ಸಿಲಿಂಡರ್ ತಂದು ವಿತರಣೆ ಮಾಡುವ ಬದಲು ಕಡಿಮೆ ಸಿಲಿಂಡರ್ ಕೊಡುವ ಮೂಲಕ ಗ್ರಾಹಕರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸಿಲಿಂಡರ್ ಸಿಗದೇ ಇರುವ ಗ್ರಾಹಕರು ದೂರಿದರು.

ಗ್ರಾಹಕರು ಸಿಲಿಂಡರ್ ಮೊದಲು ಪಡೆಯುವ ಸಲುವಾಗಿ ಕ್ಯೂ ಬಿಟ್ಟು ಸಿಲಿಂಡರ್ ತುಂಬಿದ ಲಾರಿಯ ಮುಂದೆ ಮುಗಿಬಿದ್ದರು ಆಗ ಪೊಲೀಸರು ಸ್ಥಳಕ್ಕೆ ಆಗಮಿಸಿ ಸಿಲಿಂಡರ್ ಕೊಡಿಸಲು ಮುಂದಾದರೂ ಅದರ ಹೆಚ್ಚು ಜನರಿದ್ದ ಕಾರಣ ತಳ್ಳಾಟ-ನೂಕಾಟ ನಡೆಯಿತು. ಗ್ರಾಹಕರ ಗಲಾಟೆ ಕಡಿಮೆಯಾಗದೇ ಇರುವ ಕಾರಣ ಏಜೆನ್ಸಿಯವರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆ ಮುಂದೆ 75 ಮಂದಿ ಗ್ರಾಹಕರಿಗೆ ಸಿಲಿಂಡರ್ ವಿತರಣೆ ಮಾಡಲಾಯಿತು. ಉಳಿದ ಗ್ರಾಹಕರಿಗೆ ನಾಳೆ ವಿತರಣೆ ಮಾಡುವ ಭರವಸೆ ನೀಡಿ ಸರತಿಯ ಸಾಲಿನಲ್ಲಿ ನಿಂತಿದ್ದ ಗ್ರಾಹಕರಿಗೆ ಟೋಕನ್ ವಿತರಣೆ ಮಾಡಿದರು.

ತಾಲೂಕಿನ ಹೆಚ್.ಪಿ. ಕನೆಕ್ಷನ್ ಪಡೆದಿರುವ ಗ್ರಾಹಕರಿಗೆ ನಿಗದಿತ ದಿನಗಳಂದು ಗ್ಯಾಸ್ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಗ್ಯಾಸ್ ಏಜೆನ್ಸಿ ಯವರಿಗೆ ಟೌನ್ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಸುನಿಲ್‌ಕುಮಾರ್ ಸೂಚನೆ ನೀಡಿದರು.

ಒಂದು ವೇಳೆ ನಿಗಧಿತ ದಿನಗಳಂದು ಸಿಲಿಂಡರ್ ವಿತರಿಸದೇ ಕೃತಕ ಅಭಾವ ಸೃಷ್ಟಿಸಿದರೆ ಏಜೆನ್ಸಿ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರಕೃತಿ, ಸಂಸ್ಕೃತಿ ಸಂಗಮದ ಮಹಾಪರ್ವವೇ ಯುಗಾದಿ

ಮಂಡ್ಯ: ಸಮಾಜದ ಪ್ರತಿಯೊಬ್ಬರೂ ಜೀವನದಲ್ಲಿ ಬೇವು-ಬೆಲ್ಲವನ್ನು ಸಮಾನವಾಗಿ ಸ್ವೀಕರಿಸಬೇಕೆಂದು ಬಿಜೆಪಿ ಪಕ್ಷದ ಮೈಸೂರು ವಿಭಾಗದ ಸಹ ಪ್ರಭಾರಿ ಡಾ. ಈ.ಸಿ.ನಿಂಗರಾಜೇಗೌಡ ತಿಳಿಸಿದ್ದಾರೆ

ಭಾನುವಾರ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನ ದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ಏರ್ಪಡಿಸಲಾಗಿದ್ದ 16ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಮತ್ತು ಯುಗಾದಿ ಕವಿಗೋಷ್ಠಿ ಹಾಗೂ ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ, ಯುಗಾದಿ ಕೇವಲ ಒಂದು ಹಬ್ಬವಲ್ಲ, ಅದು ಪ್ರಕೃತಿ ಮತ್ತು ಸಂಸ್ಕೃತಿಯ ಸಂಗಮದ ಮಹಾ ಪರ್ವವಾಗಿದ್ದು, ಕೇವಲ ಹಿಂದೂಗಳಿಗೆ ಮಾತ್ರವಲ್ಲದೇ ಸಮಸ್ತ ಮನುಕುಲಕ್ಕೆ ಹೊಸ ಹುರುಪು, ಹೊಸ ಚೈತನ್ಯ ತುಂಬುವ ಶಕ್ತಿ ಹಬ್ಬಕ್ಕಿದೆ ಎಂದು ಅಭಿಪ್ರಾಯಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂಕೇಗೌಡ ಮಾತನಾಡಿ, ಪ್ರತಿಯೊಬ್ಬ ಮನುಷ್ಯ ಯಾವ ಕ್ಷೇತ್ರದಲ್ಲಿ ಬೆಳೆಯುತ್ತಾನೋ ಆ ಕ್ಷೇತ್ರವನ್ನು ತಾತ್ಸಾರ ಮಾಡದೇ ಅದೇ ಕ್ಷೇತ್ರದಲ್ಲಿ ಮುಂದುವರೆದರೆ ಸಾಧನೆ ಸಾಧ್ಯ ಪ್ರತಿಯೊಬ್ಬರೂ ಪುಸ್ತಕವನ್ನು ಓದುವುದರಿಂದ ಮನುಷ್ಯನ ಪ್ರಬುದ್ಧತೆ ಬೆಳೆಯುತ್ತದೆ ಎಂದರು. ನನ್ನ ಈ ಪುಸ್ತಕ ಸಂಗ್ರಹ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಲುಪಿರುವುದು ನನ್ನ ಕೆಲಸಕ್ಕೆ ಸಾರ್ಥಕತೆ ಸಿಕ್ಕಿದೆ ಎಂದು ತೃಪ್ತಿ ವ್ಯಕ್ತಪಡಿಸಿದರು.

ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಶಿವಣ್ಣ ಮಂಗಲ, ಕನ್ನಡ ಅಕ್ಷರ ಜಾತ್ರೆಯ ಸಾಹಿತಿ ಹಾಗೂ ಕಲಬುರಗಿ ಜಿಲ್ಲಾ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕ ಸಂತೋಷ ಕುಮಾರ ಕರಹರಿ ಮಾತನಾಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದವರಿಗೆ ನಾಗರಿಕ ಅಭಿನಂದನೆ, ಕರ್ನಾಟಕ ಸೇವಾ ಭೂಷಣ ಹಾಗೂ ಕನ್ನಡ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಮುಡಾ ಅಧ್ಯಕ್ಷ ಬಿ.ಪಿ. ಪ್ರಕಾಶ್, ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಚಿನಕುರಳಿ ಲೋಕೇಶ್, ಡಾ. ಮೋಹನ ಕುಮಾರ ಶಾಸ್ತ್ರಿ, ವೇದಿಕೆಯ ಪದಾಧಿಕಾರಿಗಳಾದ ಬನ್ನಂಗಾಡಿ ಸಿದ್ದಲಿಂಗಯ್ಯ, ಎಸ್.ಕೃಷ್ಣ ಸ್ವರ್ಣಸಂದ್ರ, ರಾಗಿಮುದ್ದನಹಳ್ಳಿ ನಾಗೇಶ್, ರೂಪಾ ಹೊಸಹಳ್ಳಿ ಉಪಸ್ಥಿತರಿದ್ದರು.

ಬಳೇಅತ್ತಿಗುಪ್ಪೆ ಡೇರಿ ನಿರ್ದೇಶಕರಿಗೆ ಪುಟ್ಟರಾಜು ಅಭಿನಂದನೆ



ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು.

ಪಾಂಡವಪುರ, ಮಾ.22–ಬಳೇ ಅತ್ತಿಗುಪ್ಪೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ 9 ಸ್ಥಾನಗಳ ಪೈಕಿ 8 ಸ್ಥಾನಗಳಲ್ಲಿ ಗೆಲುವು ಸಾಧಿಸಿ ಆಡಳಿತ ಚುಕ್ಕಾಣಿ ಹಿಡಿದ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಆಯ್ಕೆಯಾದ ಎಲ್ಲಾ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದ ಅವರು, ಮತದಾರ ಷೇರುದಾರರು ನಿಮ್ಮ ಮೇಲೆ ನಂಬಿಕೆ, ವಿಶ್ವಾಸವಿಟ್ಟು ಮತ ಕೊಟ್ಟು ಆಯ್ಕೆ ಮಾಡಿದ್ದಾರೆ. ಹಾಗಾಗಿ ಆಯ್ಕೆಯಾದ ಎಲ್ಲಾ ನಿರ್ದೇಶಕರು ಸಂಘದ ಅಭಿವೃದ್ದಿಗೆ ಪೂರಕವಾಗಿ ಕೆಲಸ ಮಾಡುವ ಮೂಲಕ ಜನರ ವಿಶ್ವಾಸವನ್ನು ಉಳಿಸಿಕೊಳ್ಳಬೇಕು ಎಂದು ತಿಳಿಸಿದರು.

ನೂತನವಾಗಿ ಆಯ್ಕೆಯಾದ ನಿರ್ದೇಶಕರಾದ ತನುಜಾ, ವೀಣಾ, ಸವಿತ, ಪುಷ್ಪಲತಾ, ಬಸವಮಣಿ, ರೇಣು ಕಮ್ಮ, ಪವಿತ್ರ, ಜ್ಯೋತಿ, ಮುಖಂಡರಾದ ಮಹೇಶ್, ಪ್ರಕಾಶ್, ಯೋಗೇಶ್, ಈ. ರಾಜಪ್ಪ, ಪರಶಿವಪ್ಪ, ಲೋಕೇಶ್, ಶಂಕರ್, ಮಹದೇವು, ಚಾಮಯ್ಯ ಸೇರಿದಂತೆ ಹಲವರು ಇದ್ದರು.

ಯುವರೈತ ಕೃಷ್ಣೇಗೌಡ ನಿಧನ



ಕೆ.ಆರ್.ಪೇಟೆ,ಮಾ.22–ತಾಲೂಕಿನ ಭಾರತೀಪುರ ಗ್ರಾಮದ ಎಳನೀರು ವ್ಯಾಪಾರಿಗಳು ಹಾಗೂ ತಾಲೂಕು ಬಿಜೆಪಿ ಉಪಾಧ್ಯಕ್ಷ ಭಾರತೀಪುರ ಪುಟ್ಟಣ್ಣ ಅವರ ಪುತ್ರ ಯುವರೈತ ಕೃಷ್ಣೇಗೌಡ(45) ಹೃದಯಾಘಾತದಿಂದ ನಿಧನರಾಗಿದ್ದಾರೆ.

ಕೃಷಿ ಚಟುವಟಿಕೆಗಳನ್ನು ಮುಗಿಸಿಕೊಂಡು ಮಧ್ಯಾಹ್ನ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದ ಕೃಷ್ಣೇಗೌಡರಿಗೆ ಏಕಾಏಕಿ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದರು. ತಕ್ಷಣ ಕುಟುಂಬದ ಸದಸ್ಯರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ. ಮೃತರು ಪತ್ನಿ ವಾಣಿ, ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಸಹೋದರಿಯರು, ತಾಯಿ ತಾಯಮ್ಮ, ತಂದೆ ಪುಟ್ಟಣ್ಣ.ಎಸ್.ಗೌಡ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.ಮೃತರ ಅಂತ್ಯ ಸಂಸ್ಕಾರವು ನಾಳೆ (ಸೋಮವಾರ) ಬೆಳಗ್ಗೆ 11 ಗಂಟೆಗೆ ಭಾರತಿಪುರ ಗ್ರಾಮದ ಬಳಿ ಇರುವ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಉದ್ಯಮಿ ಕೆ.ಎಸ್.ಚಂದ್ರಪ್ರಕಾಶ್



ಕೆ.ಆರ್.ಪೇಟೆ: ಪಟ್ಟಣದ ಸುಭಾಷ್‌ನಗರ ವೀರಶೈವ ಸಮಾಜದ ಮುಖಂಡರು, ಚಂದನ ಟಿವಿಎಸ್ ಮೋಟಾರ್ಸ್ ಮಾಲೀಕರಾದ ಕೆ.ಎಸ್.ಚಂದ್ರಪ್ರಕಾಶ್(69) ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಮೃತರು ಧರ್ಮಪತ್ನಿ ನಾಗಲಾಂಭ, ಪುತ್ರ ಚಂದು, ಪುತ್ರಿ ಚಂದನ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಪಟ್ಟಣದ ಪುರ ಗ್ರಾಮದ ಬಳಿ ಇರುವ ಕೆ.ಆರ್.ಪೇಟೆ–ಚನ್ನರಾಯಪಟ್ಟಣ ಮುಖ್ಯ ರಸ್ತೆಯಲ್ಲಿರುವ ಮೃತರ ತೋಟದಲ್ಲಿ ನಡೆಯಿತು.

ಮೂರನೇ ಪುಟದಿಂದ

ಹಾರ್ಮುಜ್ ನಿರ್ಬಂಧ

ಸುರಕ್ಷತಾ ವ್ಯವಸ್ಥೆಗಳ ಸಮನ್ವಯ ಸಾಧಿಸಿಕೊಂಡು ಜಲಸಂಧಿಯ ಮೂಲಕ ಸಾಗಬಹುದು. ರಾಜತಾಂತ್ರಿಕತೆ ಇರಾನ್‌ನ ಆದ್ಯತೆಯಾಗಿದೆ. ಆದಾಗ್ಯೂ ಆಕ್ರಮಣವನ್ನು ಸಂಪೂರ್ಣವಾಗಿ ನಿಲ್ಲಿಸುವುದರ ಜೊತೆಗೆ ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಬಹಳ ಮುಖ್ಯ. ಹಾರ್ಮುಜ್ ಜಲಸಂಧಿಯಲ್ಲಿನ ಪ್ರಸ್ತುತ ಪರಿಸ್ಥಿತಿಗೆ ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ದಾಳಿಗಳೇ ಮೂಲ ಕಾರಣ ಎಂದು ಅಲಿ ಮುಸಾವಿ ತಿಳಿಸಿದ್ದಾರೆ.

ಅಮೆರಿಕಾಗೆ ಸೆಡ್ಡು: ಶತ್ರುಗಳ ಹೊರತು ಉಳಿದ ರಾಷ್ಟ್ರಗಳಿಗೆ ಸಂಬಂಧಿಸಿದ ಹಡಗುಗಳು ಹಾರ್ಮುಜ್ ಜಲಸಂಧಿ ದಾಟಲು ಅಭ್ಯಂತರವಿಲ್ಲ ಎಂದಿರುವ ಇರಾನ್, ಇದೇ ವೇಳೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ನೀಡಿರುವ ಎಚ್ಚರಿಕೆಗೆ ತಿರುಗೇಟು ನೀಡಿ, ನಮ್ಮ ಮೂಲಸೌಕರ್ಯಗಳನ್ನು ನಾಶಪಡಿಸಿದರೆ, ಅಮೆರಿಕಾ ಜೊತೆಗೆ ಅದರ ಮಿತ್ರ ರಾಷ್ಟ್ರಗಳ ಎಲ್ಲಾ ಪ್ರಮುಖ ಮೂಲ ಸೌಕರ್ಯಗಳನ್ನು ಗುರಿಯಾಗಿಸಿ ಪ್ರತಿದಾಳಿ ಮಾಡುವುದಾಗಿ ಇರಾನ್ ಗುಡುಗಿದೆ. ಕೇವಲ ಸೇನಾ ಕಾರ್ಯಾಚರಣೆಯಷ್ಟೇ ಅಲ್ಲದೆ, ಮಧ್ಯಪ್ರಾಚ್ಯದಾದ್ಯಂತ ಇರುವ ಇಂಧನ ಘಟಕಗಳು, ತೈಲ ಶುದ್ಧೀಕರಣ ಘಟಕಗಳು, ಬಂದರು ಗಳು ಮತ್ತು ಪ್ರಮುಖ ಮೂಲಸೌಕರ್ಯಗಳ ಮೇಲೂ ದಾಳಿ ನಡೆಸುವ ಸಾಧ್ಯತೆ ಇರುವುದಾಗಿ ಸ್ಪಷ್ಟಪಡಿಸಿದೆ. ಇದು ಸಂಘರ್ಷ ಮತ್ತಷ್ಟು ಹೆಚ್ಚುವ ಭೀತಿ ಸೃಷ್ಟಿಸಿದೆ.

ಇರಾನ್‌ಗೆ ಸೌದಿ ಎದಿರೇಟು: ಸೌದಿ ಅರೇಬಿಯಾ ಸೇರಿದಂತೆ ಇತರ ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಸೌದಿ ಅರೇಬಿಯಾ ಭಾನುವಾರ ಮಿಲಿಟರಿ ಅಟ್ಯಾಚ್ ಸೇರಿದಂತೆ ಇರಾನ್‌ನ ಐದು ರಾಜತಾಂತ್ರಿಕರನ್ನು ಪರ್ಸೋನಾ ನಾನ್ ಗ್ರಾಟಾ (ಅನಪೇಕ್ಷಿತ ವ್ಯಕ್ತಿ) ಎಂದು ಘೋಷಿಸಿ, ದೇಶವನ್ನು ತೊರೆಯಲು 24 ಗಂಟೆ ಕಾಲಾವಕಾಶ ನೀಡಿದೆ. ಇರಾನ್‌ನ ಸರಣಿ ದಾಳಿಗಳನ್ನು ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ತೀವ್ರವಾಗಿ ಖಂಡಿಸಿದ್ದು, ಇರಾನ್‌ನ ಈ ಉದ್ಧಟತನವು ಅಂತರ ರಾಷ್ಟ್ರೀಯ ಕಾನೂನು, ನೆರೆಹೊರೆಯ ತತ್ವಗಳು ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದ ಸ್ಪಷ್ಟ ಉಲ್ಲಂಘನೆಯಾಗಿದೆ. ಇದು ಇಸ್ಲಾಮಿಕ್ ಸಹೋದರತ್ವದ ಮೌಲ್ಯಗಳಿಗೆ ವಿರುದ್ಧವಾದ ನಡೆ, ಈ ದಾಳಿಗಳು ಮುಂದುವರೆದರೆ ಇರಾನ್ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದೆ. ತನ್ನ ಸಾರ್ವಭೌಮತ್ವ, ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಿರುವ ಯಾವುದೇ ಮಿಲಿಟರಿ ಕ್ರಮ ತೆಗೆದುಕೊಳ್ಳಲು ತನಗೆ ಹಕ್ಕಿದೆ ಎಂದು ಘೋಷಿಸುವ ಮೂಲಕ ನೇರ ಮಿಲಿಟರಿ ಕಾರ್ಯಾಚರಣೆಗೆ ಸಜ್ಜಾಗುತ್ತಿರುವ ಮುನ್ಸೂಚನೆ ನೀಡಿದೆ.

ಮತ್ತೆ ಡ್ರೋನ್ ದಾಳಿ: ರಾಜತಾಂತ್ರಿಕರನ್ನು ಹೊರಹಾಕಿದ ಕೆಲವೇ ಗಂಟೆಗಳಲ್ಲಿ ಇರಾನ್ ಮತ್ತೆ ಸೌದಿ ಅರೇಬಿಯಾವನ್ನು ಗುರಿಯಾಗಿಸಿ ದಾಳಿ ನಡೆಸಿದೆ. ಸೌದಿ ರಾಜಧಾನಿ ರಿಯಾದ್ ಮೇಲೆ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಿದ್ದು, ಅವುಗಳಲ್ಲಿ ಒಂದನ್ನು ವಾಯುಪಡೆ ತಡೆಹಿಡಿದಿದೆ. ಇನ್ನುಳಿದ ಎರಡು ಕ್ಷಿಪಣಿಗಳು ಜನವಸತಿಯಿಲ್ಲದ ಪ್ರದೇಶಗಳಲ್ಲಿ ಬಿದ್ದಿವೆ. ಸೌದಿಯ ಪೂರ್ವ ಪ್ರಾಂತ್ಯದ ಮೇಲೆ ನುಗ್ಗಿ ಬಂದಿದ್ದ ಹಲವಾರು ಸ್ಫೋಟಕ ಡ್ರೋನ್‌ಗಳನ್ನು ಸೌದಿ ರಕ್ಷಣಾ ಪಡೆಗಳು ಯಶಸ್ವಿಯಾಗಿ ಹೊಡೆದುರುಳಿಸಿವೆ. ಈ ದಾಳಿಗಳಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲವಾದರೂ, ಗಲ್ಫ್ ಪ್ರದೇಶದಲ್ಲಿ ಯುದ್ಧದ ಭೀತಿ ಹೆಚ್ಚಿಸಿದೆ.

ಅಮೆರಿಕದ ಮತ್ತೊಂದು ಎಫ್–15 ಫೈಟರ್ ಜೆಟ್ ಹೊಡೆದುರುಳಿಸಿದ ಇರಾನ್

ನವದೆಹಲಿ: ಅಮೆರಿಕ ಮೇಲೆ ಇನ್ನಿಲ್ಲದಂತೆ ಮುಗಿಬಿದ್ದಿರುವ ಇರಾನ್ ಸೇನೆಯು ಭಾನುವಾರ ದೇಶದ ದಕ್ಷಿಣ ಕರಾವಳಿ ಮತ್ತು ಹಾರ್ಮುಜ್ ದ್ವೀಪದ ಬಳಿ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸಿಕೊಂಡು ಅಮೆರಿಕದ ಎಫ್–15 ಅನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ.

ಸುಧಾರಿತ ಎಫ್–15 ಫೈಟರ್ ಜೆಟ್ ಅನ್ನು ಇರಾನಿನ ವಾಯು ರಕ್ಷಣಾ ಪಡೆಯ ನೆಲದಿಂದ ಗಾಳಿಗೆ ವ್ಯವಸ್ಥೆಗಳನ್ನು ಬಳಸಿಕೊಂಡು ಹೊಡೆದುರುಳಿಸಲಾಗಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಈ ದಾಳಿ ದೃಢಪಟ್ಟರೆ, ಅಮೆರಿಕದ ವಿರುದ್ಧ ನಡೆಯುತ್ತಿರುವ ಸಂಘರ್ಷದಲ್ಲಿ ಇರಾನ್ ಕನಿಷ್ಠ ಅರ್ಧ ಡಜನ್ ಅಮೆರಿಕನ್ ಜೆಟ್‌ಗಳನ್ನು ಹೊಡೆದುರುಳಿಸಿದಂತಾಗುತ್ತದೆ. ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆಯು ಎಫ್–15 ಫೈಟರ್ ಜೆಟ್ ಅನ್ನು ಯಶಸ್ವಿಯಾಗಿ ಲಾಕ್ ಮಾಡಿರುವುದನ್ನು ತೋರಿಸುವ ವೀಡಿಯೊವನ್ನು ಇರಾನಿನ ಮಾಧ್ಯಮವು ಅಪ್‌ಲೋಡ್ ಮಾಡಿದೆ.

1.7 ಲಕ್ಷ ವಾಹನ ಹೆಚ್ಚಳ



ಇದು ಶೇಕಡ 5ಕ್ಕಿಂತ ಹೆಚ್ಚು ಸ್ಥಿರ ವಾರ್ಷಿಕ ಬೆಳವಣಿಗೆಯನ್ನು ಸೂಚಿಸುತ್ತದೆ.

ದ್ವಿಚಕ್ರ ವಾಹನಗಳದೆ ಕಾರುಬಾರು: ವರ್ಷದಿಂದ ವರ್ಷಕ್ಕೆ ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚಾಗುತ್ತಾ ಪ್ರಾಬಲ್ಯ ಸಾಧಿಸುತ್ತಿದೆ. ಒಟ್ಟು ವಾಹನಗಳಲ್ಲಿ ಶೇಕಡ 82ರಷ್ಟು ದ್ವಿಚಕ್ರ ವಾಹನಗಳ ಪಾಲು ಇದೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ 1,36,509ರಷ್ಟು ಹೆಚ್ಚಾಗಿದೆ. 2023 ರಲ್ಲಿ 11,92,675ರಷ್ಟಿದ್ದ ದ್ವಿಚಕ್ರ ವಾಹನಗಳ ಸಂಖ್ಯೆ 2025 ಕ್ಕೆ 13,29,184 ಕ್ಕೆ ಏರಿಕೆಯಾಗಿದೆ. ಇದು ಸಾರಿಗೆ ಮೇಲಿನ ನಿರಂತರ ಅವಲಂಬನೆಯನ್ನು ಬಿಂಬಿಸುತ್ತದೆ.

ಕಾರು ಮತ್ತು ಟ್ಯಾಕ್ಸಿಗಳು ಸೇರಿದಂತೆ ನಾಲ್ಕು ಚಕ್ರಗಳ ವಾಹನಗಳು ಎರಡನೇ ಅತಿ ದೊಡ್ಡ ವಿಭಾಗವಾಗಿದ್ದು, ಒಟ್ಟು ವಾಹನಗಳ ಸಂಖ್ಯೆಯಲ್ಲಿ ಶೇಕಡ 14ರಷ್ಟು ಪಾಲು ಹೊಂದಿದೆ. ಕಳೆದ ಎರಡು ವರ್ಷಗಳಲ್ಲಿ ಇವುಗಳ ಸಂಖ್ಯೆ 26,796 ರಷ್ಟು ಹೆಚ್ಚಾಗಿದ್ದು, 2023ರಲ್ಲಿ 20,81,35ರಿಂದ 2025 ರಲ್ಲಿ 23,49,31ಕ್ಕೆ ತಲುಪಿದೆ. ಇದು ಸುಮಾರು ಶೇಕಡ 14ರಷ್ಟು ಹೆಚ್ಚಳವನ್ನು ಪ್ರತಿನಿಧಿಸುತ್ತದೆ.

ತ್ರಿಚಕ್ರ ವಾಹನ ಮತ್ತು ಬಸ್‌ಗಳು: ಮತ್ತೊಂದು ಕುತೂಹಲಕಾರಿ ವಿಚಾರವೆಂದರೆ ತ್ರಿಚಕ್ರ ವಾಹನಗಳು ಅತ್ಯಧಿಕ ಶೇಕಡ 16ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. 2023 ಮತ್ತು 2025ರ ನಡುವೆ 6,211 ವಾಹನಗಳನ್ನು ಸೇರ್ಪಡೆಗೊಂಡಿದೆ.

ಇದಕ್ಕೆ ವ್ಯತಿರಿಕ್ತ ಎಂಬಂತೆ ಖಾಸಗಿ ಶಾಲಾ, ಕಾಲೇಜು ಮತ್ತು ಕಾರ್ಖಾನೆ (ಕೆಎಸ್‌ಆರ್‌ಟಿಸಿ ಬಸ್ ಹೊರತುಪಡಿಸಿ) ಬಸ್‌ಗಳು 583 ವಾಹನಗಳು ಹೆಚ್ಚು ಸೇರ್ಪಡೆಯಾಗಿದ್ದು, ಇದು ಅಲ್ಪ ಏರಿಕೆಯನ್ನು ದಾಖಲಿಸಿರುವುದು ವಿಶೇಷವಾಗಿದೆ. ಈ ಮೂಲಕ ಇದು ಶೇಕಡ 4ರಷ್ಟು ಪ್ರತಿಶತ ಬೆಳವಣಿಗೆ ದರವನ್ನು ಬಿಂಬಿಸುತ್ತದೆ.

ಹೆಚ್ಚಿದ ವಾಹನ ಸಾಂದ್ರತೆ: ಮೈಸೂರಿನ ಜನಸಂಖ್ಯೆಗೆ ಅನುಗುಣವಾಗಿ ವಾಹನಗಳ ಸಂಖ್ಯೆಯನ್ನು ಹೋಲಿಕೆ ಮಾಡುವುದಾದರೆ 1,000 ಜನರಿಗೆ 1,250 ರಿಂದ 1,350 ವಾಹನಗಳಿವೆ ಎಂದು ಅಂದಾಜಿಸಲಾಗಿದೆ. ಈ ಮೂಲಕ ಪ್ರತಿ ಕಿ.ಮೀ.ಗೆ 800ರಿಂದ 1,000 ವಾಹನಗಳಿರುತ್ತವೆ. ಇದು ಖಾಸಗಿ ವಾಹನಗಳ ಅವಲಂಬನೆಯನ್ನು ಎತ್ತಿ ತೋರಿಸುತ್ತದೆ ಇದರಿಂದ ಸಹಜವಾಗಿಯೇ ಮೈಸೂರು ನಗರದ ಟ್ರಾಫಿಕ್ ಜಾಮ್, ಪಾರ್ಕಿಂಗ್ ಸಮಸ್ಯೆ ಹಾಗೂ ರಸ್ತೆಗಳ ಸಾಮರ್ಥ್ಯತೆಯನ್ನು ಬಿಂಬಿಸುತ್ತದೆ. ಇದರಿಂದ ಭವಿಷ್ಯದಲ್ಲಿ ಬೆಂಗಳೂರಿನಂತೆ ಮೈಸೂರಿನಲ್ಲಿ ಕೂಡ ಟ್ರಾಫಿಕ್ ಜಾಮ್ ಸಮಸ್ಯೆ ದೊಡ್ಡ ಸಮಸ್ಯೆಯಾಗಿ ತಲೆ ಎತ್ತಲಿದೆ ಎಂಬ ಆತಂಕ ಎದುರಾಗಿದೆ.

ವಾಹನ ದಟ್ಟಣೆ ನಿಯಂತ್ರಣಕ್ಕೆ ಅಗತ್ಯವಿರುವ ಕಡೆ ಮಾತ್ರ ಸಿಗ್ನಲ್‌ಲೈಟ್

ಪ್ರತಿಯೊಂದು ವೃತ್ತ ಹಾಗೂ ಜಂಕ್ಷನ್‌ಗಳಲ್ಲಿ ಸಂಚಾರಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ವಾಹನ ದಟ್ಟಣ ಕಡಿಮೆ ಮಾಡಿ, ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ ಸ್ಥಳಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಈ ಮೂಲಕ ಸ್ವಯಂ ಚಾಲಿತ ವ್ಯವಸ್ಥೆಯೊಂದಿಗೆ ಒಬ್ಬ ಅಧಿಕಾರಿ ಹೆಚ್ಚು ಟ್ರಾಫಿಕ್ ಸಿಗ್ನಲ್ ಲೈಟ್‌ಗಳ ಮೇಲ್ವಿಚಾರಣೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಹಲವು ಅಗತ್ಯವಿರುವ ವೃತ್ತ ಹಾಗೂ ಜಂಕ್ಷನ್ ಗಳಲ್ಲಿ ಹೊಸದಾಗಿ ಸಿಗ್ನಲ್ ಲೈಟ್ ಅಳವಡಿಸಲಾಗಿದೆ. ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಕೆಂಪೇಗೌಡ ವೃತ್ತ)ನಲ್ಲಿ ಫ್ಲೈಓವರ್ ನಿರ್ಮಾಣ ಮಾಡಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಮುಕ್ತಗೊಂಡರೆ ಆ ಸ್ಥಳದ ಟ್ರಾಫಿಕ್ ಜಾಮ್ ಕಿರಿಕಿರಿ ತಪ್ಪಲಿದೆ. ಮೈಸೂರು ಐಟಿ ಸೆಂಟರ್ ಮಾತ್ರವಲ್ಲದೆ ವಿಶ್ವ ವಿಖ್ಯಾತ ಪ್ರವಾಸಿ ತಾಣಗಳ ಸಂಗಮವಾಗಿದೆ. ಈ ಹಿನ್ನೆಲೆಯಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವಾರಾಂತ್ಯದಲ್ಲಿ ಸಾವಿರಾರು ವಾಹನಗಳ ಬರುವುದರಿಂದ ಸಹಜವಾಗಿ ಸಂಚಾರ ದಟ್ಟಣೆ ಆಗುತ್ತದೆ.

- ಕೆ.ಎಸ್.ಸುಂದರ್ ರಾಜ್, ಡಿಸಿಪಿ, (ಸಂಚಾರ ಮತ್ತು ಅಪರಾಧ) ಮೈಸೂರು.

ಮುಖ್ಯಸ್ಥರಾಗಿ ಪ್ರಧಾನಿ ಮೋದಿ ದಾಖಲೆ

ಅವರು ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿನ ದೀರ್ಘಕಾಲದ ಪ್ರಭಾವಿ ನಾಯಕರಲ್ಲಿ ಒಬ್ಬರೆನಿಸಿಕೊಂಡಿದ್ದಾರೆ.

ಮೋದಿ ಅವರು 2025ರ ಜುಲೈನಲ್ಲಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಮೀರಿಸಿ ನಿರಂತರ ಅವಧಿಯಲ್ಲಿ ಸೇವೆ ಸಲ್ಲಿಸಿದ ಎರಡನೇ ದೀರ್ಘಕಾಲದ ಪ್ರಧಾನ ಮಂತ್ರಿಯಾದರು. 2025ರ ಜುಲೈ 25ರಂದು ವೇಳೆಗೆ ಮೋದಿ 4,078 ದಿನಗಳನ್ನು ಪೂರ್ಣಗೊಳಿಸಿದ್ದರು. ಇಂದಿರಾ ಗಾಂಧಿ ಅವರು 1966 ಜನವರಿ 24ರಿಂದ 1977 ಮಾರ್ಚ್ 24ರವರೆಗೆ 4,077 ದಿನಗಳ ಕಾಲ ನಿರಂತರವಾಗಿ ಪ್ರಧಾನಮಂತ್ರಿಯಾಗಿದ್ದರು. ಪ್ರಧಾನಮಂತ್ರಿಯಾಗಿ ದೀರ್ಘಕಾಲ ನಿರಂತರ ಸೇವೆ ಸಲ್ಲಿಸಿದ ದಾಖಲೆ ಜವಾಹರಲಾಲ್ ನೆಹರು ಅವರದ್ದಾಗಿದ್ದು, ಗಮನಾರ್ಹವಾಗಿ ಮೋದಿ ಅವರು ಕೂಡ ನೆಹರು ಅವರಂತೆ ಮೂರು ಬಾರಿ ನಿರಂತರವಾಗಿ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷವನ್ನು ಗೆಲುವಿನತ್ತ ಕೊಂಡೊಯ್ದಿದ್ದಾರೆ. ಮೋದಿ ಅವರು ಕಾಂಗ್ರೆಸ್ಸೇತರ ನಾಯಕರಾಗಿ ಎರಡು ಪೂರ್ಣ ಅವಧಿಗಳನ್ನು ಪೂರೈಸಿ, ಸ್ಪಷ್ಟ ಬಹುಮತದೊಂದಿಗೆ ಮರು ಆಯ್ಕೆಯಾಗಿರುವ ಮೊದಲ ವ್ಯಕ್ತಿ. 1971ರ ಇಂದಿರಾ ಗಾಂಧಿ ನಂತರ ನಿರಂತರವಾಗಿ ಲೋಕಸಭೆ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬಂದ ಮೊದಲ ಹಾಲಿ ಪ್ರಧಾನಮಂತ್ರಿಯಾಗಿದ್ದಾರೆ.

ಬಾಗಲಕೋಟೆ ಬೂದಿಮುಚ್ಚಿದ ಕೆಂಡ

ಯಾವ ಪಕ್ಷದ ವಿರುದ್ಧವೂ ಅಲ್ಲ ಎಂದು ಹೇಳಿದ್ದಾರೆ. ನಾನು ಈವರೆಗೆ ಮೂರು ಬಾರಿ 'ಬಿ' ಫಾರಂ ಕೇಳಿದ್ದೇನೆ. ದುರಾದೃಷ್ಟ ವಶಾತ್ ನಮಗೆ ಟಿಕೆಟ್ ಸಿಕ್ಕಿಲ್ಲ. ಎಲ್ಲಾ ಸಮಾಜದವರೊಂದಿಗೆ ಚರ್ಚೆ ಮಾಡಿ, ಸೋಮವಾರ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತೇವೆ. ಎಲ್ಲಾ ಯುವಕರು, ಜನಸಾಗರದಲ್ಲಿ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸುತ್ತೇನೆ. ಈ ನಿರ್ಧಾರ ದಿಂದ ನಾನು ಹಿಂದೆ ಸರಿಯುವುದಿಲ್ಲ. ಯಾರ ಒತ್ತಡಕ್ಕೂ ಜಗ್ಗಲ್ಲ, ಬಗ್ಗಲ್ಲ. ಈ ಚುನಾವಣೆ ಕಣದಿಂದ ಹಿಂದೆ ಸರಿಯುವುದಿಲ್ಲ. ನಮಗೆ ಕಾಂಗ್ರೆಸ್ ಪಕ್ಷದಿಂದ ಬಹಳ ನೋವಾಗಿದೆ. ವಯಸ್ಸು ಕಡಿಮೆಯಾಗುವುದಿಲ್ಲ. ಇಷ್ಟು ದಿನಗಳ ಕಾಲ ಕಾದಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮುಸ್ಲಿಂರಿಗೆ, ಅಹಿಂದ ಜನರಿಗೆ ಅನ್ಯಾಯ ಆಗಿದೆ. ಯುವಕರು ಎಲ್ಲಾ ವರ್ಗದ ಜನರನ್ನು ಕರೆದು ಸನ್ಮಾನ ಮಾಡಿ, ಚುನಾವಣಾ ಕಣದಿಂದ ಹಿಂದೆ ಸರಿಯಕೂಡದು ಎಂದು ಹೇಳಿದ್ದಾರೆ. ಈ ರಣರಂಗದ ಮೈದಾನದಲ್ಲಿ ಒಂದು ಸಮಾಜದವರಿಂದ ಗೆಲ್ಲಲು ಸಾಧ್ಯವಿಲ್ಲ. ಎಲ್ಲಾ ಸಮಾಜದವರು ತೀರ್ಪು ನೀಡಿದರೆ ಮಾತ್ರ ವಿಧಾನಸೌಧದಲ್ಲಿ ಕೆಲಸ ಮಾಡಲು ಸಾಧ್ಯ. ಕೆಪಿಸಿಸಿಯವರು ಮಾಡಿರುವ ಆಯ್ಕೆಯಿಂದ ಜನ ಹೌಹಾರಿದ್ದಾರೆ. ಕೊನೆಗೂ ಮುಸ್ಲಿಂರಿಗೆ ಟಿಕೆಟ್ ಕೈ ತಪ್ಪಿದೆ. ಸಚಿವ ಜಮೀರ್ ಅಹ್ಮದ್ ಅವರು ಮಾಡಿದ ಪ್ರಯತ್ನ ವಿಫಲ ಆಗಿದೆ. ಸಮರ್ಥ್ ಶಾಮನೂರು ಕಾಂಗ್ರೆಸ್ ಅಭ್ಯರ್ಥಿ ಎಂದು ಅಧಿಕೃತವಾಗಿ ಘೋಷಣೆಯಾಗಿದೆ. ಇದು ಅಲ್ಪ ಸಂಖ್ಯಾತರಲ್ಲಿ ಸಾಕಷ್ಟು ಆಕ್ರೋಶಕ್ಕೆ ಕಾರಣವಾಗಿದೆ. ನಾವು ಟಿಕೆಟ್‌ಗಾಗಿ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಜಮೀರ್ ಅಹ್ಮದ್, ಸಲೀಂ ಅಹ್ಮದ್, ರಹಿಂ ಖಾನ್ ಅವರು ಟಿಕೆಟ್‌ಗಾಗಿ ಸಾಕಷ್ಟು ಹೋರಾಟ ಮಾಡಿದ್ದರೂ ಟಿಕೆಟ್ ನಮ್ಮ ಕೈತಪ್ಪಿದೆ ಎಂದು ತಿಳಿಸಿದ್ದಾರೆ.

ಬಾಗಲಕೋಟೆಯಲ್ಲೂ ಬಿಸಿ: ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಗೆ ಹೆಚ್.ವೈ.ಮೇಟಿ ಅವರ ಕಿರಿಯ ಪುತ್ರ ಉಮೇಶ್ ಮೇಟಿಗೆ ಟಿಕೆಟ್ ಘೋಷಣೆ ಮಾಡಿರುವುದು ಎಲ್ಲರಿಗೂ ಸಮಾಧಾನ ತಂದಿಲ್ಲ. ಈ ವಿಚಾರವಾಗಿ ಪ್ರಬಲ ಟಿಕೆಟ್ ಆಕಾಂಕ್ಷಿಗಳಾಗಿದ್ದ ಮೇಟಿ ಅವರ ಹಿರಿಯ ಪುತ್ರ ಮಲ್ಲಿಕಾರ್ಜುನ ಮೇಟಿ, ಪುತ್ರಿ ಮಹಾದೇವಿ ಮೇಟಿ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಈ ಕ್ಷೇತ್ರದಲ್ಲಿ ಮೇಟಿ ಕುಟುಂಬದವರ ಒಳಜಗಳವೇ ಕಾಂಗ್ರೆಸ್‌ಗೆ ತಲೆನೋವಾಗಿದೆ.

ಇಂದು ನಾಮಪತ್ರ ಸಲ್ಲಿಕೆ: ಎರಡೂ ಕ್ಷೇತ್ರಗಳ ಉಪಚುನಾವಣೆಗೆ ಕಾಂಗ್ರೆಸ್ ಹೈಕಮಾಂಡ್ ಅಭ್ಯರ್ಥಿಗಳನ್ನು ಪ್ರಕಟಿಸಿದ ಬೆನ್ನಲ್ಲೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್, ಇಬ್ಬರೂ ಅಭ್ಯರ್ಥಿಗಳಿಗೆ 'ಬಿ'ಫಾರಂ ವಿತರಣೆ ಮಾಡಿದ್ದು, ಸೋಮವಾರ(ಮಾ.23) ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಅಪಾರ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಎರಡೂ ಕ್ಷೇತ್ರಗ ಳಲ್ಲಿನ ನಾಮಪತ್ರ ಸಲ್ಲಿಕೆ ಮೆರವಣಿಗೆ ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಹಲವು ನಾಯಕರು ಮುಖಂಡರು ಪಾಲ್ಗೊಳ್ಳುವ ಮೂಲಕ ಶಕ್ತಿ ಪ್ರದರ್ಶನ ಮಾಡಲಿದ್ದಾರೆ ಎಂದು ಹೇಳಲಾಗಿದೆ.

ಮುಸ್ಲಿಂ ಸಮುದಾಯಕ್ಕೆ 'ಕೈ'ತಪ್ಪಿದ ಟಿಕೆಟ್: ರಸ್ತೆ ತಡೆದು ಪ್ರತಿಭಟನೆ; ಸಾಮೂಹಿಕ ನಾಮಪತ್ರ ಸಲ್ಲಿಕೆಗೆ ನಿರ್ಧಾರ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಬೆನ್ನಲ್ಲೇ ಮುಸ್ಲಿಂ ಸಮುದಾಯದವರು ಪ್ರತಿಭಟನೆ ನಡೆಸಿದ್ದಾರೆ. ನಗರದ ಅಖ್ತರ್ ರಜಾ ಸರ್ಕಲ್‌ನಲ್ಲಿ ಜಮಾಯಿಸಿದ್ದ ಮುಸ್ಲಿಂ ಸಮುದಾಯದ ಯುವಕರು, ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ದ್ರೋಹ ಬಗೆದಿದೆ ಎಂದು ಘೋಷಣೆ ಕೂಗಿ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ಸಾಕಷ್ಟು ಬಾರಿ ಮನವಿ ಮಾಡಿದರೂ ನಮ್ಮ ಮನವಿಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಕೇವಲ ನಮ್ಮನ್ನು ವೋಟ್ ಬ್ಯಾಂಕ್ ಆಗಿ ಬಳಕೆ ಮಾಡಿಕೊಂಡಿದ್ದಾರೆ. ಈ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಕೆ ನೀಡಿರುವ ಮುಖಂಡರು, ಸಾಮೂಹಿಕವಾಗಿ ನಾಮಪತ್ರ ಸಲ್ಲಿಸಲು ನಿರ್ಧರಿಸಿದ್ದಾರೆ. ಅತ್ತ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಚುನಾವಣೆ ಎದುರಿಸಲು ಮುಖಂಡ ಸಾದಿಕ್ ಪೈಲ್ವಾನ್ ಸಜ್ಜಾಗಿದ್ದಾರೆ.

ಬಂಗಾಳಿ ಹಿಂದೂಗಳ ಮೇಲಿನ ಪಾಕ್ ದಾಳಿ ನರಮೇಧವೆಂದು ಘೋಷಿಸಲು ಆಗ್ರಹ

ವಾಷಿಂಗ್ಟನ್: ಪಾಕಿಸ್ತಾನ ಸೇನೆ ಮತ್ತು ಜಮಾತ್-ಇ-ಇಸ್ಲಾಮಿ ಸಂಘಟನೆಯು 1971ರಲ್ಲಿ ಬಂಗಾಳಿ ಹಿಂದೂಗಳ ಮೇಲೆ ನಡೆಸಿದ ದಾಳಿಯನ್ನು 'ಯುದ್ಧಾಪರಾಧ ಮತ್ತು ನರಮೇಧ' ಎಂದು ಘೋಷಿಸುವಂತೆ ಸಂಸದ ಗ್ರೆಗ್ ಲ್ಯಾಂಡ್ಸ್‌ಮನ್, ಅಮೆರಿಕ ಸಂಸತ್ತಿನಲ್ಲಿ ನಿರ್ಣಯ ಮಂಡಿಸಿದ್ದಾರೆ.



ಗ್ರೆಗ್ ಲ್ಯಾಂಡ್ಸ್‌ಮನ್

ಪಾಕಿಸ್ತಾನ ಸರ್ಕಾರವು 1971ರ ಮಾರ್ಚ್ 25ರಂದು 'ಆಪರೇಷನ್ ಸರ್ಚ್‌ಲೈಟ್' ಕಾರ್ಯಾಚರಣೆ ಮೂಲಕ ಆಗಿನ ಪಶ್ಚಿಮ ಪಾಕಿಸ್ತಾನದ ನಾಯಕ ಶೇಖ್ ಮುಜಿಬುರ್ ರೆಹಮಾನ್ ಹಾಗೂ ಅವರ ಸೇನೆಯನ್ನು ಬಂಧಿಸಿತ್ತು. ನಂತರ ಬಂಗಾಳಿಗಳು ಮತ್ತು ಹಿಂದೂಗಳು ಸೇರಿದಂತೆ ಅಲ್ಲಿನ ಅಲ್ಪಸಂಖ್ಯಾತ ನಾಗರಿಕರ ಮೇಲೆ ಪಾಕಿಸ್ತಾನವು ನರಮೇಧ ನಡೆಸಿತ್ತು ಎಂದು ತಮ್ಮ ನಿರ್ಣಯದಲ್ಲಿ ಹೇಳಿರುವ ಗ್ರೆಗ್ ಲ್ಯಾಂಡ್ಸ್‌ಮನ್, ಪಾಕಿಸ್ತಾನದ ದುಷ್ಕೃತ್ಯವು ಮಾನವೀಯತೆ ಮೇಲೆ ನಡೆದ ದಾಳಿ ಎಂದು ಪರಿಗಣಿಸಿ ಅದನ್ನು ನರಮೇಧ ಎಂದೇ ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

ಘಟನೆ ಕುರಿತು ಢಾಕಾದಲ್ಲಿದ್ದ ಅಮೆರಿಕದ ಕಾನ್ಸುಲ್ ಜನರಲ್ ಆರ್ಚರ್ ಬ್ಲಡ್ ಅವರು ಟೆಲಿಗ್ರಾಮ್ ಕಳಿಸಿದ್ದರು. ಅದರಲ್ಲಿ ಪಾಕ್ ಕೃತ್ಯವನ್ನು ವಿರೋಧಿಸಿದ್ದ 20 ಜನ ಅಧಿಕಾರಿಗಳ ಸಹಿ ಇತ್ತು ಎಂದು ತಿಳಿಸಿದ್ದಾರೆ. ಆರ್ಚರ್ ಬ್ಲಡ್ ಕಳಿಸಿದ್ದ ಟೆಲಿಗ್ರಾಮ್, 'ಬ್ಲಡ್ ಟೆಲಿಗ್ರಾಮ್' ಎಂದೇ ಇತಿಹಾಸದಲ್ಲಿ ದಾಖಲಾಗಿದೆ. ಡೆಮಾಕ್ರೆಟಿಕ್ ಸಂಸದ ಲ್ಯಾಂಡ್ಸ್‌ಮನ್ ಮಂಡಿಸಿದ ನಿರ್ಣಯವನ್ನು ವಿದೇಶಾಂಗ ವ್ಯವಹಾರಗಳ ಸಮಿತಿಗೆ ಸಲ್ಲಿಸಲಾಗಿದೆ.

ಅಮೆರಿಕ ನಮ್ಮ ಮೇಲೆ ದಾಳಿ ಮಾಡಿದರೆ, ನಾವು ಭಾರತದ ಮೇಲೆ ಪ್ರತಿದಾಳಿ ಮಾಡುತ್ತೇವೆ

ಪಾಕ್ ಮಾಜಿ ರಾಯಭಾರಿ ಅಬ್ದುಲ್ ಬಾಸಿತ್ ವಿವಾದಾತ್ಮಕ ಹೇಳಿಕೆ

ನವದೆಹಲಿ: ಪಾಕಿಸ್ತಾನದ ಅಣು ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಅದರ ಪ್ರತಿಯಾಗಿ ಭಾರತದ ಪ್ರಮುಖ ನಗರಗಳಾದ ದೆಹಲಿ ಮತ್ತು ಮುಂಬೈ ಮೇಲೆ ದಾಳಿ ನಡೆಸುವುದಾಗಿ ಪಾಕಿಸ್ತಾನದ ಮಾಜಿ ರಾಯಭಾರಿ ಅಬ್ದುಲ್ ಬಾಸಿತ್ ಹೇಳಿದ್ದು, ಈ ವಿವಾದಾತ್ಮಕ ಹೇಳಿಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿದೆ.



ಅಬ್ದುಲ್ ಬಾಸಿತ್

ಚರ್ಚಾ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, ಯಾರಾದರೂ ನಮನ್ನು ಕೆಟ್ಟ ದೃಷ್ಟಿಯಿಂದ ನೋಡಿದರೆ ಭಾರತದ ಮೇಲೆ ಎಲ್ಲಿ ಬೇಕಾದರೂ ದಾಳಿ ಮಾಡುವುದನ್ನು ಬಿಟ್ಟು ಪಾಕಿಸ್ತಾನಕ್ಕೆ ಬೇರೆ ದಾರಿ ಇರುವುದಿಲ್ಲ. ನಾವು ಹಾಗೆ ಆಗಬಾರದು ಎಂದು ಬಯಸುತ್ತೇವೆ. ಭಾರತವೂ ಹಾಗೆ ಬಯಸುವುದಿಲ್ಲ ಎಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿದ್ದಾರೆ. ಅಬ್ದುಲ್ ಬಾಸಿತ್, ಭಾರತವನ್ನು ಗುರಿಯಾಗಿಸಿ ಮಾತನಾಡಿರುವುದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಬಾಸಿತ್, 2014ರಿಂದ 2017 ರವರೆಗೆ ನವದೆಹಲಿಯಲ್ಲಿ ಪಾಕಿಸ್ತಾನದ ಉನ್ನತ ರಾಜತಾಂತ್ರಿಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಭಾರತದೊಂದಿಗೆ ನೇರ ಸಂಪರ್ಕ ಸಾಧಿಸಿದ್ದರಿಂದ, ಅವರ ಹಿಂದಿನ ಪಾತ್ರವು ಪ್ರತಿಕ್ರಿಯೆಗೆ ಹೆಚ್ಚಿನ ಮಹತ್ವ ಇದೆ ಎಂದು ವ್ಯಾಖ್ಯಾನಿಸಲಾಗಿದೆ.

ಅಪ್ರಾಪ್ತ ಬಾಲಕಿ ಬರ್ಬರ ಹತ್ಯೆ ಪ್ರಕರಣ

ರಾಜಸ್ಥಾನದಲ್ಲಿ ಆರೋಪಿ ಬಂಧನ

ಬೆಂಗಳೂರು, ಮಾ.22– ನಗರದ ಡಿಜೆ ಹಳ್ಳಿಯಲ್ಲಿ ಕಳೆದ ಗುರುವಾರ ನಡೆದಿದ್ದ ಅಪ್ರಾಪ್ತ ಬಾಲಕಿಯ ಭೀಕರ ಕೊಲೆ ಪ್ರಕರಣದ ಆರೋಪಿಯನ್ನು ಬಂಧಿಸಲಾಗಿದೆ.



ತನ್ನನ್ನೇ ಮದುವೆಯಾಗಬೇಕಿದ್ದ ಭಾವಿ ಪತ್ನಿಯ ಮೇಲೆ ಅನುಮಾನಗೊಂಡು, ಆಕೆಯನ್ನು ಅತ್ಯಂತ ಕ್ರೂರವಾಗಿ ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಶಬೀಲ್‌ನನ್ನು ಬೆಂಗಳೂರು ಪೊಲೀಸರು ರಾಜಸ್ಥಾನದ ಅಜ್ಮೀರ್‌ನಲ್ಲಿ ಬಂಧಿಸಿದ್ದಾರೆ.

ಮೂಲತಃ ಕೋಲಾರ ಜಿಲ್ಲೆಯವಳಾದ ಅಪ್ರಾಪ್ತ ಬಾಲಕಿ, ರಂಜಾನ್ ಹಬ್ಬದ ಪ್ರಯುಕ್ತ ಬೆಂಗಳೂರಿನ ಡಿಜೆ ಹಳ್ಳಿಯಲ್ಲಿರುವ ತನ್ನ ಸಂಬಂಧಿಕರ ಮನೆಗೆ ಬಂದಿದ್ದಳು. 2025ರ ಜೂನ್ ತಿಂಗಳಲ್ಲಿ ಈ ಬಾಲಕಿ ಜೊತೆ ಆರೋಪಿ ಶಾಬೀಲ್‌ನ ನಿಶ್ಚಿತಾರ್ಥ ನಡೆದಿತ್ತು. ಮನೆಯವರ ಸಮ್ಮತಿ ಮೇರೆಗೆ ಮದುವೆಯೂ ನಿಶ್ಚಯವಾಗಿತ್ತು. ಆದರೆ ನಿಶ್ಚಿತಾರ್ಥದ ನಂತರ ಶಾಬೀಲ್‌ಗೆ ಬಾಲಕಿ ಮೇಲೆ ಅನುಮಾನ ಶುರುವಾಗಿತ್ತು. ಅವಳು ಬೇರೆಯವರ ಜೊತೆ ಸಂಪರ್ಕದಲ್ಲಿದ್ದಾಳೆ ಎಂದು ಶಂಕಿಸಿ, ಅವಳನ್ನು ಮುಗಿಸಲು ಸಂಚು ರೂಪಿಸಿದ್ದನು. ಕಳೆದ ಗುರುವಾರ ಬೆಳಗ್ಗೆ 9 ಗಂಟೆಯ ಸುಮಾರಿಗೆ ಮನೆಯವರಿಗೆ ತಿಳಿಯದಂತೆ ಬಾಲಕಿಯನ್ನು ಡಿಜೆ ಹಳ್ಳಿಯ ಸಕ್ಕರೆ ಮಂಡಿ ಬಳಿಯ ಪಾಳುಬಿದ್ದ ಮನೆಗೆ ಕರೆಸಿಕೊಂಡಿದ್ದನು. ಬಾಲಕಿ ತನ್ನ ಫೋನ್ ಅನ್ನು ಮನೆಯಲ್ಲೇ ಬಿಟ್ಟು ಆತನನ್ನು ಭೇಟಿಯಾಗಲು ಹೋಗಿದ್ದಳು.

ಆ ವೇಳೆ ಇಬ್ಬರ ನಡುವೆ ಶುರುವಾದ ಗಲಾಟೆ ತಾರಕಕ್ಕೇರಿದೆ. ಶಾಬೀಲ್ ತನ್ನ ಬಳಿಯಿದ್ದ ಚಾಕುವಿನಿಂದ ಬಾಲಕಿಯ ಎದೆಯ ಭಾಗ ಮತ್ತು ಗುಪ್ತಾಂಗಕ್ಕೆ ಮನಬಂದಂತೆ ಇರಿದಿದ್ದಾನೆ. ಆಕೆ ಕಿರುಚಾಡದಂತೆ ಬಾಯಿಯನ್ನು ಗಟ್ಟಿಯಾಗಿ ಒತ್ತಿ ಹಿಡಿದು, ಬಳಿಕ ಕತ್ತು ಸೀಳಿ ಭೀಕರವಾಗಿ ಹತ್ಯೆ ಮಾಡಿದ್ದಾನೆ. ರಕ್ತದ ಮಡುವಿನಲ್ಲಿ ಬಾಲಕಿ ಪ್ರಾಣಬಿಟ್ಟ ನಂತರ ಆರೋಪಿ ಅಲ್ಲಿಂದ ಪರಾರಿಯಾಗಿದ್ದನು.

ಬಾಲಕಿ ಬಹಳ ಹೊತ್ತಾದರೂ ಮನೆಗೆ ಬಾರದಿದ್ದಾಗ ಆತಂಕಗೊಂಡ ಪೋಷಕರು ಶಾಬೀಲ್‌ಗೆ ಕರೆ ಮಾಡಲು ಯತ್ನಿಸಿದ್ದಾರೆ. ಆದರೆ ಆತನ ಫೋನ್ ಸ್ವಿಚ್ ಆಫ್ ಆಗಿತ್ತು. ನಂತರ ಶಾಬೀಲ್ ಕುಟುಂಬಸ್ಥರನ್ನು ವಿಚಾರಿಸಿದಾಗ ಅವರು ಇಬ್ಬರು ಭೇಟಿಯಾಗುತ್ತಿದ್ದ ಪಾಳುಬಿದ್ದ ಮನೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಅಲ್ಲಿ ಹೋಗಿ ನೋಡಿದಾಗ ಬಾಲಕಿಯ ಮೃತದೇಹ ಪತ್ತೆಯಾಯಿತು. ಡಿಜೆ ಹಳ್ಳಿ ಪೊಲೀಸರು ಅಜ್ಮೀರ್‌ನಲ್ಲಿ ಆರೋಪಿಯನ್ನು ಬಂಧಿಸಿ, ಟ್ರಾನ್ಸಿಟ್ ವಾರೆಂಟ್ ಮೇಲೆ ಬೆಂಗಳೂರಿಗೆ ಕರೆತರುತ್ತಿದ್ದಾರೆ.

ಕತಾರ್‌ನಲ್ಲಿ ಸೇನಾ ಹೆಲಿಕಾಪ್ಟರ್ ಪತನ: 6 ಮಂದಿ ಸಾವು, ಓರ್ವ ನಾಪತ್ತೆ

ಕತಾರ್: ತಾಂತ್ರಿಕ ದೋಷದಿಂದ ಕತಾರ್ ರಕ್ಷಣಾ ಸಚಿವಾಲಯಕ್ಕೆ ಸೇರಿದ ಹೆಲಿಕಾಪ್ಟರ್ ಪತನಗೊಂಡು 6 ಮಂದಿ ಸಾವನ್ನಪ್ಪಿ, ಓರ್ವ ನಾಪತ್ತೆಯಾಗಿರುವ ಘಟನೆ ಕತಾರ್‌ನ ಪ್ರಾದೇಶಿಕ ಜಲಪ್ರದೇಶದಲ್ಲಿ ಸಂಭವಿಸಿದೆ. ಭಾನುವಾರ ಮುಂಜಾನೆ ಈ ಘಟನೆ ನಡೆದಿದ್ದು, ಈ ಕುರಿತು ಕತಾರ್ ರಕ್ಷಣಾ ಸಚಿವಾಲಯ ಅಧಿಕೃತ ಮಾಹಿತಿ ನೀಡಿದೆ. ಹೆಲಿಕಾಪ್ಟರ್‌ನಲ್ಲಿ ಒಟ್ಟು 7 ಮಂದಿಯಲ್ಲಿ ನಾಪತ್ತೆ ಯಾಗಿರುವ ಓರ್ವನಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಘಟನೆ ಕುರಿತು ಆಂತರಿಕ ಸಚಿವಾಲಯ ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದೆ.



ಇತಿಹಾಸ, ವಿಜ್ಞಾನ ಜೊತೆಗೆ ನಾಗರಿಕತೆ ಬೆಳೆದು ಬಂದ ಹಾದಿ ತಿಳಿಯಲು ಪುರಾತತ್ವ ಶಾಸ್ತ್ರ ಅಗತ್ಯ

ಸಂವಾದದಲ್ಲಿ ಪುರಾತತ್ವ-ಪ್ರಾಣಿಶಾಸ್ತ್ರಜ್ಞೆ ಡಾ.ಸಿ.ವಿ.ಶಾರದಾ ಅಭಿಪ್ರಾಯ

ಮೈಸೂರು, ಮಾ.22(ಎಂಕೆ)– ಪುರಾತತ್ವಶಾಸ್ತ್ರ ವೈವಿಧ್ಯತೆಯನ್ನೊಳಗೊಂಡ ಅಧ್ಯಯನ ವಿಷಯವಾಗಿದ್ದು, ಇತಿಹಾಸ, ವಿಜ್ಞಾನದ ಜೊತೆಗೆ ನಾಗರಿಕತೆ ಬೆಳೆದು ಬಂದ ದಾರಿಯ ಬಗ್ಗೆ ತಿಳಿದುಕೊಳ್ಳಬಹುದಾಗಿದೆ ಎಂದು ಪುರಾತತ್ವ-ಪ್ರಾಣಿಶಾಸ್ತ್ರಜ್ಞೆ ಡಾ.ಸಿ.ವಿ.ಶಾರದಾ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ-ಕಾಲೇಜು ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಭಾನುವಾರ ಆಯೋಜಿಸಿದ್ದ 'ಪ್ರಾಚೀನ ಜಗತ್ತು-ನವೀನ ದಿಗಂತಗಳು: ಪುರಾತತ್ವ ವಿಜ್ಞಾನದ ಮಿಂಚು ನೋಟಗಳು' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಸದಿಂದ ರಸ ತೆಗೆಯುವಂತೆ ಉತ್ಖನನದ ಮೂಲಕ ಅವಿಸ್ಮರಣಿಯ ಸಂಗತಿಗಳನ್ನು ತಿಳಿಯಲು ಪುರಾತತ್ವಶಾಸ್ತ್ರ ಸಹಕಾರಿಯಾಗಿದೆ ಎಂದರು.

ಹರಪ್ಪ ಮೊಹೆಂಜೋದಾರೋ ಹಾಗೂ ಸಿಂಧೂ ಬಯಲಿನ ನಾಗರಿಕತೆ ಸೇರಿದಂತೆ ಸಾವಿರಾರು ವರ್ಷಗಳ ಹಿಂದೆ ಜನ-ಜೀವನ ಶೈಲಿ ಹೇಗಿತ್ತು, ಕಾಲ ಬದಲಾದಂತೆ ಜೀವನ ಶೈಲಿಯಲ್ಲಾಗಿರುವ ಬದಲಾವಣೆ ಏನು. ಪ್ರಾಣಿಗಳೊಂದಿಗೆ ಹಿಂದೆ ಮನುಷ್ಯನ ಒಡನಾಟ ಹೇಗಿತ್ತು. ಪ್ರಸ್ತುತ ಹೇಗಿದೆ ಎಂಬುದರ ಜೊತೆಗೆ ಸಾಂಸ್ಕೃತಿಕ ಆಚರಣೆಗಳ ಬಗ್ಗೆಯೂ ಪುರಾತತ್ವ ಅಧ್ಯಯನದಿಂದ ತಿಳಿಯಬಹುದು. ಸಾವಿರಾರು ವರ್ಷಗಳ ಹಿಂದೆ ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇದ್ದಂತಹ ಒಡನಾಟ ಸಂಪೂರ್ಣವಾಗಿ ಬದಲಾಗಿದೆ ಎಂದು ಹೇಳಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ-ಕಾಲೇಜು ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಭಾನುವಾರ ಆಯೋಜಿಸಿದ್ದ 'ಪ್ರಾಚೀನ ಜಗತ್ತು-ನವೀನ ದಿಗಂತಗಳು: ಪುರಾತತ್ವ ವಿಜ್ಞಾನದ ಮಿಂಚು ನೋಟಗಳು' ಕುರಿತ ಸಂವಾದದಲ್ಲಿ ಪುರಾತತ್ವ-ಪ್ರಾಣಿಶಾಸ್ತ್ರಜ್ಞೆ ಡಾ.ಸಿ.ವಿ.ಶಾರದಾ ಉಪನ್ಯಾಸ ನೀಡಿದರು.

ಗುಜರಾತ್‌ನ ನಗರ ಪ್ರದೇಶದಲ್ಲಿ ಘೇಂಡಾಮೃಗ ಪಳೆಯುಳಿಕೆಗಳು ಸಿಕ್ಕಿದ್ದು, ಮೊದಲು ಆ ಪ್ರದೇಶ ಅರಣ್ಯದಿಂದ ಕೂಡಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಆದರೆ, ಇಂದು ಅದೇ ಪ್ರದೇಶ ಬರಡಾಗಿದ್ದು, ವಾತಾವರಣದಲ್ಲಿ ಸಾಕಷ್ಟು ಬದಲಾವಣೆಯಾಗಿರುವುದನ್ನು ಕಾಣುತ್ತೇವೆ. ಮರಗಳ ಆಯುಸ್ಸನ್ನು ತಿಳಿಯುವಂತೆ ಪುರಾತತ್ವ ಶಾಸ್ತ್ರದ ಮೂಲಕ ಆನೆ ದಂತಗಳ ಬಗ್ಗೆಯೂ ತಿಳಿಯಬಹುದು. ಈಜಿಪ್ಟ್‌ನ ಪಿರಮಿಡ್‌ಗಳ ಒಳಗಡೆ ಹೋಗಲು ಎಲ್ಲಿಯೂ ಜಾಗವಿಲ್ಲದಂತೆ ಕಾಣುತ್ತದೆ. ಆದರೆ, ಸಣ್ಣ ಸಣ್ಣ ರೋಬೋಟ್‌ಗಳ ಮೂಲಕ ಪಿರಮಿಡ್‌ಗಳ ಒಳಗೂ ಕೂಡ ಹೇಗಿದೆ ಎಂಬುದರ ಅಧ್ಯಯನ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪುರಾತತ್ವ ಶಾಸ್ತ್ರಜ್ಞರು ಡೈನೋಸಾರ್ ಬಗ್ಗೆ ಮಾತ್ರ ಅಧ್ಯಯನ ಮಾಡುತ್ತಾರೆ ಎಂದು ಬಹುತೇಕರು ಹೇಳುತ್ತಾರೆ. ಆದರೆ, ಮುಖ್ಯವಾಗಿ ಪ್ರಕೃತಿಯಲ್ಲಿನ ಮಣ್ಣಿನಿಂದ ಹಿಡಿದು ಎಲ್ಲಾ ರೀತಿಯ ವಸ್ತುಗಳ ಬಗ್ಗೆಯೂ ಅಧ್ಯಯನ ಮಾಡುವುದಾಗಿದೆ. ನಾನು ಪ್ರಾಣಿಗಳ ಮೂಳೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಸಸ್ಯಶಾಸ್ತ್ರವೂ ಪುರಾತತ್ವದೊಂದಿಗೆ ಸಂಬಂಧ ಹೊಂದಿದೆ ಎಂದರು.

ವೈಜ್ಞಾನಿಕ ವಿಧಾನ: ಪುರಾತತ್ವಶಾಸ್ತ್ರವು ಒಂದು ವೈಜ್ಞಾನಿಕ ಅಧ್ಯಯನ ವಿಧಾನವಾಗಿದ್ದು, ವೀಕ್ಷಣೆ, ಪ್ರಶ್ನೆಗಳು, ಊಹೆ, ಪ್ರಯೋಗ ಮತ್ತು ತೀರ್ಮಾನದ ಮೂಲಕ ಫಲಿತಾಂಶ ಪಡೆಯುವುದಾಗಿದೆ. ಮೊದಲೆಲ್ಲಾ ಪುರಾತತ್ವಶಾಸ್ತ್ರ ಅಧ್ಯಯನ ಮಾಡುವವರ ಸಂಖ್ಯೆ ಬಹಳ ಕಡಿಮೆ ಇತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಪುರಾತತ್ವಶಾಸ್ತ್ರಜ್ಞ ಅಧ್ಯಯನ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಪುರಾತತ್ವಶಾಸ್ತ್ರವೆಂದರೆ ಸಿಕ್ಕ ಸಿಕ್ಕ ಕಡೆಯೆಲ್ಲಾ ಕೆದಕುವುದಲ್ಲ. ಪ್ರತಿಯೊಂದು ಅಂಶವನ್ನು ಗಮನಿಸಿ, ಗುರ್ತಿಸಿ ಅದರ ಮೌಲ್ಯವನ್ನು ಹೆಚ್ಚಿಸುವುದಾಗಿದೆ. ಇದರಲ್ಲಿ ರಾಸಾಯನಶಾಸ್ತ್ರ, ಭೌತಶಾಸ್ತ್ರವೂ ಇದೆ ಎಂದರಲ್ಲದೆ ಫ್ರಾನ್ಸ್‌ನಲ್ಲಿ ತಾವು ನಡೆಸಿದ ಉತ್ಖನನದ ಬಗ್ಗೆ ತಿಳಿಸಿಕೊಟ್ಟರಲ್ಲದೆ, ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ ಆಯುಧಗಳನ್ನು ಪರಿಚಯಿಸಿದರು. ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಸೀತಾರಾಮ್, ಡಾ.ಮಮತಾ ಮತ್ತಿತರರು ಉಪಸ್ಥಿತರಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ...



ಎಂಪಿಎಲ್ ಸೀಸನ್ 5ರ ಲೀಗ್, ನಾಕ್‌ಔಟ್ ಮ್ಯಾಚ್‌ಗಳ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಕಾರ್ಪೋರೇಟರ್, ಜೆಡಿಎಸ್ ನಗರ ಅಧ್ಯಕ್ಷ ಎಸ್‌ಬಿಎಂ ಮಂಜು ಚಾಲನೆ ನೀಡಿದರು. ಆಯೋಜಕ ಗೋಕುಲಂ ಅಖಿಲೇಶ್, ರವಿ, ಮಹದೇಶ್ವರ, ಬಡಾವಣೆಯ ಅನಿಲ್, ನವನೀತ್, ಹೆಬ್ಬಾಳ್ ಚಂದನ್, ಮಧು, ನವನೀತ್, ಕುಂಬಾರಕೊಪ್ಪಲ್ ಪುರುಷೋತ್ತಮ್, ಸಚಿನ್ ಮತ್ತಿತರರಿದ್ದರು.

ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಯುವಕನ ಬರ್ಬರ ಹತ್ಯೆ

ಬೆಂಗಳೂರು, ಮಾ.22– ಯುವಕನನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಇಂದು ಮುಂಜಾನೆ ರಾಮಮೂರ್ತಿನಗರದ ಟಿ.ಸಿ. ಪಾಳ್ಯ ಮುಖ್ಯರಸ್ತೆಯಲ್ಲಿ ನಡೆದಿದೆ.



ಕಿರಣ್

ಸ್ಥಳೀಯ ನಿವಾಸಿ ಕಿರಣ್(25) ಹತ್ಯೆಯಾದ ಯುವಕ. ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಈತನನ್ನು ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಕುಡಿದು ಗಲಾಟೆ ಮಾಡಿದ ಪ್ರಕರಣಗಳು ಸೇರಿದಂತೆ ಕೊಲೆಯಾದ ಕಿರಣ್ ವಿರುದ್ಧ ಕೆ.ಆರ್.ಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸುಮಾರು 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಹಳೆಯ ದ್ವೇಷವೇ ಕೊಲೆಗೆ ಕಾರಣವಾಗಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಘಟನೆಗೆ ಮುನ್ನ ರಾತ್ರಿ ಕಿರಣ್ ಕುಡಿದು ಗಲಾಟೆ ಮಾಡಿದ್ದು, ತಡರಾತ್ರಿವರೆಗೆ ವಾಗ್ವಾದ ನಡೆದ ಬಳಿಕ ಮುಂಜಾನೆ ಈ ದಾಳಿ ನಡೆದಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದು, ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದಾರೆ. ಕಿರಣ್ ತನ್ನ ತಾಯಿಯೊಂದಿಗೆ ಕಳೆದ 4 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಆಟೋ ಚಾಲನೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಎಂದು ಸ್ಥಳೀಯರು ತಿಳಿಸಿದ್ದಾರೆ.

ಅಮಾನತಾಗಿದ್ದ ಇನ್ಸ್‌ಪೆಕ್ಟರ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲು

ಬೆಂಗಳೂರು: ಅಮಾನತು ಕ್ರಮದ ಬೆನ್ನಲ್ಲೇ ಮೂಡುಬಿದಿರೆ ಇನ್ಸ್‌ಪೆಕ್ಟರ್ ಸಂದೇಶ್ ವಿರುದ್ಧ ಶಿಕ್ಷಕಿ ಮೇಲಿನ ಅತ್ಯಾಚಾರ ಆರೋಪದಡಿ ವೇಣೂರು ಪೊಲೀಸ್ ಠಾಣೆಯಲ್ಲಿ ಹೊಸ ಪ್ರಕರಣ ದಾಖಲಾಗಿದೆ.

ಬೆಳ್ತಂಗಡಿ ತಾಲೂಕಿನ ಖಾಸಗಿ ಶಿಕ್ಷಣ ಸಂಸ್ಥೆಯ ಮುಖ್ಯ ಶಿಕ್ಷಕಿ ನೀಡಿದ ದೂರಿನಲ್ಲಿ, 2018ರಿಂದ 2023ರವರೆಗೆ ಸಂದೇಶ್ ಹಲವು ಬಾರಿ ಮನೆಗೆ ಬಂದು ಬಲವಂತವಾಗಿ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ದೂರಿನನ್ವಯ ಪೊಲೀಸರು ಭಾರತೀಯ ದಂಡ ಸಂಹಿತೆಯ 376 (2)(ಚಿ)(1), 376(2)(ಟಿ), 384 ಹಾಗೂ 506 ಕಲಂಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.



ಇದಕ್ಕೂ ಮುನ್ನ ಸಂದೇಶ್ ವಿರುದ್ಧ ಇಬ್ಬರು ಮಹಿಳೆಯರು ಮಾಡಿದ್ದ ಲೈಂಗಿಕ ಕಿರುಕುಳ ಆರೋಪಗಳು ಸುಳ್ಳು ಎಂದು ಪೊಲೀಸ್ ವರದಿ ತಿಳಿಸಿತ್ತು. ಮಂಗಳೂರು ಕಮಿಷನರ್ ಸುಧೀರ್‌ಕುಮಾರ್ ರೆಡ್ಡಿ ಕೂಡ ಈ ಆರೋಪಗಳು ಪ್ರೇರಿತವಾಗಿವೆ ಎಂದು ಹೇಳಿಕೆ ನೀಡಿದ್ದರು. ಆದರೀಗ ಅತ್ಯಾಚಾರ ದೂರು ದಾಖಲಾಗಿರುವುದರಿಂದ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದಂತಾಗಿದೆ.

ಮಾ.31ಕ್ಕೆ 'ಸಖಿ ಸಂಭ್ರಮ'; ವಿವಿಧ ಸ್ಪರ್ಧೆಗಳು

ಮೈಸೂರು,ಮಾ.22–ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಸಖಿ ಫೌಂಡೇಶನ್, ಸೂರ್ಯ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ರಾಮಕೃಷ್ಣನಗರದ ಸಿದ್ಧಿವಿನಾಯಕ ದೇವಸ್ಥಾನದ ಸಭಾಂಗಣದಲ್ಲಿ ಮಾ.31ರಂದು ಬೆಳಗ್ಗೆ 10.30ಕ್ಕೆ ಜನಪದ ಸಮೂಹ ಗೀತಗಾಯನ, ದೇಸೀ ಪಾನೀಯ ತಯಾರಿ, ಸಖಿಗೊಂದು ಸ್ಯಾರಿ, ಥಟ್ ಅಂತ ಹಾಡಿ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ. ಭಾಗವಹಿಸಲು ಆಸಕ್ತಿ ಇರುವವರು ಮಾರ್ಚ್ 28ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ 9964790442 ಅಥವಾ 8310306882 ಅನ್ನು ಸಂಪರ್ಕಿಸಬಹುದು.

ಕಲಾವಿದರೊಂದಿಗೆ ಸಂವಾದ, ಅತ್ಯಾಕರ್ಷಕ ಕಲಾಕೃತಿಗಳ ಪ್ರದರ್ಶನ

ಮೈಸೂರು, ಮಾ.22(ಎಂಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಸಮೀಪದಲ್ಲಿರುವ ಹೆರಿಟೇಜ್ ಹೌಸ್ ಆವರಣದಲ್ಲಿ ಮೊದಲ ಬಾರಿಗೆ ಆಯೋಜಿಸಿದ್ದ 'ಕಲಾವಿದರೊಂದಿಗೆ ಸಂವಾದ ಹಾಗೂ ಅತ್ಯಾಕರ್ಷಕ ಕಲಾಕೃತಿಗಳ ಪ್ರದರ್ಶನ' ಕಾರ್ಯಕ್ರಮ ಯಶಸ್ವಿಯಾಯಿತು.

ದಿ ಆರ್ಟ್ ಪಾರ್ಕ್ ಸಂಸ್ಥೆ ಮತ್ತು ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗುರುರಾಜ್ ಎಸ್.ನಾಯಕ್, ಕೆ.ರಾಘವೇಂದ್ರ, ಎಲ್.ಯೋಗಾನಂದ, ವಿಜಯರಾವ್, ವಿಚಾರಣ್, ಮಂಜುನಾಥ್, ಸೂರ್ಯ, ಸಿದ್ದರಾಮ್ ಮತ್ತು ವೇಣು ಗೋಪಾಲ್ ಸೇರಿದಂತೆ 30ಕ್ಕೂ ಹೆಚ್ಚು ಕಲಾವಿದರು ತಮ್ಮ ನೂರಾರು ಆಕರ್ಷಕ ಕಲಾಕೃತಿಗಳನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆದರು. ಬಳಿಕ ವೇದಿಕೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಆಂಕೊಲಜಿ ಅಧ್ಯಕ್ಷ ಬಿ.ಎಸ್. ಅಜಯ್ ಕುಮಾರ್, ಎಲ್ಲಾ ಕಲಾ ಪ್ರಕಾರಗಳಿಗೆ ಬೆಂಬಲ ನೀಡುವುದು. ವಿಶೇಷವಾಗಿ ಗ್ರಾಮೀಣ ಮತ್ತು ಯುವ ಕಲಾವಿದರಿಗೆ ವಿದ್ಯಾರ್ಥಿವೇತನದ ಜೊತೆಗೆ ಮಾರ್ಗದರ್ಶನ ಮತ್ತು ಅವಕಾಶಗಳನ್ನು ಒದಗಿಸುವ ಉದ್ದೇಶದೊಂದಿಗೆ ಸಂವಾದ ಮತ್ತು ಕಲಾಕೃತಿಗಳ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.



ಮೈಸೂರಿನ ಹೆರಿಟೇಜ್ ಹೌಸ್‌ನಲ್ಲಿ 'ಕಲಾವಿದರೊಂದಿಗೆ ಸಂವಾದ, ಅತ್ಯಾಕರ್ಷಕ ಕಲಾಕೃತಿಗಳ ಪ್ರದರ್ಶನ' ನಡೆಯಿತು.

ಮೊದಲ ಬಾರಿಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಆಯೋಜನೆಗೊಂಡ ಕಾರ್ಯಕ್ರಮಕ್ಕೆ ದೊರೆತ ಉತ್ತಮ ಪ್ರತಿಕ್ರಿಯೆಯಿಂದ ಪ್ರೇರಣೆ ನೀಡಿದಂತಾಗಿದೆ. ಮುಂದಿನ ದಿನಗಳಲ್ಲಿಯೂ ಇಂತಹ ಕಲಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಿ, ವಿಸ್ತರಿಸುವ ಮೂಲಕ ಸಾಂಸ್ಕೃತಿಕ ಪರಿಸರವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು. ದಿ ಆರ್ಟ್ ಪಾರ್ಕ್ ಸಂಸ್ಥಾಪಕ ಎಸ್.ಜಿ. ವಾಸುದೇವ್, ಅಧ್ಯಕ್ಷರಾದ ಭಾಗ್ಯ ಅಜಯ್ ಕುಮಾರ್, ಸಿ.ಎಫ್.ಟಿ.ಆರ್.ಐ. ಮಾಜಿ ನಿರ್ದೇಶಕ ಪ್ರಕಾಶ್ ಮತ್ತಿತರರಿದ್ದರು.

ದೇಶ - ವಿದೇಶ

ಪ್ರೀತಿಸಿ ಮದುವೆಯಾದವ ವರದಕ್ಷಿಣೆಗಾಗಿ ಪತ್ನಿಯನ್ನೇ ಕೊಂದ

ಚಂಡೀಗಢ: ವರದಕ್ಷಿಣೆಗಾಗಿ ನಾಲ್ಕು ತಿಂಗಳ ಹಿಂದಷ್ಟೇ ಪ್ರೀತಿಸಿ ಮದುವೆಯಾಗಿದ್ದ ಪತ್ನಿಯನ್ನು ಪತಿ ಹತ್ಯೆ ಮಾಡಿರುವ ಘಟನೆ ಹರಿಯಾಣದ ಗುರುಗ್ರಾಮ್‌ನಲ್ಲಿ ನಡೆದಿದೆ.



ಕಾಜಲ್ ಹತ್ಯೆಯಾದ ಪತ್ನಿ. ರೇಡಿಯಾಲಜಿಸ್ಟ್ ಆಗಿರುವ ಅರುಣ್ ಶರ್ಮಾ ಮತ್ತು ನರ್ಸ್ ಕಾಜಲ್ ಗುರುಗ್ರಾಮ್‌ನ ನರ್ಸಿಂಗ್ ಹೋಂನಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಅವರಿಬ್ಬರ ಸ್ನೇಹ ಪ್ರೀತಿಯಾಗಿ ಮಾರ್ಪಟ್ಟು ಕಳೆದ ನವೆಂಬರ್‌ನಲ್ಲಿ ಮದುವೆಯಾಗಿದ್ದರು. ಬಳಿಕ ವರದಕ್ಷಿಣೆ ಕಿರುಕುಳ ಕೊಟ್ಟು ಆಕೆಯ ಮೇಲೆ ಅರುಣ್ ಹಲ್ಲೆ ನಡೆಸುತ್ತಿದ್ದ ಎಂದು ಕಾಜಲ್ ಸಹೋದರ ಆರೋಪಿಸಿದ್ದಾರೆ. ಮಾ.4ರ ಹೋಳಿಯಂದು ಕಾಜಲ್-ಅರುಣ್ ದಂಪತಿ ಗುರುಗ್ರಾಮ್‌ನ ಗರ್ಹಿ ಹರ್ಸಾರುವಿನಲ್ಲಿರುವ ಕಾಜಲ್ ತವರು ಮನೆಗೆ ಬಂದಿದ್ದರು. ಮಾ.17ರಂದು ಅರುಣ್, ಕಾಜಲ್‌ಗೆ ದೈಹಿಕವಾಗಿ ಹಲ್ಲೆ ಮಾಡಿದ್ದ. ಸ್ವಲ್ಪ ಸಮಯದ ನಂತರ, ಕಾಜಲ್ ಮೂಗಿನಿಂದ ರಕ್ತಸ್ರಾವವಾಗಿ ಪ್ರಜ್ಞಾಹೀನಳಾಗಿ ಬಿದ್ದಿದ್ದಳು. ಕೂಡಲೇ ಕಾಜಲ್‌ಳನ್ನು ಆಸ್ಪತ್ರೆಗೆ ರವಾನಿಸಿದರು. ಆದರೆ ಅಷ್ಟು ಹೊತ್ತಿಗಾಗಲೇ ಆಕೆಯ ಉಸಿರು ನಿಂತುಹೋಗಿತ್ತು. ಇನ್ನು ಮನೆಯ ಶೌಚಾಲಯದಲ್ಲಿ ಸಿರಿಂಜ್ ಸಿಕ್ಕಿದ್ದು, ಅರುಣ್ ಕಾಜಲ್‌ಗೆ ವಿಷದ ಇಂಜೆಕ್ಷನ್ ನೀಡಿ ಹತ್ಯೆ ಮಾಡಿದ್ದಾನೆ ಎಂದು ಆರೋಪಿಸಿದ್ದಾರೆ.

ಹಾರ್ಮುಜ್ ಜಲಸಂಧಿ ಓಪನ್ ಮಾಡಿ: ಇರಾನ್‌ಗೆ 48 ಗಂಟೆಗಳ ಗಡುವು

ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು 48 ಗಂಟೆಯೊಳಗೆ ಸಂಪೂರ್ಣ ಓಪನ್ ಮಾಡಬೇಕು ಎಂದು ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಡುವು ನೀಡಿದ್ದಾರೆ. ವಿಶ್ವದ ತೈಲ ಪೂರೈಕೆಯ 5ನೇ ಒಂದು ಭಾಗದಷ್ಟು ತೈಲವನ್ನು ಸಾಗಿಸುವ ಹಾರ್ಮುಜ್ ಜಲಸಂಧಿಯನ್ನು ಹಡಗು ಸಂಚಾರಕ್ಕಾಗಿ ಇರಾನ್ ಮತ್ತೆ ತೆರೆಯಬೇಕು. ಇಲ್ಲದಿದ್ದರೆ, ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಟ್ರಂಪ್ ಅವರ ಎಚ್ಚರಿಕೆಗೆ ಪ್ರತಿಕ್ರಿಯಿಸಿರುವ ಇರಾನ್ ಸೇನೆಯು, ಈ ಪ್ರದೇಶದಲ್ಲಿ ಅಮೆರಿಕಕ್ಕೆ ಸೇರಿದ ಎಲ್ಲಾ ಇಂಧನ, ತಂತ್ರಜ್ಞಾನ ಮತ್ತು ಉಪ್ಪು ನೀರಿನ ನಿರ್ಮೂಲನ ಮೂಲ ಸೌಕರ್ಯಗಳನ್ನು ಟಾರ್ಗೆಟ್ ಮಾಡಿ ಹೊಡೆಯುವುದಾಗಿ ಬೆದರಿಕೆ ಹಾಕಿದೆ. ಶತ್ರುಗಳು ಇರಾನ್‌ನ ಇಂಧನ ಮೂಲ ಸೌಕರ್ಯವನ್ನು ದಾಳಿಗೆ ಗುರಿಯಾಗಿಸಿಕೊಂಡರೆ, ಅಮೆರಿಕ ಮತ್ತು ಈ ಪ್ರದೇಶದ ಆಡಳಿತಕ್ಕೆ ಸೇರಿದ ಎಲ್ಲಾ ಇಂಧನ, ಮಾಹಿತಿ ತಂತ್ರಜ್ಞಾನ ಮತ್ತು ಉಪ್ಪುನೀರಿನ ನಿರ್ಮೂಲನ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡಲಾಗುವುದು ಎಂದು ಇರಾನಿನ ಮಿಲಿಟರಿ ಕಮಾಂಡ್ ಕೌಂಟರ್ ಕೊಟ್ಟಿದ್ದಾರೆ. ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ನೌಕೆಗಳಿಗೆ ತಡೆಯಿಂದ ಜಾಗತಿಕ ಮಾರುಕಟ್ಟೆ ಅಸ್ಥಿರವಾಗಿದೆ. ಜಗತ್ತಿನ ತೈಲ ಸಾಗಣೆಗೆ ಹಾರ್ಮುಜ್ ಜಲಸಂಧಿ ಅತ್ಯಂತ ಪ್ರಮುಖ ಮಾರ್ಗ. ಜಾಗತಿಕ ತೈಲ ಸರಬರಾಜಿನ ಸುಮಾರು 20% ಭಾಗ ಈ ಮಾರ್ಗದ ಮೂಲಕವೇ ಸಾಗಣೆಯಾಗಲಿದೆ.



ಮಾತಾ ವೈಷ್ಣೋದೇವಿ ಬಳಿ ಜನದಟ್ಟಣೆ; ಯಾತ್ರೆ ಸ್ಥಗಿತ

ಶ್ರೀನಗರ: ಚೈತ್ರ ನವರಾತ್ರಿಯ ಪ್ರಯುಕ್ತ ಜಮ್ಮುವಿನ ಪ್ರಸಿದ್ಧ ಮಾತಾ ವೈಷ್ಣೋದೇವಿ ದೇವಸ್ಥಾನಕ್ಕೆ ಭಕ್ತರ ವಿಪರೀತ ದಟ್ಟಣೆಯಾಗಿದೆ. ಇದರಿಂದ ವೈಷ್ಣೋದೇವಿ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ದೇವಸ್ಥಾನದ ಮಂಡಳಿಯ ನಿರ್ಧಾರವನ್ನು ಜಿಲ್ಲಾಡಳಿತ ಘೋಷಿಸಿದೆ. ದೇವಸ್ಥಾನಕ್ಕೆ ಭಕ್ತರ ಭೇಟಿ ವಿಪರೀತವಾಗಿ ಹೆಚ್ಚಿದ್ದರಿಂದ, ಮುಂಜಾಗ್ರತಾ ಕ್ರಮವಾಗಿ ಯಾತ್ರೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಯಾವುದೇ ಅಹಿತರಕರ ಘಟನೆಗಳು ನಡೆಯದಂತೆ ಭಾರಿ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದೆ.



ಕತ್ರಾದಲ್ಲಿರುವ ಬೇಸ್ ಕ್ಯಾಂಪ್ ಮತ್ತು ದೇವಸ್ಥಾನದ ಮಾರ್ಗದಲ್ಲಿ ಭಕ್ತರ ಸಂಖ್ಯೆ ಮಿತಿ ಮೀರಿದ್ದರಿಂದ, ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಯಾತ್ರೆ ಸ್ಥಗಿತಗೊಳಿಸಲಾಗಿದೆ ಎಂದು ವಿವರಿಸಿದೆ. ಹೊಸದಾಗಿ ಬರುವ ಭಕ್ತರಿಗೂ ನೋಂದಣಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ದೇವಾಲಯದ ಮಂಡಳಿ ಮತ್ತು ಸ್ಥಳೀಯ ಜಿಲ್ಲಾ ಆಡಳಿತವು ಪರಿಸ್ಥಿತಿಯನ್ನು ಗಮನಿಸುತ್ತಿದ್ದು, ದಟ್ಟಣೆ ಕಡಿಮೆಯಾದ ನಂತರ ಯಾತ್ರೆ ಪುನರಾರಂಭಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ವೈರಿಗಳಿಗೆ ಮಾತ್ರ ಹಾರ್ಮುಜ್ ಜಲಸಂಧಿ ಮುಚ್ಚಲಾಗಿದೆ: ಇರಾನ್

ದುಬೈ: ಕೊಲ್ಲಿ ರಾಷ್ಟ್ರಗಳಲ್ಲಿ ಸಾಗರ ಸುರಕ್ಷತೆಗಾಗಿ ಸಹಕರಿಸಲು ಇರಾನ್ ಸಿದ್ಧವಾಗಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಮುದ್ರಯಾನ ಸಂಘಟನೆಯ (ಐಎಂಒ) ಇರಾನ್ ಪ್ರತಿನಿಧಿ ತಿಳಿಸಿದ್ದಾರೆ.



ಅಂತರರಾಷ್ಟ್ರೀಯ ಸಮುದ್ರಯಾನ ಸಂಘಟನೆಯೊಂದಿಗೆ ಸಹಕರಿಸಲು ಇರಾನ್ ಬದ್ಧವಾಗಿದೆ ಎಂದು ಇರಾನ್ ಪ್ರತಿನಿಧಿ ಅಲಿ ಮೌಸವಿ ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿಯಲ್ಲಿ ಇರಾನ್‌ನ ವೈರಿಗಳು ಹಾಗೂ ಅವರೊಂದಿಗೆ ನಂಟು ಹೊಂದಿರುವ ರಾಷ್ಟ್ರಗಳನ್ನು ಹೊರತುಪಡಿಸಿ ಇತರೆ ಎಲ್ಲ ಹಡಗುಗಳ ಸಂಚಾರಕ್ಕೆ ಮುಕ್ತವಾಗಿದೆ ಎಂದು ಅಲಿ ಮೌಸವಿ ಹೇಳಿದ್ದಾರೆ.

ಇರಾನ್‌ನೊಂದಿಗೆ ಭದ್ರತೆ ಹಾಗೂ ಸುರಕ್ಷತಾ ವ್ಯವಸ್ಥೆ ಖಚಿತಪಡಿಸುವ ಮೂಲಕ ಕಿರಿದಾದ ಜಲಮಾರ್ಗದ ಮೂಲಕ ಸಂಚಾರ ಸಾಧ್ಯ ಎಂದು ಅವರು ಹೇಳಿದ್ದಾರೆ.

ರಾಜತಾಂತ್ರಿಕತೆ ಇರಾನ್‌ನ ಆದ್ಯತೆಯಾಗಿದೆ. ಪರಸ್ಪರ ನಂಬಿಕೆ ಹಾಗೂ ವಿಶ್ವಾಸವು ಹೆಚ್ಚು ಮುಖ್ಯವೆನಿಸುತ್ತದೆ. ಅಮೆರಿಕ ಹಾಗೂ ಇಸ್ರೇಲ್ ನಡೆಸಿರುವ ದಾಳಿಯು ಹಾರ್ಮುಜ್ ಜಲಸಂಧಿಯಲ್ಲಿ ಈಗಿನ ಪರಿಸ್ಥಿತಿಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

ಪಾಕ್ ಭಯೋತ್ಪಾದಕ ಮಟ್ಟ ಹಾಕಲು 350 ಎಸ್‌ಒಜಿ ಸಿಬ್ಬಂದಿ ನಿಯೋಜನೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ದಟ್ಟಾರಣ್ಯ ಹಾಗೂ ಕಡಿದಾದ ಕಣಿವೆ ಪ್ರದೇಶಗಳಲ್ಲಿ ಅಡಗಿರುವ ಪಾಕಿಸ್ತಾನದ ಭಯೋತ್ಪಾದಕರನ್ನು ಮಟ್ಟ ಹಾಕಲು ವಿಶೇಷ ಕಾರ್ಯಾಚರಣೆ ಗುಂಪಿನ(ಎಸ್‌ಒಜಿ) 350 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸ್‌ನ ವಿಶೇಷ ಘಟಕವಾಗಿರುವ ಎಸ್‌ಒಜಿ, ಭಯೋತ್ಪಾದನಾ ನಿಗ್ರಹ ಸೇರಿದಂತೆ ಕ್ಲಿಷ್ಟಕರವಾದ ಭೂಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುವ ಪರಿಣಿತಿ ಹೊಂದಿದೆ. ಎಸ್‌ಒಜಿ ಗುಂಪಿನ ಸಿಬ್ಬಂದಿ, ಆಂಧ್ರ ಪ್ರದೇಶದಲ್ಲಿ ವಿಶೇಷ ತರಬೇತಿಯನ್ನು ಪಡೆದಿದ್ದಾರೆ. ಇದರ ಮೊದಲ ಗುಂಪು 10 ತಿಂಗಳ ಹಿಂದೆ ವಿಶೇಷ ತರಬೇತಿ ಪಡೆದಿದ್ದು, ಸದ್ಯ ಜಮ್ಮು-ಕಾಶ್ಮೀರದ ಕಠಿಣ ಸ್ಥಳಗಳಲ್ಲಿ ಕಾರ್ಯಾಚರಣೆ ಆರಂಭಿಸಲಿದೆ.



2025ರ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ನಡೆದ ಭಯೋತ್ಪಾದನಾ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಈ ದಾಳಿಯು ಅತ್ಯಂತ ಕಠಿಣ ಭೂಪ್ರದೇಶದಲ್ಲೂ ಕಾರ್ಯಾಚರಿಸುವ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟಿತು. ಭಯೋತ್ಪಾದಕರ ಅಡಗುತಾಣವಾಗಿರುವ ಕಡಿದಾದ ಅರಣ್ಯ ಪ್ರದೇಶದಲ್ಲಿ ಎಸ್‌ಒಜಿ ತಂಡವು ಕಾರ್ಯಾಚರಣೆ ನಡೆಸಲಿದೆ. ಇದು ಕಾರ್ಯತಂತ್ರ ಯೋಜನೆಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರಣ್ಯ ಇಲಾಖೆಯಿಂದ ಪುಂಡಾನೆ ಸೆರೆ ಯಶಸ್ವಿ

ಸಿದ್ದಾಪುರ, ಮಾ.22–ಸಾರ್ವಜನಿಕರಲ್ಲಿ ಆತಂಕ ಸೃಷ್ಟಿ ಮಾಡುತ್ತಿದ್ದ ಪುಂಡಾನೆಯನ್ನು ಸೆರೆ ಹಿಡಿಯುವಲ್ಲಿ ಕೊನೆಗೂ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಅಭಿಮನ್ಯು ಮಹೇಂದ್ರ, ಕಂಜನ್, ಭೀಮಾ, ಸುಗ್ರೀವ, ಹರ್ಷ ಆನೆಗಳೊಂದಿಗೆ ಅರಣ್ಯ ಇಲಾಖೆ ಸಿಬ್ಬಂದಿ ಸತತ 5 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದಾಗ ಕೊನೆಗೆ ಚೆಂಬೆಬೆಳ್ಳೂರು ಕಾಫಿ ತೋಟವೊಂದರ ಸಮೀಪ ಕಂಡು ಬಂದಿದೆ. ವನ್ಯಜೀವಿ ವೈದ್ಯಾಧಿಕಾರಿ ಡಾ ರಮೇಶ್, ಕುಶಾಲನಗರ ಉಪ ಅರಣ್ಯ ಅಧಿಕಾರಿ ಶಾರ್ಪ್ ಶೂಟರ್ ಕನ್ನಂಡ ರಂಜನ್ ಬಂದೂಕಿನ ಮೂಲಕ ಅರವಳಿಕೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ ನಂತರ ಸಾಕಾನೆಗಳ ಸಹಕಾರದಿಂದ ಆರೈಕೆ ಮಾಡಿ ನಂತರ ಮತ್ತಿಗೂಡು ಶಿಬಿರಕ್ಕೆ ಕಳಿಸಲಾಯಿತು.

ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಾಲ್ ವೃಷ್ಣಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಮಾರ್ಗದರ್ಶನದಲ್ಲಿ ಕಾರ್ಯಚರಣೆ ನಡೆಸಿ ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.



ಸಾಕಾನೆಗಳ ಸಹಯೋಗದೊಂದಿಗೆ ಕಾಡಾನೆಯನ್ನು ಸೆರೆ ಹಿಡಿಯಲಾಯಿತು

ಗ್ರಾಮ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಹಗಲಿನಲ್ಲೂ ನಿರಂತರವಾಗಿ ಕಾಣಿಸಿಕೊಳ್ಳುವುದರ ಮೂಲಕ ಹಲವು ಮೇಲೆ ದಾಳಿಗೆ ಯತ್ನಿಸಿತ್ತು. ಇದರಿಂದಾಗಿ ಬೆಳೆಗಾರರು, ಕಾರ್ಮಿಕರು ತೋಟಕ್ಕೆ ತೆರಳಲು ಹಿಂದೇಟು ಹಾಕುತ್ತಿದ್ದರು. ಚೆಂಬೆಬೆಳ್ಳೂರು, ದೇವಣಗೇರಿ, ಬೆಳ್ಳರಿಮಾಡು, ಕುಕ್ಲೂರು, ಪೊದಕೋಟೆ, ಐಮಂಗಲ, ಮೈತಾಡಿ, ಕದನೂರು, ಬಿಳುಗುಂದ, ಹಾಲುಗುಂದ ಹಾಗೂ ಅಮ್ಮತಿ ಸುತ್ತಮುತ್ತಲ ಗ್ರಾಮಗಳಲ್ಲಿ ಬೀಡು ಬಿಟ್ಟು ದಾಂಧಲೆ ನಡೆಸುತ್ತಿರುವ ಕಾಡಾನೆ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದರು.

ಶಾಸಕ ಎ ಎಸ್ ಪೊನ್ನಣ್ಣ ಕಾಡಾನೆ ಸೆರೆ ಹಿಡಿಯುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಕಾಡಾನೆ ಸೆರೆಯಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದು, ಇತರ ಕಾಡಾನೆಗಳನ್ನು ಕಾಡಿಗಟ್ಟಬೇಕೆಂದು ಒತ್ತಾಯಿಸಿದ್ದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಮಾತನಾಡಿ ಮೇಲಾಧಿಕಾರಿಗಳ ಅನುಮತಿಯೊಂದಿಗೆ ಕಾಡಾನೆಯನ್ನ ಸೆರೆ ಹಿಡಿಯಲಾಗಿದ್ದು ಮತ್ತಿಗೂಡು ಶಿಬಿರಕ್ಕೆ ಸ್ಥಳಾಂತರಿಸಲಾಗುತ್ತಿದೆ. ನೂರಕ್ಕೂ ಹೆಚ್ಚು ಸಿಬ್ಬಂದಿಗಳು ಭಾಗವಹಿಸಿದ್ದು ಸತತ ಕಾರ್ಯಾಚರಣೆ ಮೂಲಕ ಆನೆ ಸೆರೆ ಹಿಡಿಯಲಾಗಿದೆ ಎಂದರು.

ಮಡಿಕೇರಿ ಡಿಸಿಎಫ್ ರಮೇಶ್, ಎಸಿಎಫ್ ಗೋಪಾಲ್, ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ವೀರಾಜಪೇಟೆ ವಲಯ ಅರಣ್ಯ ಅಧಿಕಾರಿ ಶಿವರಾಮ್, ತಿತಿಮತಿ ವಲಯ ಅರಣ್ಯ ಅಧಿಕಾರಿ ಗಂಗಾಧರ್ ಡಾ ಚೆಟ್ಟಿಯಪ್ಪ, ಡಿಆರ್‌ಎಫ್‌ಓ ಸಂಜಿತ್ ಸೋಮಯ್ಯ, ರಾಘವ, ದಿವಾಕರ್, ಶಶಿ, ಮೂರ್ತಿ, ಜಡಿಮಣಿ ಸೇರಿದಂತೆ ಆರ್‌ಆರ್‌ಟಿ, ಇಪಿಟಿ, ಅರಣ್ಯ ಇಲಾಖೆಯ ಸಿಬ್ಬಂದಿ ಸೇರಿ ನೂರಕ್ಕೂ ಅಧಿಕ ಮಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸಾರ್ವಜನಿಕರ ಅಹವಾಲನ್ನು ವಾರದೊಳಗೆ ಪರಿಹರಿಸಿ

ಜನಸ್ಪಂದನಾ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕರ ತಾಕೀತು

ಮಡಿಕೇರಿ,ಮಾ.22–ಸಾರ್ವಜನಿಕರಿಂದ ಬರುವ ಅಹವಾಲುಗಳನ್ನು ವಾರದೊಳಗೆ ಪರಿಹರಿಸಬೇಕು ವಿನಾ ಕಾರಣ ಕಚೇರಿಗಳಿಗೆ ಅಲೆದಾಡಿಸಬೇಡಿ ಎಂದು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ತಾಲೂಕಿನ ಭಾಗಮಂಡಲ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಅಹವಾಲುಗಳಿಗೆ ಕೂಡಲೇ ಸ್ಪಂದಿಸಬೇಕು. ವಿಳಂಬ ಮಾಡಬಾರದು ಎಂದು ಎ.ಎಸ್.ಪೊನ್ನಣ್ಣ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿ ವಿಧಾನಸಭಾ ಕ್ಷೇತ್ರವಾರು ಜನಸ್ಪಂದನಾ ಕಾರ್ಯಕ್ರಮ ಆಯೋಜಿಸಬೇಕು ಎಂದು ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಹೇಳಿ, ಜನರ ಮನೆ ಬಾಗಿಲಿಗೆ ಸರ್ಕಾರದ ಸೌಲಭ್ಯ ತಲುಪಿಸಲು ಸರ್ಕಾರ ಪ್ರಯತ್ನಿಸಿದೆ. ಆ ದಿಸೆಯಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಂದಿಸಬೇಕು ಎಂದು ಕಿವಿಮಾತು ಹೇಳಿದರು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 15, ಗ್ರಾಮೀಣಾಭಿವೃದ್ಧಿ 7, ಪಂಚಾಯತ್ ರಾಜ್ ಸಂಬಂಧಿಸಿದಂತೆ 10, ಸೆಸ್ಕ್ 3, ಆಹಾರ 3, ರಸ್ತೆ ಸೇರಿದಂತೆ ವಿವಿಧ ಇಲಾಖೆಗಳ 46 ಸೇರಿದಂತೆ ಸಾರ್ವಜನಿಕರಿಂದ 85ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು.



ಶಾಸಕ ಎಎಸ್.ಪೊನ್ನಣ್ಣ ಭಾನುವಾರ ಜನಸ್ಪಂದನಾ ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ನೆರವಂಡ ಉಮೇಶ್, ಪ್ರಮುಖರಾದ ಬಾಲಚಂದ್ರ ನಾಯರ್, ತಹಶೀಲ್ದಾರ್ ಶ್ರೀಧರ, ತಾಪಂ ಇಓ ಶೇಖರ್ ಹಾಗೂ ಇತರೇ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು. 36 ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ತಮ್ಮ ಇಲಾಖೆ ಸಂಬಂಧ ಸಾರ್ವಜನಿಕರ ಅಹವಾಲಿಗೆ ಸ್ಪಂದಿಸಿದರು.

ನೆಟ್ಟು ಮಾಡು ಭಗವತಿ ದೇವಿಯ ಬ್ರಹ್ಮ ಕಳಸ ಪುನರ್ ಪ್ರತಿಷ್ಠಾಪನೆ



ಯವಕಪಾಡಿ ಗ್ರಾಮದ ನೆಟ್ಟು ಮಾಡು ಶ್ರೀ ಭಗವತಿ ಮಹಿಷ ಮರ್ದಿನಿ.

ನಾಪೋಕ್ಲು: ಸಮೀಪದ ಕಕ್ಕಬ್ಬೆಯ ಯವಕಪಾಡಿ ಗ್ರಾಮದ ನೆಟ್ಟು ಮಾಡು ಭಗವತಿ ದೇವಿಯ ಬ್ರಹ್ಮ ಕಳಸ ಮತ್ತು ಪುನರ್ ಪ್ರತಿಷ್ಠಾಪನೆಯು ಇಂದಿನಿಂದ ಆರಂಭಗೊಂಡಿದ್ದು ಮಾ.25 ರವರೆಗೆ ನಡೆಯಲಿದೆ.

ನೆಟ್ಟು ಮಾಡು ಭಾಗವತಿ ಮಹಿಷ ಮರ್ದಿನಿ ದೇವಸ್ಥಾನದಲ್ಲಿ ನೂತನವಾಗಿ ಪುನರ್ ನಿರ್ಮಿಸಿರುವ ಪ್ರಾಸಾದದಲ್ಲಿ ದೇವ ಸಾನಿಧ್ಯ ಬಿಂಬ ಪುನರ್ ಪ್ರತಿಷ್ಠೆ, ಅಷ್ಟ ಬಂಧ ಲೇಪನ, ಬ್ರಹ್ಮ ಕಳಶ ಕಾರ್ಯಕ್ರಮವು ನೀಲೇಶ್ವರ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಹಾಗೂ ಕೂಡುಕಟ್ಟಿನ ಯಜಮಾನತ್ವದಲ್ಲಿ ಜರುಗಲಿದೆ. ಇದರ ಅಂಗವಾಗಿ ಮಾ.23ರಂದು ಬೆಳಿಗ್ಗೆ ಗಣಪತಿ ಹೋಮ, ಬಿಂಬಶುದ್ಧಿ, ಕಲಶಾಭಿಷೇಕ, ಶಾಂತಿ ಹೋಮ, ಪ್ರಾಯಶ್ಚಿತ ಹೋಮಗಳು ನಡೆಯಲಿವೆ. ಸಂಜೆ ದುರ್ಗಾ ನಮಸ್ಕಾರ ಪೂಜೆ ನಡೆಯಲಿದೆ. ಮಾ. 24 ರಂದು ಬೆಳಿಗ್ಗೆ ಗಣಪತಿ ಹೋಮ, ಸಂಹಾರ ತತ್ವ ಹೋಮ, ಸಂಹಾರ ತತ್ವ ಕಲಶ ಪೂಜೆ, ಸಂಹಾರ ತತ್ವ ಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ, ಅನುಜ್ಞಾಪ್ರಾರ್ಥನೆ, ದೇವ ಕಲಶ ಪೂಜೆ, ಜೀವದ್ವಾಪನೆ, ಜೀವ ಕಲಶ ನೆರವೇರಲಿದೆ. ಸಂಜೆ ಕುಂಬೇಶ ಕರ್ಕರಿ ಕಲಶ ಪೂಜೆ, ಆದಿವಾಸ ಹೋಮ, ಧ್ಯಾನ ಧೀವಾಸ, ಬ್ರಹ್ಮಕಲಶ ಪೂಜೆ, ಪರಿಕಲಶ ಪೂಜೆ ನೆರವೇರಲಿದೆ. ಮಾ.25ರಂದು ಬೆಳಿಗ್ಗೆ ಗಣಪತಿ ಹೋಮ, ಪ್ರಾಸಾದ ಪ್ರತಿಷ್ಠೆ, ಪೀಠ ಪ್ರತಿಷ್ಠೆ ನಡೆಯಲಿದೆ. ಬೆಳಿಗ್ಗೆ 10.21 ರಿಂದ 11:30ರ ವೃಷಭ ಲಗ್ನದಲ್ಲಿ ಅಮ್ಮನವರ ಬಿಂಬ ಪ್ರತಿಷ್ಠೆ ಜೀವ ಕಲಶ ಅಭಿಷೇಕ, ಶಿಖರ ಪ್ರತಿಷ್ಠೆ, ಪರಿವಾರ ಪ್ರತಿಷ್ಠೆ ನಡೆಯಲಿದ್ದು ಮಧ್ಯಾಹ್ನ ಮಹಾಪೂಜೆ ಪ್ರಸಾದ ವಿತರಣೆ ಹಾಗೂ ಮಂತ್ರಾಕ್ಷತೆ ನಡೆಯಲಿದೆ. ಸಂಸದ ಯದುವೀರ್, ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಶಾಸಕ ಎ. ಎಸ್. ಪೊನ್ನಣ್ಣ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಡವರು ಹಕ್ಕನ್ನು ಎಂದಿಗೂ ಕಸಿದುಕೊಳ್ಳುವುದಿಲ್ಲ

ಮಡಿಕೇರಿ,ಮಾ.22–ಕೊಡವರು ತಮ್ಮತನವನ್ನು ಉಳಿಸಿಕೊಳ್ಳಲು ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದಾರೆಯೇ ಹೊರತು ಇನ್ನೊಬ್ಬರ ಹಕ್ಕನ್ನು ಕಸಿದುಕೊಳ್ಳಲು ಅಲ್ಲ ಎಂದು ರಾಜ್ಯಸಭಾ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರದ ಹೊರ ವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ವಿಶ್ವ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕೊಡವರು ತಮ್ಮ ಜನ್ಮಭೂಮಿಯನ್ನು ತೊರೆಯಬಾರದು, ತಮ್ಮ ಪೂರ್ವಾರ್ಜಿತ ಭೂಮಿಯನ್ನು ಮಾರಾಟ ಮಾಡಬಾರದು. ಮುಂದೆ ಎಂದಾದರೂ ಒಂದು ದಿನ ಕೊಡವ ಲ್ಯಾಂಡ್ ದೊರೆತೇ ದೊರೆಯುತ್ತದೆ. ಆದ್ದರಿಂದ ಕೊಡವರು ಏಕ ಮನಸ್ಸಿನಿಂದ ಎನ್.ಯು. ನಾಚಪ್ಪ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಸಾಂವಿಧಾನಿಕ, ದೃಢ ಸಂಕಲ್ಪದ ಹೋರಾಟಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು ತಿಳಿಸಿದರು.

ಜಾನಪದ ಸಂಶೋಧಕಿ ಪ್ರೊ.ಡಾ.ಮುಲ್ಲೇಂಗಡ ರೇವತಿ ಪೂವಯ್ಯ ಮಾತನಾಡಿ ಕೊಡವ ಭಾಷಾ ಸಮೃದ್ಧಿ, ಕೊಡವ ಜನಾಂಗೀಯ ಹಿರಿಮೆ ಹೆಗ್ಗುರುತಿನ ಬಗ್ಗೆ ಸುದೀರ್ಘ ಪ್ರಬಂಧ ಮಂಡಿಸಿ ಕೊಡವರ ಶ್ರೀಮಂತ ಜಾನಪದ ಪರಂಪರೆ ಸುಮಾರು ನಾಲ್ಕೂವರೆ ಸಾವಿರ ವರ್ಷಗಳ ಸುದೀರ್ಘ ಹಿನ್ನೆಲೆಯನ್ನು ಹೊಂದಿದೆ ಎಂದರು.



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸಿದ ವಿಚಾರ ಸಂಕಿರಣದಲ್ಲಿ ಗಣ್ಯರು ಪಾಲ್ಗೊಂಡಿದ್ದರು.

ಹೈಕೋರ್ಟ್‌ನ ಹಿರಿಯ ವಕೀಲ ಎಂ.ಟಿ. ನಾಣಯ್ಯ ಮಾತನಾಡಿ ಸಿಎನ್‌ಸಿಯ 36 ವರ್ಷಗಳ ಸುದೀರ್ಘ ಹೋರಾಟಕ್ಕೆ ಎಲ್ಲಾ ಕೊಡವರು ಸಂಪೂರ್ಣ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಕೊಡವ ನ್ಯಾಷನಲ್ ಕೌನ್ಸಿಲ್‌ನ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಕೊಡವ ಲ್ಯಾಂಡ್‌ಗಾಗಿ ಕಳೆದ 36 ವರ್ಷಗಳಿಂದ ಸಿಎನ್‌ಸಿ ಹೋರಾಟ ನಡೆಸುತ್ತಿದೆ ಎಂದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಸಂಪ್ರದಾಯದಂತೆ ಬಾಳೆ ಕಡಿದು ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ದುಡಿಕೊಟ್ಟ್ ಪಾಟ್ ಮೂಲಕ ಅತಿಥಿಗಳನ್ನು ಬರ ಮಾಡಿ ಕೊಳ್ಳಲಾಯಿತು.

ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ ಕಾಳಪ್ಪ ಪಟ್ಟಮಾಡ ಲಲಿತಾ ಗಣಪತಿ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ನಂದೇಟಿರ ಕವಿತಾ ಸುಬ್ಬಯ್ಯ, ಚೋಳಪಂಡ ಜ್ಯೋತಿ ನಾಣಯ್ಯ, ಅರೆಯಡ ಸವಿತಾ ಗಿರೀಶ್, ನಂದಿನೆರವಂಡ ನಿಶಾ ಅಚ್ಚಯ್ಯ, ಪಚ್ಚರಂಡ ಶಾಂತಿ ಪೂನ್ನಪ್ಪ, ಅಜ್ಜಿನಕಂಡ ಇನಿತಾ ಮಾಚಯ್ಯ, ನಾಯಕಂಡ ಶಾಂತಿ, ಮಾಚ್ಚರಂಡ ಸಿಂಧು, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಪುಳ್ಳಂಗಡ ನಟೇಶ್, ಪಟ್ಟಮಡ ಕುಶ, ಅಜ್ಜಿಕುಟ್ಟಿರ ಲೋಕೇಶ್, ಚಂಬಂಡ ಜನತ್, ಪಟ್ಟಮಾಡ ಪೃಥ್ವಿ ಉಪಸ್ಥಿತರಿದ್ದರು.

ದೀಪದಂತೆ ತಾನುರಿದು ಮನೆ ಬೆಳಗುವವಳೇ ಹೆಣ್ಣು

ವಿರಾಜಪೇಟೆ, ಮಾ.22–ಹೆಣ್ಣು ಕೇವಲ ಮನೆಯ ಬೆಳಕು ಮಾತ್ರವಲ್ಲ ಸಮಾಜದ ಶಕ್ತಿ. ದೀಪದಂತೆ ತಾನುರಿದು ಮನೆ ಬೆಳಗುವವಳು ಎಂದು ಮೈಸೂರಿನ ಓಡಿಪಿ ಸಂಸ್ಥೆಯ ನಿರ್ದೇಶಕ ವಂ. ಸ್ವಾಮಿ ಟೆನ್ನಿ ಕುರಿಯನ್ ಬಣ್ಣಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಗ್ರಾಮವಾರು ಸುಗ್ಗಿ ಕಾರ್ಯಕ್ರಮದ ಅಂಗವಾಗಿ ಮಹಿಳೋದಯ ಮಹಿಳಾ ಒಕ್ಕೂಟ, ನೇಸರ ರೈತ ಉತ್ಪಾದಕರ ಸಮಿತಿ ಮತ್ತು ಓಡಿಪಿ ಸಂಸ್ಥೆ ವತಿಯಿಂದ ಪೆರುಂಬಾಡಿ ಚೆಕ್‌ಪೋಸ್ಟ್ ಬಳಿಯ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಅವರು, ಮಹಿಳಾ ದಿನಾಚರಣೆ ಮಹಿಳೆಯರೆಲ್ಲಾ ಕೆಲಸದ ಒತ್ತಡ ಮರೆತು ತನ್ನ ತನವನ್ನು ಮತ್ತು ಹಕ್ಕನ್ನು ಪ್ರತಿಬಿಂಬಿಸುವ ದಿನ. ಹೆಣ್ಣಿನಿಂದಲೇ ಕುಟುಂಬ ಬೆಳಕಾಗಬೇಕು, ಹೆಣ್ಣಾಗಲಿ ಗಂಡು ಮಕ್ಕಳಾಗಲಿ ಭೇದವಿಲ್ಲದೆ ಸರಿಸಮಾನವಾಗಿ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರದಲ್ಲಿ ಬೆಳೆಸುವ ಕರ್ತವ್ಯ ತಾಯಿಗಿದೆ ಎಂದರು.

ಸ್ವಾಮಿ ಟೆನ್ನಿ ಕುರಿಯನ್ ಅವರು ಹೆಣ್ಣು ಸಾಧನೆಯ 'ಸ್ಪೂರ್ತಿ, ಧೈರ್ಯ, ಸಹನೆ ಆತ್ಮವಿಶ್ವಾಸ ಮತ್ತು ಅಭಿವೃದ್ಧಿಯಿಂದ ಸಮಾಜವನ್ನು ಮುಂದಕ್ಕೆ ಕೊಂಡೊಯ್ಯುವ ಮೂಲಕ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ಕೊಡುಗೆಯಾಗಿ ನೀಡಲಿ ಎಂದು ಆಶಿಸಿದರು.

ಓಡಿಪಿ ಸಂಸ್ಥೆಯ ಯೋಜನಾ ಸಂಯೋಜಕ ಮೋಳಿ ಮಡ್ತಾದೋ, ಸಂಯೋಜಕ ಜಯರಾಂ ಮಾತನಾಡಿದರು.

ಗೋಣಿಕೊಪ್ಪಲು ಕೆ.ವಿ.ಕೆ ವಿಜ್ಞಾನಿಗಳಾದ ಡಾ. ಮೋಹನ್, ಓಡಿಪಿ ಸಂಸ್ಥೆಯ ಪ್ರಮುಖರಾದ ಶುಭಕರ್, ಜಾಯ್ಸ್ ಮೆನೆಜಸ್, ರೀಟಾ ಜೋಸೆಫ್, ಧನುಕುಮಾರ್, ಮೈಸೂರು ದುರ್ಗಾ ಮಹಿಳೋದಯ ಮಹಾ ಒಕ್ಕೂಟದ ಸದಸ್ಯರು, ಪೆರುಂಬಾಡಿ ಅಂಗನವಾಡಿ ಕಾರ್ಯಕರ್ತೆ ರೀನಾ, ಕೇಂದ್ರ ಸಮಿತಿ ಮತ್ತು ಸ್ವಸಹಾಯ ಸಂಘದ ಸದಸ್ಯರು, ಮಹಿಳಾ ರೈತರು, ಭಾಗವಹಿಸಿದ್ದರು. ಈ ಸಂದರ್ಭ ಮಹಿಳಾ ಸದಸ್ಯರಿಗೆ ಆಟೋಟ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು ಅತಿಥಿಗಳು ಬಹುಮಾನ ವಿತರಿಸಿದರು.



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಂ.ಸ್ವಾಮಿ ಟೆನ್ನಿ ಕುರಿಯನ್ ಉದ್ಘಾಟಿಸಿದರು.

ಕಣ್ಣೆಗಾಲ ಗ್ರಾಮದ ಸುತ್ತ ಮತ್ತೆ ಹುಲಿ ಉಪಟಳ



ಗುಂಡ್ಲುಪೇಟೆ, ಮಾ.22–ತಾಲೂಕಿನ ಕಣ್ಣೆಗಾಲ ಗ್ರಾಮದ ಸುತ್ತಮುತ್ತಲಿನ ಜಮೀನುಗಳಲ್ಲಿ ಹುಲಿಯ ಉಪಟಳ ಹೆಚ್ಚಾಗಿದೆ ರೈತರು ಕಂಗಾಲಾಗಿದ್ದಾರೆ.

ಇತ್ತೀಚೆಗೆ ಗ್ರಾಮದ ಮಹದೇವ ನಾಯಕ ಎಂಬುವರಿಗೆ ಸೇರಿದ ಹಸುವಿನ ಮೇಲೆ ದಾಳಿ ನಡೆಸಿ ಬಲಿ ಪಡೆದಿದ್ದ ಹುಲಿ ಗ್ರಾಮದಲ್ಲಿರುವ ಕುರಿ ಸೇರಿದಂತೆ ಜಾನುವಾರುಗಳ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿದೆ. ಇದರಿಂದ ರೈತರು ತಮ್ಮ ಜಾನುವಾರುಗಳನ್ನು ಉಳಿಸಿಕೊಳ್ಳಲು ಪರದಾಡುವಂತಾಗಿದೆ.

ಜೊತೆಗೆ ರೈತರು ತಮ್ಮ ಜಮೀನುಗಳಿಗೆ ಹೋಗಲು ಭಯಪಡುವ ಪರಿಸ್ಥಿತಿ ಎದುರಾಗಿದೆ. ಇನ್ನಾದರೂ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ಈ ಭಾಗದಲ್ಲಿ ಹುಲಿ ಸೆರೆ ಕಾರ್ಯಾಚರಣೆ ನಡೆಸಿ ರೈತರ ಭಯವನ್ನು ನಿವಾರಣೆಗೊಳಿಸಬೇಕಾಗಿದೆ.

ನಿಯಮ ಉಲ್ಲಂಘಿಸುವ ಟಿಪ್ಪರ್ ಮಾಲೀಕರ ವಿರುದ್ಧ ಕ್ರಮಕ್ಕೆ ಸೂಚನೆ



ಗುಂಡ್ಲುಪೇಟೆ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಮಾ.22–ಇಲಾಖೆಯ ನಿಯಮಗಳನ್ನ ಉಲ್ಲಂಘಿಸುವ ಟಿಪ್ಪರ್ ಲಾರಿ ಮಾಲೀಕರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ಸ್ಥಳೀಯವಾಗಿ ಕಚ್ಚಾವಸ್ತು ಸಾಗಿಸುವ ಟಿಪ್ಪರ್‌ಗಳು ರಾಜಧನ ಹಾಗೂ ಅನುಮತಿ ಪಡೆದಿರುತ್ತವೆ ಆದರೆ ಸಾಮಾನ್ಯವಾಗಿ ಕೇರಳದಿಂದ ಬರುವ ಲಾರಿಗಳು ನಿಯಮಗಳನ್ನು ಪಾಲನೆ ಮಾಡದೆ ಸಂಚರಿಸುತ್ತಿರುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೇರಳ ಟಿಪ್ಪರ್ ಲಾರಿಗಳ ಸಂಚಾರ ಸಂಬಂಧವಾಗಿ ಜಿಲ್ಲಾಧಿಕಾರಿಗಳು ಹಾಗೂ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕಚ್ಚಾವಸ್ತು ಸಾಗಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು, ಅಕ್ರಮ ಧಂದೆಕೋರರಿಗೆ ಸಹಕಾರ ನೀಡುವವರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಅಧಿಕಾರಿಗಳ ಹಸ್ತಲಾಘವದಿಂದ ಸರಕಾರಕ್ಕೆ ಪ್ರತಿನಿತ್ಯ ಲಕ್ಷಾಂತರ ರೂ, ಹಣ ವಂಚನೆಯಾಗುತ್ತಿರುವುದು ಗಮನಕ್ಕೆ ಬಂದ ಮೇಲೆಯೂ ಸುಮ್ಮನೆ ಕೂರುವ ಮಾತಿಲ್ಲ. ಗಡಿಭಾಗದಲ್ಲಿ ಅನಧಿಕೃತವಾಗಿ ಸಂಚರಿಸುವ ಟಿಪ್ಪರ್‌ಗಳನ್ನು ಜಪ್ತಿ ಮಾಡಿ ಕ್ರಮ ಕೈಗೊಳ್ಳಲು ಸೂಚನೆ ನೀಡುತ್ತೇನೆ ಎಂದರು.

ಇತ್ತೀಚಿಗೆ ಚಿಕ್ಕ ತುಪ್ಪುರು ಬಳಿ ಶಾಲಾ ವಾಹನಕ್ಕೆ ಟಿಪ್ಪರ್ ಡಿಕ್ಕಿಯಾಗಿ ಎಂಟು ಮಕ್ಕಳು ತೀವ್ರವಾಗಿ ಗಾಯಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು ಶಾಲಾ ಪ್ರಾರಂಭ ಮತ್ತು ಬಿಡುವ ಅವಧಿಯಲ್ಲಿ ಟಿಪ್ಪರ್‌ಗಳ ಓಡಾಟಕ್ಕೆ ಬ್ರೇಕ್ ಹಾಕಲು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದರು.

ನಾನು ಶಾಸಕನಾಗುವ ಮುಂಚೆಯಿಂದಲೂ ಸಹ ಬಿಜಿನೆಸ್ ಮ್ಯಾನ್ ಆಗಿದ್ದೆ. ಈಗಲೂ ಆಗಿದ್ದೇನೆ. ಆದರೆ ಬಿಜಿನೆಸ್ ಮ್ಯಾನ್ ಆಗಿರುವ ಅವರಿಂದ ಕ್ಷೇತ್ರದ ಅಭಿವೃದ್ಧಿ ಆಗಲ್ಲ ಎಂದು ಬಿಜೆಪಿ ಮುಖಂಡರು ಹಾಗೂ ಮಾಜಿ ಶಾಸಕರು ಆರೋಪ ಮಾಡುತ್ತಿದ್ದಾರೆ. ಕ್ಷೇತ್ರವನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂಬುದು ನನಗೆ ಗೊತ್ತು. ಆದ್ದರಿಂದಲೇ ಮತದಾರರು ನನಗೆ 36,000ಕ್ಕೂ ಹೆಚ್ಚು ಬಹುಮತವನ್ನು ನೀಡಿ ಆಯ್ಕೆ ಮಾಡಿದ್ದಾರೆ ಎಂದು ತಿರುಗೇಟು ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ನಂಜುಂಡ ಪ್ರಸಾದ್, ನಂಜಪ್ಪ, ರಾಜಶೇಖರ್, ನವೀನ್, ಮಧು, ಸುರೇಶ್, ಲೋಕೇಶ್, ಬಸವರಾಜು ಎಚ್ ಎನ್, ರಘು, ಶ್ರೀನಿವಾಸ್ ಕಣ್ಣಪ್ಪ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಕೈವಾರ ತಾತಯ್ಯ ನಾಡು ಕಂಡಂತಹ ಶ್ರೇಷ್ಠ ಸಂತರು

ಕೈವಾರ ಸದ್ಗುರು ನಾರೇಯಣಯೋಗಿಗಳ ಪರಿಚಯ, ಆತ್ಮಭೋಧೆ, ನಾರೇಯಣ ಪ್ರಶಸ್ತಿ ಪ್ರದಾನ ಸಮಾರಂಭ

ಚಾಮರಾಜನಗರ: ಕೈವಾರ ತಾತಯ್ಯ ಯೋಗಿ ನಾರೇಯಣ ಗುರು ಈ ನಾಡು ಕಂಡಂತಹ ಅಪರೂಪದ ಶ್ರೇಷ್ಠ ಸಂತರು ಎಂದು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ತಿಳಿಸಿದರು.

ನಗರದ ಡಾ.ರಾಜ್‌ಕುಮಾರ್ ರಂಗ ಮಂದಿರದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಹಾಗೂ ಶ್ರೀ ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಕೈವಾರ ಸದ್ಗುರು ನಾರೇಯಣ ಯೋಗಿಗಳ ಪರಿಚಯ, ಆತ್ಮಭೋಧೆ ಮತ್ತು ನಾರೇಯಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರು ರಾಮಕೃಷ್ಣ ಆಶ್ರಮ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಾಜೀ ಮಹಾರಾಜ್ ಅವರಿಗೆ ನಾರೇಯಣ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕೈವಾರ ತಾತಯ್ಯ 19ನೇ ಶತಮಾನದ ಆರಂಭದಲ್ಲಿ ಪ್ರಸಿದ್ಧ ದ್ವಿಭಾಷಾ ಕವಿ, ಸಂತ ಮತ್ತು ಜ್ಞಾನಯೋಗಿಯಾಗಿದ್ದರು. ಅವರು ಅಮರನಾರಾಯಣ ಅವರ ಪರಮ ಭಕ್ತರಾಗಿದ್ದರು. ಕಾಲಜ್ಞಾನ ಮತ್ತು ಭವಿಷ್ಯವಾಣಿ ತತ್ವ ಪದಗಳನ್ನು ರಚನೆ ಮಾಡಿದ್ದರು. ಕಠಿಣ ತಪಸ್ಸು ಮಾಡಿ, ಯೋಗ ಸಿದ್ಧಿ ಪಡೆದು ಬಳೆ ಮಾರುವ ಕಾಯಕದೊಂದಿಗೆ ಜನರಿಗೆ ಸನ್ಮಾರ್ಗ ತೋರಿದ ಮಹಾತ್ಮರು. ಇಂಥವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಮೂಲಕ ಅವರ ಸೇವಾ ಗುಣಗಳನ್ನು ಜಗತ್ತಿಗೆ ತಿಳಿಸುವ ಕಾರ್ಯ ಮಹತ್ವಪೂರ್ಣವಾಗಿದೆ. ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಯು ಓರ್ವ ಸಂತರಿಗೆ ಸಲ್ಲುತ್ತಿರುವುದು ಈ ಪ್ರಶಸ್ತಿ ಇನ್ನು ಸಹ ಮೌಲ್ಯ ಹೆಚ್ಚಿಸುತ್ತಿದೆ ಎಂದು ಪ್ರಶಂಸಿಸಿದರು.



ಬಾಲ್ಯದಲ್ಲಿಯೇ ಹೆತ್ತವರನ್ನು ಕಳೆದುಕೊಂಡು ದೇವಸ್ಥಾನದ ಅರ್ಚಕರ ಆಶ್ರಯದಲ್ಲಿ ಬೆಳೆದ ತಾತಯ್ಯ ಅವರು ಹುಟ್ಟು ಪವಾಡವಾಗಿದೆ. ತಾತಯ್ಯ ಅವರು ಭೂಮಿಗೆ ಬರಬಾರದೆಂದು ವಿಷವಿಕ್ಕಿ ಕೊಲ್ಲುವಂತಹ ಸನ್ನಿವೇಶ ಸೃಷ್ಟಿಯಾಯಿತು. ತಾತಯ್ಯನವರ ಜನನವಾದ ಬಳಿಕ ಮಗುವನ್ನು ಕಾಡಿಗೆ ಎಸೆಯಲು ಮುಂದಾದಾಗ ಸರ್ಪ ಅಡ್ಡ ಬಂದ ಪರಿಣಾಮ ಅವರು ವಾಪಸ್ ಹೋಗುತ್ತಾರೆ. ಹೀಗಾಗಿ ಅವರ ಜನನವೇ ಒಂದು ಪವಾಡ, ಸರಳ ವ್ಯಕ್ತಿತ್ವ ಕೈವಾರ ತಾತಯ್ಯ ಅವರ ಮಹಿಮೆ ಪವಾಡಗಳು ಅಪಾರವಾಗಿವೆ ಎಂದು ಸುತ್ತೂರು ಶ್ರೀಗಳು ಬಣ್ಣಿಸಿದರು.

ಆಶ್ರಮದ 100 ವರ್ಷದ ಸೇವೆ ಗುರುತಿಸಿ ಪ್ರಶಸ್ತಿ : ಮೈಸೂರಿನ ರಾಮಕೃಷ್ಣ ಆಶ್ರಮ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಾಜೀ ಮಹಾರಾಜ್ ಅವರು ನಾರೇಯಣ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸೇವೆಯನ್ನು ಗುರುತಿಸಿದ ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಮಿತಿ ಅವರು ಪ್ರಶಸ್ತಿಯನ್ನು ನೀಡುತ್ತಿರುವುದು ಹೆಮ್ಮೆ ಎನ್ನಿಸಿದೆ. ಇನ್ನು ಸಹ ನಮ್ಮ ಜವಾಬ್ದಾರಿ ಹೆಚ್ಚಿದೆ. ಪೂಜ್ಯರ ಸಾನ್ನಿಧ್ಯದಲ್ಲಿ ಪ್ರಶಸ್ತಿ ಸ್ವೀಕರಿಸುವುದು ಸಂತಸವಾಗಿದೆ. ಆಶ್ರಮದ 100 ವರ್ಷಗಳ ಸೇವೆ ಅನನ್ಯವಾಗಿದೆ. ಧರ್ಮದಿಂದ ಮಾತ್ರ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ. ಜ್ಞಾನ ಇದ್ದ ಕಡೆ ಧರ್ಮ ಪ್ರಜ್ವಲಿಸುತ್ತದೆ. ಸ್ವಾಮಿ ವಿವೇಕಾನಂದರ ತತ್ವಆದರ್ಶಗಳು ಹಾಗೂ ರಾಮಕೃಷ್ಣ ಪರಮಹಂಸರ ಸೇವೆಯು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

ಶ್ರೀಕ್ಷೇತ್ರ ಕೈವಾರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಮಾತನಾಡಿದರು. ಚಾಮರಾಜನಗರ ವಿಶ್ವ ವಿದ್ಯಾನಿಲಯದ ಕುಲಪತಿ ಡಾ.ಎಂ.ಆರ್. ಗಂಗಾಧರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾದ ಪ್ರಧಾನ ಸಂಚಾಲಕ ಎಚ್.ಎ.ವೆಂಕಟೇಶ್ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು, ಶ್ರೀಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಎನ್.ಕವಿತಾ, ಶ್ರೀನಿವಾಸಶೆಟ್ಟಿ, ದಾಸ ಬಣಜಿಗರ ಸಂಘದ ಅಧ್ಯಕ್ಷ ಚಂದ್ರಶೇಖರ್, ರೈಟ್ಸ್ ಜನರಲ್ ಮ್ಯಾನೇಜರ್ ಎಂ.ಜಿ.ಸುದೀಪ್, ಹಿರಿಯ ಲೆಕ್ಕ ಪರಿಶೋಧಕ ಸುರೇಂದ್ರ ಹೆಗ್ಡೆ, ಶಿವಕುಮಾರ್, ಮೈಸೂರು ವಿವಿ. ವಿಶ್ರಾಂತ ಪ್ರಾಧ್ಯಾಪಕ ಡಾ. ಶಿವರಾಜಪ್ಪ ಇತರರು ಹಾಜರಿದ್ದರು.

ವಿದ್ಯಾರ್ಥಿ ವೇತನ ನೀಡುವವರನ್ನು ಗೌರವಿಸಬೇಕು

ಕೊಳ್ಳೇಗಾಲ. ಮಾ.22– ಅಲ್ಪ ಮೊತ್ತವಾದರೂ ವಿದ್ಯಾರ್ಥಿ ವೇತನ ಪಡೆದುಕೊಳ್ಳುವ ಮನೋಭಾವ ವಿದ್ಯಾರ್ಥಿಗಳದ್ದಾಗಬೇಕು, ವೇತನ ಪಡೆದುಕೊಳ್ಳುವವರು ನೀಡುವವರನ್ನು ಗೌರವಿಸಬೇಕು, ಇದು ನಮ್ಮ ಸಂಸ್ಕೃತಿ, ಇಂತಹ ಮನೋಭಾವ ನಿಮ್ಮದಾಗಲಿ ಎಂದು ದೇವಾಂಗ ಕುಲಗುರುಗಳಾದ ವೇದಬ್ರಹ್ಮ ಶ್ರೀ ಮಹೇಶ ಸ್ವಾಮಿಗಳು ತಿಳಿದರು

ಪಟ್ಟಣದಲ್ಲಿ ಚೌಡೇಶ್ವರಿ ದೇವಾಂಗ ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆ ವತಿಯಿಂದ ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ವಿದ್ಯಾರ್ಥಿವೇತನ ನೀಡುವುದು ಅಧ್ಯಯನ ಮಾಡುವ ಸಮಾಜದ ಮಕ್ಕಳಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದಾಗಿ, ಈ ಹಿನ್ನೆಲೆ ಅಲ್ಪ ಮೊತ್ತವಾದರೂ ಸಹ ವಿದ್ಯಾರ್ಥಿಗಳು ಇದನ್ನ ಪಡೆದುಕೊಳ್ಳುವ ಮೂಲಕ ನೀಡುವವರಿಗೆ ಗೌರವ ನೀಡುವಂತಾಗಬೇಕು, 211 ಮಂದಿ ಬಡ ವಿದ್ಯಾರ್ಥಿಗಳಿಗೆ ಈ ಬಾರಿಯೂ ಪ್ರೋತ್ಸಾಹಧನ ನೀಡಬೇಕು, ಯಾವುದೆ ಕಾರಣಕ್ಕೂ ಈ ಕಾರ್ಯಕ್ರಮ ನಿಲ್ಲಬಾರದು ಎಂದು ಒಂಬತ್ತೂವರೆ ಲಕ್ಷಕ್ಕೂ ಅಧಿಕ ವಿದ್ಯಾರ್ಥಿವೇತನ ವಿತರಣೆಯಲ್ಲಿ ದೇವಾಂಗ ಸಮಾಜದ ಯಜಮಾನರಾದ ನಾಗರಾಜಯ್ಯ ಮತ್ತು ಅವರ ತಂಡದ ಪರಿಶ್ರಮ ನಿಜಕ್ಕೂ ಮೆಚ್ಚುವಂತದ್ದು ಎಂದು ಪ್ರಶಂಶಿಸಿದರು.




ಕೊಳ್ಳೇಗಾಲ ಪಟ್ಟಣದಲ್ಲಿ ಚೌಡೇಶ್ವರಿ ದೇವಾಂಗ ಶೈಕ್ಷಣಿಕ ಮತ್ತು ಧಾರ್ಮಿಕ ವಿದ್ಯಾಸಂಸ್ಥೆ ವತಿಯಿಂದ ಸಾಧಕರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

ಇಂದಿನ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳೆಲ್ಲರಿಗೂ ಆಹ್ವಾನ ನೀಡಲಾಗಿದೆ, ಆದರೂ ಹಲವು ವಿದ್ಯಾರ್ಥಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಿಲ್ಲ, ಇಂತಹ ತಾತ್ಸಾರ ಮನೋಭಾವ ಸರಿಯಲ್ಲ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಮಕ್ಕಳು ಹಾಜರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದೇವಾಂಗ ಸಮಾಜದ ಹಿರಿಯ ಮುಖಂಡರಾದ ಅಣ್ಣಾದ್ರೇಯ ಮಾತನಾಡಿದರು. ಈ ವೇಳೆ ಇಂಜಿನಿಯರಿಂಗ್‌ನಲ್ಲಿ ಪ್ರಥಮ ರ‍್ಯಾಂಕ್ ಮತ್ತು ಚಿನ್ನದ ಪದಕಗಳಿಸಿದ್ದ ಬಿ.ವಿ.ವಿದ್ಯಾಸಾಗರ್ ಹಾಗೂ ಎಂಸಿಎನಲ್ಲಿ 4ನೇ ರ‍್ಯಾಂಕ್ ಪಡೆದ ವಿ.ಹರ್ಷಿತ ಇನ್ನಿತರರಿಗೆ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದೇವಾಂಗ ಕುಲಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ದೇವಾಂಗ ಸಮಾಜದ ಯಜಮಾನರಾದ ಎ. ಎನ್. ನಾಗರಾಜು, ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಮಂಜುನಾಥ್, ಅರುಣಾಚಲೇಶ್ವರ ಟ್ರಸ್ಟ್ ಅಧ್ಯಕ್ಷ ಸುಂದರೇಶ್, ದೇವಾಂಗ ಮಹಾಜನ ಸಂಘದ ಅಧ್ಯಕ್ಷ ಎನ್. ರಾಜು, ನಗರ ಸಭೆ ಮಾಜಿ ಉಪಾಧ್ಯಕ್ಷ ಎ.ಪಿ.ಶಂಕರ್, ಸದಸ್ಯ ಮನೋಹರ್, ಸಂಘದ ಕಾರ್ಯದರ್ಶಿ ಕೆ. ವೇಣುಗೋಪಾಲ್, ಶೆಟ್ಟಿಗಾರರುಗಳಾದ ವೀರಭದ್ರಯ್ಯ, ಸುರೇಶ್, ವೀರಪ್ಪ, ಕನಕರಾಜು, ನಾರಾಯಣಪ್ಪ, ಮಹದೇವು, ವಿಶ್ವನಾಥ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳಾದ ಶೇಖರ್, ಗಣೇಶ್, ಮುಖಂಡರುಗಳಾದ ರಾಜೇಶ್, ವೀರಭದ್ರಯ್ಯ, ಕನಕರಾಜು, ನಾಗೇಶ್, ವೀರಪ್ಪ, ನಾರಾಯಣಪ್ಪ ಇನ್ನಿತರರಿದ್ದರು

ಗಾಳೀಪುರ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ



ಚಾಮರಾಜನಗರ. ಮಾ.22– ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರ ಬಡಾವಣೆಗೆ ಸಂಪರ್ಕ ಕಲ್ಪಿಸುವ, ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯರಸ್ತೆಯ ಗೊಬ್ಬಳಿಮರದವರೆಗೆ 4 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸಿಎಂ ವಿಶೇಷ ಅನುದಾನದಡಿ ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯ ರಸ್ತೆಯ ಗೊಬ್ಬಳಿಮರದವರಗೆ, ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಯ 2 ಕಾಮಗಾರಿಗಳಿಗೆ 4 ಕೋಟಿ ರೂ. ಮಂಜೂರಾಗಿದೆ. ಈ ಎರಡು ರಸ್ತೆಗಳು ತುಂಬ ಹದಗೆಟ್ಟಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿತ್ತು ಬಡಾವಣೆಗೆ ಭೇಟಿ ನೀಡಿ, ಪರಿಶೀಲಿಸಿ, ಸುಸಜ್ಜಿತ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ. ವಾರ್ಡಿನ ನಿವಾಸಿಗಳು ಮುಂದೆನಿಂತು, ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಚೂಡ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿ ಅಧ್ಯಕ್ಷರಾದ ಸಯ್ಯದ್ ರಫಿ, ಸುಹೇಲ್ ಅಲಿಖಾನ್, ಮುಖಂಡರಾದ ಅಯುಬ್‌ಖಾನ್, ಅಪ್ಸರ್ ಅಹಮದ್, ಹತ್ತಿಕ್ ಅಹಮದ್, ಇಮ್ರಾನ್‌ಅಹಮದ್, ಖಲೀಲ್‌ಉಲ್ಲಾ, ಮಹಮದ್ ಅಮಿಕ್, ರಿಯಾಜ್, ಇಸ್ರಾರ್ ಅಹಮದ್ ಸೇರಿದಂತೆ ಬಡಾವಣೆ ನಿವಾಸಿಗಳು ಹಾಜರಿದ್ದರು.

ಚಾಮುಂಡಿ ದರ್ಶನ ಪಡೆದ ಶಶಿಕಲಾ



ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ದಿವಂಗತರಾದ ಜಯಲಲಿತಾ ಆಪ್ತೆ, ಎಐಪಿಟಿಎಂಎಂಕೆ ಪಕ್ಷದ ಸಂಸ್ಥಾಪಕಿ ವಿ.ಕೆ.ಶಶಿಕಲಾ ಅವರು ಭಾನುವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ದೇವಿಯ ದರ್ಶನ ಪಡೆದರು. ಈ ವೇಳೆ ಪ್ರಧಾನ ಅರ್ಚಕರಾದ ಶಶಿಶೇಖರ ದೀಕ್ಷಿತ್, ನಗರದ ಮುಖಂಡರಾದ ಉಮೇಶ್‌ಕುಮಾರ್, ಚಂದ್ರಶೇಖರ್ ಮತ್ತಿತರರಿದ್ದರು.

ಸಂಸ್ಥಾಪಕರ ದಿನಾಚರಣೆ




ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್‌ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಶಾಲೆಯಲ್ಲಿ ಸಂಸ್ಥಾಪಕ ವಿಂಗ್ ಕಮಾಂಡರ್ ಕೆ. ಕೆ. ಶ್ರೀನಿವಾಸನ್ ಅವರ ಜನ್ಮದಿನದ ಪ್ರಯುಕ್ತ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೆಯ ಶಿಕ್ಷಕಿಯರಾದ ಶ್ರೀಮತಿ ವಿಜಯ ಶಿವಣ್ಣ, ಶ್ರೀಮತಿ ಪರಿಮಳ ಮೂರ್ತಿ, ಶೀಮತಿ ನೀಲುಸಿಂಗ್, ಶೀಮತಿ ಅಶ್ವಿನಿ ಪಾಟಿಲ್, ಶೀಮತಿ ರೀತಾ ಶೆಟ್ಟಿ, ಶೀಮತಿ ಅಶ್ವಿನಿ, ಶೀಮತಿ ಕವಿತ ಹಾಗೂ ಶ್ರೀ ಶಶಿಧರ್ ಶೆಟ್ಟಿ, ತಾಯಂದಿರು ಮತ್ತು ಮಕ್ಕಳು ಇದ್ದಾರೆ.

ಇತಿಹಾಸಕಾರ, ಲೇಖಕರಾದ ಡಾ.ವಿಕ್ರಂ ಸಂಪತ್‌ರಿಗೆ ಸನ್ಮಾನ



ಸಂಗೀತ ಕಲಾವಿದೆಯೊಬ್ಬರ ಜೀವನ ಮತ್ತು ಕಾಲಘಟ್ಟ ಕುರಿತಾದ ನನ್ನ ಹೆಸರು ಗೌಹರ್ ಜಾನ್ ಕೃತಿಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಖ್ಯಾತ ಇತಿಹಾಸಕಾರ ಮತ್ತು ಲೇಖಕರಾದ ಡಾ॥ವಿಕ್ರಂ ಸಂಪತ್ ಅವರನ್ನು ರೋಟರಿ ಐವರಿ ಸಿಟಿ ಮೈಸೂರು ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ರೋಟರಿ ಐವರಿ ಸಿಟಿ ಮೈಸೂರಿನ ಪುಷ್ಪಕಾಂಚನ್, ಆಶಾಶೇಖರ್, ಶೋಭಾನಾಗರಾಜು, ನಾಗರಾಜು, ಕೇಶವ್ ಕಾಂಚನ್, ಸುನಿಲ್‌ಬಾಳಿಗಾ, ಡಾ.ಜಿ.ಎಲ್.ಶೇಖರ್, ಡಾ.ಮೈಸೂರು ಮಂಜುನಾಥ್, ಡಾ.ರೋಹಿಣಿ ಶ್ರೀವತ್ಸ, ಶ್ರೀಗೌರಿ ಜೋಶಿ ಮತ್ತಿತರರು ಉಪಸ್ಥಿತರಿದ್ದರು.

ಲ್ಯಾಂಬೋರ್ಗಿನಿ ಡ್ರಿಫ್ಟಿಂಗ್ ಕೇಸ್‌ಗೆ ಬಿಗ್ ಟ್ವಿಸ್ಟ್: ಮುತ್ತಪ್ಪ ರೈ ಪುತ್ರ ರಿಕ್ಕಿಗೆ ಪೊಲೀಸ್ ಸಮನ್ಸ್, ಕಾರು ಸೀಜ್!



ಬೆಂಗಳೂರು: ನಗರದ ಎಂಜಿ ರಸ್ತೆಯಲ್ಲಿ ಲ್ಯಾಂಬೋರ್ಗಿನಿ ಕಾರು ಡ್ರಿಫ್ಟಿಂಗ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುತ್ತಪ್ಪ ರೈ ಪುತ್ರ ರಿಕ್ಕಿ ರೈಗೆ ಪೊಲೀಸರು ಸಮನ್ಸ್ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಬೆಂಗಳೂರು ನಗರದ ಎಂಜಿ ರಸ್ತೆಯ ಅನಿಲ್ ಕುಂಬ್ಳೆ ಸರ್ಕಲ್‌ನಲ್ಲಿ ಐಷಾರಾಮಿ ಕಾರು ಡ್ರಿಫ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಲ್ಯಾಂಬೋರ್ಗಿನಿ ಕಾರ(ಕೆಎ–05, ಎನ್‌ಆರ್–0009)ನ್ನು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಕಬ್ಬನ್ ಪಾರ್ಕ್ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ರವಿ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ.

ಮೂಲಗಳ ಪ್ರಕಾರ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ, ಕಾರು ಡ್ರಿಫ್ಟಿಂಗ್ ಮಾಡಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದ್ದು, ಇದೇ ಕಾರಣಕ್ಕೆ ರಿಕ್ಕಿ ರೈಗೆ ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಅಲ್ಲದೇ ಕಾರಿನ ದಾಖಲೆಗಳು ಯಾರ ಹೆಸರಿನಲ್ಲಿವೆ ಎಂದು ಪರಿಶೀಲಿಸಲು ಆರ್‌ಟಿಒಗೂ ಪೊಲೀಸರು ಪತ್ರ ಬರೆದಿದ್ದಾರೆ. ರಿಕ್ಕಿ ರೈ ಡ್ರಿಫ್ಟಿಂಗ್ ಮಾಡಿರೊ ಬಗ್ಗೆ ಸಿಸಿಟಿವಿಗಳ ದೃಶ್ಯಾವಳಿಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ. ಅನಿಲ್ ಕುಂಬ್ಳೆ ಸರ್ಕಲ್‌ನಲ್ಲಿ ಎರಡು ಮೂರು ಬಾರಿ ಕಾರ್ ಡ್ರಿಫ್ಟಿಂಗ್ ಮಾಡಲಾಗಿತ್ತು. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಉಚಿತ ತಪಾಸಣಾ ಶಿಬಿರ

ಮೈಸೂರು, ಮಾ.22– ಮೈಸೂರು ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ವತಿಯಿಂದ ಮಾ.23 ರಿಂದ 28 ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 6ಗಂಟೆ ವರೆಗೆ ಶಸ್ತ್ರಚಿಕಿತ್ಸಾ ಕಾಯಿಲೆಗಳ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಈ ಶಿಬಿರದಲ್ಲಿ ಅಪೆಂಡಿಸೈಟಿಸ್, ಪಿತ್ತಕೋಶದಲ್ಲಿ ಕಲ್ಲುಗಳು, ಹರ್ನಿಯ, ಫಿಸ್ಟುಲಾ, ಡಯಾಬಿಟಿಕ್ ಫೂಟ್ ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಉಪಯೋಗವನ್ನು ಪಡೆಯಬೇಕೆಂದು ಕೋರಲಾಗಿದೆ. ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ.30 ರಿಯಾಯಿತಿ ನೀಡಲಾಗುವುದು.

ಆಸಕ್ತರು 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಸುಯೋಗ್ ಆಸ್ಪತ್ರೆ ಜನರಲ್ ಮ್ಯಾನೇಜರ್ ಅರುಣ್‌ಕುಮಾರ್ ಪಿ.ಜೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಗರಳಪುರಿ ಉತ್ಸವ ಅಂಗವಾಗಿ ಸಾಮೂಹಿಕ ಯೋಗೋತ್ಸವ

ಉತ್ತಮ ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ

● ಶಾಸಕ ದರ್ಶನ್ ಧ್ರುವನಾರಾಯಣ್ ● ನೂರಾರು ಯೋಗ ಬಂಧುಗಳಿಂದ ಯೋಗ ಪ್ರದರ್ಶನ

ನಂಜನಗೂಡು, ಮಾ.22– ಪ್ರಸ್ತುತ ಒತ್ತಡ ಹಾಗೂ ವೇಗದ ಜೀವನ ಶೈಲಿಗೆ ತಡೆಯೊಡ್ಡಿ, ನಿಧಾನಗತಿಯ ಜೀವನ ಶೈಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಸಹಕಾರಿ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಗರಳಪುರಿ ಉತ್ಸವ ಅಂಗವಾಗಿ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದ ಆವರಣದಲ್ಲಿ ಭಾನುವಾರ ನಡೆದ ಯೋಗ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೇಗ–ಆವೇಗದ ಸ್ಥಿತಿಯಲ್ಲಿ ಎಲ್ಲರ ಜೀವನ ಸಾಗುತ್ತಿದ್ದು, ಆಹಾರ ಪದ್ಧತಿಯೂ ಹದಗೆಟ್ಟಿದೆ. ಮಾಹಿತಿ ತಂತ್ರಜ್ಞಾನವೂ ವೇಗ ಪಡೆದುಕೊಂಡಿದೆ. ಇದರಿಂದಾಗಿ ಜೀವನ ಶೈಲಿ ವೇಗ ಪಡೆದುಕೊಂಡು ಒತ್ತಡಕ್ಕೆ ಸಿಲುಕುತ್ತಿದ್ದೇವೆ. ಈ ಎಲ್ಲಾ ವೇಗಗಳಿಗೆ ಕಡಿವಾಣ ಹಾಕಿ ಜೀವನವನ್ನು ಆರೋಗ್ಯಕರ ಹಾಗೂ ಸುಂದರಗೊಳಿಸಲು ಯೋಗ, ಧ್ಯಾನ ಸಹಕಾರಿಯಾಗಿದೆ. ಎಲ್ಲಾ ಆಸನಗಳನ್ನು ಬಹಳ ನಿಧಾನಗತಿಯಲ್ಲಿ ಮಾಡಿಸುವ ಹಾಗೇ ಜೀವನದ ಪ್ರತಿಯೊಂದು ಏಳಿರಿಳಿತವನ್ನು ಅತ್ಯಂತ ತಾಳ್ಮೆ, ಸಹನೆಯಿಂದ ಎದುರಿಸುವ ಗುಣವನ್ನು ಮೈಗೂಡಿಸಿಕೊಳ್ಳಲು ಪ್ರತಿದಿನ ಯೋಗಾಭ್ಯಾಸದಲ್ಲಿ ನಿರತರಾಗಬೇಕಿದೆ ಎಂದರು.



ಶ್ರೀಕಂಠೇಶ್ವರಸ್ವಾಮಿ ದೇವಾಲಯ ಮುಂಭಾಗ ಯೋಗ ಜಾಗೃತಿ ಕಾರ್ಯಕ್ರಮ ನಡೆಯಿತು. ಯೋಗ ಜಾಗೃತಿಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಪಾಲ್ಗೊಂಡಿದ್ದರು.

ಗರಳಪುರಿ ಉತ್ಸವಕ್ಕೆ ಯೋಗೋತ್ಸವದ ಮೂಲಕವೇ ಚಾಲನೆ ನೀಡಿ ನಮ್ಮ ಒತ್ತಡ ಜೀವನ ಶೈಲಿಯಿಂದ ಹೊರಬಂದು ಸುಂದರ ಜೀವನ ರೂಪಿಸಿಕೊಳ್ಳಲು ಅರಿವು ಮೂಡಿಸುವ ಪ್ರಯತ್ನ ಇದಾಗಿದೆ. ಪ್ರತಿಯೊಬ್ಬರೂ ಯೋಗ ಮಾಡುವಂತಾಗಬೇಕು. ಯೋಗ ಮಹಾಮನೆಯ ಪ್ರಕಾಶ್ ಜಿ.ಉಡಿಗಾಲ ಅವರ ಆಶಯದಂತೆ ನಂಜನಗೂಡು ನಗರವನ್ನು ಯೋಗ ನಗರವನ್ನಾಗಿ ಮಾಡಲು ಅಗತ್ಯ ನೆರವು ನೀಡಲು ಸಿದ್ಧ ಎಂದರು.

ಮಲ್ಲನಮೂಲೆ ಗುರುಕಂಬಳೀಶ್ವರ ಮಠಾಧ್ಯಕ್ಷ ಇಮ್ಮಡಿ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ಯೋಗ ಹೆಚ್ಚು ಪ್ರಚಲಿತಕ್ಕೆ ಬಂದಷ್ಟು ಸಮಾಜವನ್ನು ಸುಸ್ಥಿತಿಯಲ್ಲಿಡಲು ಸಾಧ್ಯ. ಇದನ್ನು ಮನಗಂಡಿರುವ ನಂಜನಗೂಡಿನ ಯೋಗ ಮಹಾಮನೆ ನಿರಂತರವಾಗಿ ಈ ಸೇವೆಯಲ್ಲಿ ತೊಡಗಿಸಿಕೊಂಡು ಸಮಾಜದ ಉನ್ನತಿಗೆ ಶ್ರಮಿಸುತ್ತಿದೆ. ಇವರ ಸೇವೆ ಹೀಗೆ ನಿರಂತರವಾಗಿ ಸಾಗಲಿ ಎಂದು ಆಶಿಸಿದರು.

ಈ ವೇಳೆ ಮಾಜಿ ಶಾಸಕ ಎನ್.ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ. ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯಕುಮಾರ್, ಮುಖಂಡರಾದ ಗೋವಿಂದರಾಜು, ಯೋಗ ಮಹಾಮನೆಯ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ ಸೇರಿದಂತೆ ಇತರರಿದ್ದರು.

ಗರಳಪುರಿ ಉತ್ಸವಕ್ಕೆ ವಿದ್ಯುಕ್ತ ಚಾಲನೆ

ಶ್ರೀಕಂಠೇಶ್ವರಸ್ವಾಮಿ ದೊಡ್ಡಜಾತ್ರಾ ಮಹೋತ್ಸವ ಅಂಗವಾಗಿ ಇದೇ ಮೊದಲ ಬಾರಿಗೆ ಆಯೋಜಿಸಿರುವ 9 ದಿನಗಳ ಗರಳಪುರಿ ಉತ್ಸವಕ್ಕೆ ಯೋಗ ಮಹಾಮನೆಯ ನೂರಾರು ಯೋಗ ಬಂಧುಗಳು ಭಾನುವಾರ ಸಾಮೂಹಿಕವಾಗಿ ಯೋಗ ಪ್ರದರ್ಶನ ಮಾಡುವ ಮೂಲಕ ಉತ್ಸವಕ್ಕೆ ವಿದ್ಯುಕ್ತ ಚಾಲನೆ ದೊರೆಯಿತು.

7 ಶಾಖೆಯಿಂದ ಆಗಮಿಸಿದ್ದ 400ಕ್ಕೂ ಹೆಚ್ಚು ಯೋಗ ಬಂಧುಗಳು, ಪೊಲೀಸ್ ಇಲಾಖೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಪೌರ ಕಾರ್ಮಿಕರು ಶ್ವೇತ ವಸ್ತ್ರಧಾರಿಗಳಾಗಿ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಅವರ ಮಾರ್ಗದರ್ಶನದಲ್ಲಿ ಯೋಗಾಸನ ಮಾಡುವ ಮೂಲಕ ಉತ್ಸವಕ್ಕೆ ಮೆರುಗು ನೀಡಿದರು.

ಶಾಸಕ ದರ್ಶನ್ ಧ್ರುವನಾರಾಯಣ ಯೋಗಾಭ್ಯಾಸದಲ್ಲಿ ಪಾಲ್ಗೊಂಡು ಗಮನ ಸೆಳೆದರು. ಇನ್ಸ್‌ಪೆಕ್ಟರ್‌ಗಳಾದ ಆನಂದ್, ರವೀಂದ್ರ, ಎಎಸ್‌ಐ ವಸಂತಕುಮಾರ್ ಸಾಥ್ ನೀಡಿದರು.

ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ

ಇಂದು ಉದ್ಯಮಿ ಸಾ.ರಾ.ಜಯಂತ್ ಹುಟ್ಟುಹಬ್ಬ



ಕೆ.ಆರ್.ನಗರ, ಮಾ.22– ಮಾಜಿ ಸಚಿವ ಸಾ.ರಾ.ಮಹೇಶ್ ಅವರ 2ನೇ ಪುತ್ರ ಉದ್ಯಮಿ ಸಾ.ರಾ.ಜಯಂತ್ ಅವರ ಹುಟ್ಟುಹಬ್ಬ ಮಾ.23ರಂದು ನಡೆಯಲಿದ್ದು, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ವಿವಿಧ ಸಮಾಜ ದೇವೋಭವ ಕಾರ್ಯಕ್ರಮವನ್ನು ಸಾ.ರಾ.ಜಯಂತ್ ಸ್ನೇಹ ಬಳಗದ ಮೂಲಕ ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಗರುಡಂಭ ವೃತ್ತದಲ್ಲಿ ಬೆಳಗ್ಗೆ 12 ಗಂಟೆಗೆ ಸಾ.ರಾ.ಜಯಂತ್ ಅವರಿಗೆ ಬೃಹತ್ ಹಾರವನ್ನು ಕ್ರೇನ್ ಮೂಲಕ ಅಭಿಮಾನಿಗಳು ಹಾಕಲಿದ್ದಾರೆ. ಬಳಿಕ ರಸ್ತೆ ಬದಿ ವ್ಯಾಪಾರಿಗಳಿಗೆ ಹತ್ತು ತಳ್ಳುವ ಗಾಡಿ, 150 ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ, ಡೋರ್ನಹಳ್ಳಿ ವೃದ್ಧಾಶ್ರಮ ಮತ್ತು ಅಂದ ಮಕ್ಕಳ ಶಾಲೆಗೆ ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ. ಬಳಿಕ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಣ್ಣು ಹಂಪಲು ವಿತರಿಸಲಾಗುತ್ತದೆ. ಇದಕ್ಕೂ ಮೊದಲು ಪಟ್ಟಣದ ಹೊರವಲಯದಲ್ಲಿರುವ ಮೀನಾಕ್ಷಿ ಸಮೇತ ಅರ್ಕೇಶ್ವರಸ್ವಾಮಿ ದೇವಾಲಯದಲ್ಲಿ ಸಾ.ರಾ.ಜಯಂತ್ ಅಭಿಮಾನಿಗಳು ಪೂಜೆ ಸಲ್ಲಿಸಲಿದ್ದಾರೆ. ಹಾಗೆಯೇ ಸಾಲಿಗ್ರಾಮದ ಶ್ರೀಯೋಗಾನರಸಿಂಹ ದೇವಾಲಯದಲ್ಲಿ ಜೆಡಿಎಸ್ ಮುಖಂಡರು ಪೂಜೆ ಹಮ್ಮಿಕೊಂಡಿದ್ದಾರೆ.

ಜೆಡಿಎಸ್ ಯುವ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ನಗರ ಯುವ ಜೆಡಿಎಸ್ ಅಧ್ಯಕ್ಷ ವಿಕಾಸ್(ವಿಕ್ಕಿ) ಕೋರಿದ್ದಾರೆ.

ಹಕ್ಕುಪತ್ರಕ್ಕಾಗಿ ಶಾಸಕರಿಗೆ ಮನವಿ



ಹೆಚ್.ಡಿ.ಕೋಟೆ ತಾಲೂಕಿನ ಬಿ.ಸುಗೂರು ಗ್ರಾಪಂ ವ್ಯಾಪ್ತಿಯ ಕಟ್ಟೆಹುಂಡಿ ಸರ್ವೇ ನಂ.32ರಲ್ಲಿ ಅನಧಿಕೃತವಾಗಿ ನಿರ್ಮಿಸಿರುವ 30ಕ್ಕೂ ಹೆಚ್ಚು ಮನೆಗಳಿಗೆ 94ಸಿ ಅಡಿ ಅಧಿಕೃತ ಹಕ್ಕುಪತ್ರ ಕೊಡಿಸುವ ಸಂಬಂಧ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಮನವಿ ಸಲ್ಲಿಸಲಾಯಿತು. ಮುಖಂಡರಾದ ಶಶಿಕುಮಾರ್, ಕಾಶಿ ವಿಶ್ವನಾಥ ಸೇವಾ ಸಮಿತಿ ಅಧ್ಯಕ್ಷ ಸಿದ್ದೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಶಿವರಾಜು, ಕೆಂಪೇಗೌಡ, ನಿಂಗರಾಜು, ಮಹೇಶ, ಭೈರೇಗೌಡ ಇತರರಿದ್ದರು.

ಜಾನಪದ ಕಲೆ ನಮ್ಮ ಸಂಸ್ಕೃತಿಯ ಪ್ರತಿಬಿಂಬ

ಶಾಸಕ ದರ್ಶನ್ ಧ್ರುವನಾರಾಯಣ್



ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಮಾ.22– ಜಾನಪದ ಕಲೆಗಳು ನಮ್ಮ ಸಂಸ್ಕೃತಿ, ಪರಂಪರೆ, ವೌಲ್ಯಗಳನ್ನು ಪ್ರತಿಬಿಂಬಿಸುವ ಅಮೂಲ್ಯವಾದ ಸಂಪತ್ತು. ಆದ್ದರಿಂದ ಗರಳಪುರಿ ಉತ್ಸವದ ಮೂಲಕ ಜಾನಪದ ಕಲೆಯನ್ನು ಉತ್ತೇಜಿಸಿ ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಶ್ರೀಕಂಠೇಶ್ವರಸ್ವಾಮಿ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ 9 ದಿನಗಳ ಕಾಲ ನಡೆಯುವ ಗರಳಪುರಿ ಉತ್ಸವದ ಜಾನಪದ ಗಾಯನ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಕಲೆ ನಮ್ಮ ಸಂಸ್ಕೃತಿಯ ಪ್ರತಿಬಿಂಬ. ಜಾನಪದ ಕಲಾವಿದರಿಗೆ ಸರಿಯಾದ ಉತ್ತೇಜನ ದೊರಕದ ಕಾರಣ ಅವು ಅಳುವಿನಂಚಿನಲ್ಲಿವೆ. ಆದ್ದರಿಂದ ಗರಳಪುರಿ ಉತ್ಸವದ ಮೂಲಕ ಸ್ಥಳೀಯ ಜಾನಪದ ಕಲಾವಿದರಿಗೆ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡಿ ನಮ್ಮ ಮುಂದಿನ ಪೀಳಿಗೆಗೆ ಜಾನಪದ ಕಲೆ ಪರಿಚಯಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ದೇವಿರಮ್ಮನಹಳ್ಳಿ ಸಂಗಮ ಮಠದ ನಾಗರಾಜೇಂದ್ರ ಸ್ವಾಮೀಜಿ ಮಾತನಾಡಿ, ಶಾಸಕ ದರ್ಶನ್ ಗರಳಪುರಿ ಉತ್ಸವದ ಮೂಲಕ ನಶಿಸುತ್ತಿರುವ ಜಾನಪದ ಕಲೆಗೆ ಉತ್ತೇಜನ ನೀಡಿ, ಸಾಂಸ್ಕೃತಿಕ ಪರಂಪರೆಯ ಗತ ವೈಭವವನ್ನು ಮರು ಸ್ಥಾಪಿಸಲು ಮುಂದಾಗಿದ್ದಾರೆ. ಅಲ್ಲದೆ ಸಾವಿರಾರು ಕಲಾವಿದರಿಗೆ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ರಂಗಗೀತೆ, ಸೋಬಾನೆ ಪದ, ಜಾನಪದ ಗೀತೆ, ಭಕ್ತಿಗೀತೆ ಗಾಯನ ಸಾರ್ವಜನಿಕರ ಕಣ್ಮನ ಸೆಳೆದವು. ಅಲ್ಲದೆ ವೇದಿಕೆಯನ್ನು ಆಕರ್ಷಕವಾಗಿ ಅಲಂಕಾರ ಮಾಡಿದ್ದು ಸಾರ್ವಜನಿಕರ ಪ್ರಶಂಸೆಗೆ ಕಾರಣವಾಯಿತು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಶ್ರೀಕಂಠ ನಾಯಕ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಸಿ.ಎಂ.ಶಂಕರ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಮುಖಂಡರಾದ ರಾಜೇಶ್, ಎನ್.ಟಿ.ಗಿರೀಶ್, ಎನ್.ಎಸ್.ಮಾದಪ್ಪ, ಗಾಯತ್ರಿ, ದೊರೆಸ್ವಾಮಿ ನಾಯಕ, ಶಿವಪ್ಪ ದೇವರು, ಶ್ರೀಧರ್, ಶಶಿರೇಖಾ, ಲತಾ ಸಿದ್ಧಶೆಟ್ಟಿ ಸೇರಿದಂತೆ ಹಲವರಿದ್ದರು.

> ದಿನನಿತ್ಯದ ಊಟಕ್ಕಾಗಿ ಜಾನಪದ ಹಾಡು ಹಾಡುತ್ತಿದ್ದ ಓದು ಬರಹ ಗೊತ್ತಿಲ್ಲದ ನಮ್ಮಂತಹ ಕಲಾವಿದರನ್ನು ಗುರುತಿಸಿ ರಾಜ್ಯ ಪ್ರಶಸ್ತಿ, ಡಾಕ್ಟರೇಟ್ ಪದವಿ ನೀಡಿ ಗೌರವಿಸುವಂತೆ ಮಾಡಿದ್ದು ಜಾನಪದ ಕಲೆ. ಆದ್ದರಿಂದ ಯುವಕರು ನಮ್ಮ ಸಂಸ್ಕೃತಿಯ ಪ್ರತೀಕವಾದ ಜಾನಪದ ಕಲೆ ಕಲಿಯಲು ಮುಂದಾಗಬೇಕು. ನಂಜನಗೂಡಿನಲ್ಲಿ ರಂಗಗೀತೆ, ಜಾನಪದ, ನಾಟಕ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ಕಲೆ ಗುರುತಿಸಿ ಅವರಿಗೆ ರಾಜ್ಯ ಪ್ರಶಸ್ತಿ ದೊರಕುವಂತೆ ಶಾಸಕರು ಕೆಲಸ ನಿರ್ವಹಿಸಬೇಕು. ನನಗೆ ರಾಜ್ಯ ಪ್ರಶಸ್ತಿ ಕೊಡಿಸಿದ್ದು ಸಂಸದ ದಿ.ಆರ್.ಧ್ರುವನಾರಾಯಣ್ ಅವರು. ಶಾಸಕ ದರ್ಶನ್ ಅವರು ಕೂಡ ಅವರ ಹಾದಿಯಲ್ಲಿ ಜನಸೇವೆಯಲ್ಲಿ ತೊಡಗಿದ್ದಾರೆ. ಅವರು ಮುಂದೆ ಮಂತ್ರಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರಕಲಿ.
>
> **–ಮಳವಳ್ಳಿ ಮಹದೇವಸ್ವಾಮಿ, ರಾಜ್ಯ ಪ್ರಶಸ್ತಿ ವಿಜೇತ ಜಾನಪದ ಕಲಾವಿದ.**

ಮಾ.26, ಶ್ರೀಚನ್ನಮಲ್ಲಿಕಾರ್ಜುನ ಸ್ವಾಮೀಜಿ ಪುಣ್ಯ ಸ್ಮರಣೋತ್ಸವ

ತಿ.ನರಸೀಪುರ, ಮಾ.22– ತಾಲೂಕಿನ ಮಾಡ್ರಳ್ಳಿ ಗ್ರಾಮದ ಶ್ರೀಪಟ್ಟದ ಮಠದ ಶ್ರೀಚನ್ನಮಲ್ಲಿಕಾರ್ಜುನ ಸ್ವಾಮೀಜಿ ಅವರ 50ನೇ ಸುವರ್ಣ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಮಾ.26ರಂದು ಮಾಡ್ರಹಳ್ಳಿ ಮಠದ ಆವರಣದಲ್ಲಿ ನಡೆಯಲಿದೆ ಎಂದು ಮಠದ ಮಠಾಧ್ಯಕ್ಷ ಶ್ರೀಶಾಂತ ಮಲ್ಲಿಕಾರ್ಜುನಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀಗುರು ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಅವರ ವಿದ್ಯಾಸಂಸ್ಥೆ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು ಅಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ ವಹಿಸಲಿದ್ದು, ದೇವನೂರು ದಾಸೋಹ ಮಠದ ಶ್ರೀಮಹಾಂತ ಸ್ವಾಮೀಜಿ, ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲ ಮಠದ ಡಾ.ಶ್ರೀಚನ್ನಬಸವಸ್ವಾಮೀಜಿ, ಶ್ರೀಮಲೆ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಶ್ರೀಗುರುಮಲ್ಲೇಶ್ವರರ ಭಾವಚಿತ್ರವನ್ನು ಬೆಟ್ಟದಪುರದ ಶ್ರೀಸಲೀಲಾಖ್ಯ ಮತ್ತು ಕನ್ನಡ ಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿಗಳು ಅನಾವರಣಗೊಳಿಸಲಿದ್ದಾರೆ ಎಂದರು.



ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಶ್ರೀಬಸವೇಶ್ವರರ ಭಾವಚಿತ್ರವನ್ನು ಮರೆಯಾಲ ಮುರುಗ ರಾಜೇಂದ್ರ ಸ್ವಾಮೀಜಿ, ಸಂಸ್ಥಾನ ಮಠದ ಶ್ರೀಇಮ್ಮಡಿ ಮುರುಗ ರಾಜೇಂದ್ರ ಸ್ವಾಮೀಜಿ ಅನಾವರಣಗೊಳಿಸಲಿದ್ದು, ಕಾರ್ಯಕ್ರಮದಲ್ಲಿ ಪಡಗೂರು ಅಡವಿ ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ ಜಗದ್ಗುರು ಡಾ. ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಭಾವಚಿತ್ರವನ್ನು, ಮಲ್ಲನಮೂಲೆ ಶ್ರೀಇಮ್ಮಡಿ ಸಿದ್ದಲಿಂಗ ಸ್ವಾಮೀಜಿಯವರು ಡಾ. ಶ್ರೀಶಿವಕುಮಾರ ಸಾಮೀಜಿಯವರ ಭಾವಚಿತ್ರ ಹಾಗೂ ಬರಡನಪುರದ ಶ್ರೀಪರಶಿವಮೂರ್ತಿ ಸ್ವಾಮೀಜಿಯವರು ಶ್ರೀಚನ್ನಮಲ್ಲಿಕಾರ್ಜುನ ಸ್ವಾಮೀಜಿಗಳ ಭಾವಚಿತ್ರ ಅನಾವರಣಗೊಳಿಸಲಿದ್ದಾರೆ. ಮೈಸೂರಿನ ಕುಂದೂರು ಮಠದ ಡಾ.ಶ್ರೀಶರತ್ ಚಂದ್ರ ಸ್ವಾಮೀಜಿ, ಸೋಮಹಳ್ಳಿಯ ಶ್ರೀಸಿದ್ದಮಲ್ಲ ಸ್ವಾಮೀಜಿ, ಗಾವಡಗೆರೆ ಮಠದ ಶ್ರೀನಟರಾಜ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರುಗಳು ಭಾಗವಹಿಸಲಿದ್ದಾರೆ ಎಂದರು.

ವಿದ್ಯೋದಯ ಶಾಲೆ ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ದಿ ಮಾತನಾಡಿ, ಪಟ್ಟಣದ ಡಾ.ಶಿವಕುಮಾರ ಸ್ವಾಮೀಜಿ ಅವರ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ಲಿಂಗಪ್ಪ ಕಾರ್ಯಕ್ರಮಕ್ಕೆ 25 ಸಾವಿರ ರೂ. ದೇಣಿಗೆ ನೀಡಿ ಪ್ರಚಾರ ವ್ಯವಸ್ಥೆಗೆ ವಾಹನ ಸೌಲಭ್ಯ ಕಲ್ಪಿಸಿದ್ದಾರೆ. 5 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಎಲ್ಲರಿಗೂ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. ಬುಧವಾರ ರಾತ್ರಿ 1500 ಮಂದಿಗೆ ಊಟದ ವ್ಯವಸ್ಥೆ ಹಾಗೂ ಬೆಳಗ್ಗೆ ಒಂದು ಸಾವಿರ ಜನರಿಗೆ ತಿಂಡಿ ವ್ಯವಸ್ಥೆ ಕಲ್ಪಿಸಲಾಗಿದ್ದು, ತಾಲೂಕಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಾಜಿ ಕೇಂದ್ರ ಸಚಿವ ಎಂ.ಎಸ್. ಗುರುಪಾದಸ್ವಾಮಿ ಪುತ್ರ ಎಂ.ಜಿ.ಪ್ರಕಾಶ್, ಬೆಂಗಳೂರಿನ ಆರ್‌ಐಟಿ ಈಎಸ್‌ನ ಜನರಲ್ ಮ್ಯಾನೇಜರ್ ಎಂ.ಜಿ. ಸುದೀಪ್, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ದಿವಂಗತ ಎಂ.ಸಿ.ಶಿವಾನಂದ ಶರ್ಮಾ ಅವರ ಪುತ್ರ ಎಂ.ಎಸ್.ಶಿವಪ್ರಸಾದ್ ಹಾಗೂ ಅನಾಥ ಶವಗಳ ಮುಕ್ತಿದಾತ ಡಾ.ಎಂ. ಮಾದೇಶ್‌ರನ್ನು ಸನ್ಮಾನಿಸಲಾಗುವುದು ಎಂದರು.

ಡಾ.ಶಿವಕುಮಾರ ಸ್ವಾಮಿಗಳ ಸೇವಾ ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ ಮಾತನಾಡಿ, ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಹೆಚ್.ವಿ. ಬಸವರಾಜು, ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್ ಆಗಮಿಸಲಿದ್ದು, ವಿಶ್ರಾಂತ ಪ್ರಾಧ್ಯಾಪಕ ಪ್ರೊಫೆಸರ್ ಡಿ.ಎಸ್.ಸದಾಶಿವಮೂರ್ತಿ ಉಪನ್ಯಾಸ ನೀಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗುರು ಶ್ರೀಚನ್ನಮಲ್ಲಿಕಾರ್ಜುನ ಸ್ವಾಮೀಜಿ ವಿದ್ಯಾಸಂಸ್ಥೆ ಐಟಿಐ ಕಾಲೇಜಿನ ಪ್ರಾಂಶುಪಾಲ ನಂಜುಂಡಸ್ವಾಮಿ, ಬೆಣ್ಣೆ ಕುಮಾರ್ ಉಪಸ್ಥಿತರಿದ್ದರು.

ಏ.2, ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

ತಿ.ನರಸೀಪುರ: ಕಾವೇರಿ, ಕಪಿಲ ನದಿ ದಡದಲ್ಲಿರುವ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಏ.2ರಂದು ನಡೆಯಲಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ರಥೋತ್ಸವಕ್ಕೆ ಎಲ್ಲಾ ಸಮುದಾಯದವರು ಸಹಕಾರ ನೀಡುವಂತೆ ಪಾರುಪತ್ತೇಗಾರ್ ತಿರುಮಕೂಡಲು ದಿಲೀಪ್ (ದೀಪು) ಮನವಿ ಮಾಡಿದ್ದಾರೆ.

ಪುರಸಭೆ ವತಿಯಿಂದ ಸ್ವಚ್ಛತಾ ಕಾರ್ಯಗಳು ಜರುಗಲಿದ್ದು, ರಥೋತ್ಸವಕ್ಕೆ ಬರುವ ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯವರು ಮಾಡಲಿದ್ದಾರೆ ಎಂದರು.

ಮಾ.26ರಂದು ಅಂಕುರಾರ್ಪಣ, ಮಾ.27ರಂದು ಧ್ವಜಾರೋಹಣ, ಚಂದ್ರ ಮಂಡಲಾರೋಹಣ, ಮಾ.28ರಂದು ತಿರುನಾಳ್ ಕಟ್ಟೆ ಉತ್ಸವ, ಅನಂತ ಪೀಠಾರೋಹಣ, ಮಾ.29ರಂದು ಹಂಸಾರೋಹಣ, ಮಾ.30ರಂದು ಪುಷ್ಪ ಮಂಟಪಾರೋಹಣ, ಮಾ.31ರಂದು ಪ್ರಹ್ಲಾದ ಪರಿಪಾಲನೋತ್ಸವ, ಏ.1ರಂದು ಲಕ್ಷ್ಮಿ ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲನೋತ್ಸವ, ಏ.2ರಂದು ದಿವ್ಯ ಬ್ರಹ್ಮ ರಥೋತ್ಸವ, ಏ.3ರಂದು ತಿರುನಾಳ್ ಕಟ್ಟೆ ಉತ್ಸವ, ಡೋಲೋತ್ಸವ, ಶಯನೋತ್ಸವ, ಏ.4ರಂದು ಅವಕೃತ ಸ್ನಾನ, ಧ್ವಜಾರೋಹಣ, ಏ.5ರಂದು ಮಹಾಭಿಷೇಕ, ಹನುಮಂತೋತ್ಸವ, ಏ.6ರಂದು ವೈಮಾಳಿಗೆ ಉತ್ಸವ ನಡೆಯಲಿದೆ ಎಂದು ಪಾರುಪತ್ತೇದಾರ ತಿರುಮಕೂಡಲು ದಿಲೀಪ್ (ದೀಪು) ಮನವಿ ಮಾಡಿದ್ದಾರೆ.

ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಒತ್ತಾಯಿಸಿ

ಮಾ.25ರಂದು ಬೆಂಗಳೂರಲ್ಲಿ ಬೃಹತ್ ಸಮಾವೇಶ

ಸಮಾವೇಶಕ್ಕೆ ತೆರಳುವವರಿಗೆ 15 ಬಸ್‌ಗಳ ವ್ಯವಸ್ಥೆ: ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್

ಕೆ.ಆರ್.ನಗರ: ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಒತ್ತಾಯಿಸಿ ಮಾ.25ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಸಮಾವೇಶಕ್ಕೆ ತೆರಳಲು ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಿಂದ 15 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್ ತಿಳಿಸಿದರು.



ಪೂರ್ವಭಾವಿ ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್ ಮಾತನಾಡಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದಿಂದ ಮಾ.25 ರಂದು ಬೆಂಗಳೂರಿನಲ್ಲಿ ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಬೃಹತ್ ಪ್ರತಿಭಟನೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನ್ಯಾಯ ಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಮೀಸಲಾತಿ ವರದಿಯಿಂದ ಉಂಟಾದ ಅವೈಜ್ಞಾನಿಕ ಗೊಂದಲದಿಂದ ಪ್ರವರ್ಗ ಬಿ ಹಾಗೂ ಪ್ರವರ್ಗ ಸಿ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಅನ್ಯಾಯವಾಗುತ್ತಿದೆ. ಹೀಗಾಗಿ ಯಾವುದೇ ಸಮುದಾಯದ ಹಕ್ಕುಗಳನ್ನು ಕಸಿದುಕೊಳ್ಳುವ ಉದ್ದೇಶ ನಮ್ಮದಲ್ಲ. ಆದರೆ ನಮಗೆ ದಕ್ಕಬೇಕಾದ ಮೀಸಲಾತಿಯನ್ನು ನೈತಿಕವಾಗಿ ಕೇಳುವುದು ನಮ್ಮ ಸ್ವಾಭಿಮಾನದ ಹಕ್ಕು ಎಂದರು.

ಒಳ ಮೀಸಲಾತಿ ಹಂಚಿಕೆ ಮುನ್ನೆಲೆಗೆ ಬಂದ ಮೇಲೆ ಅದು ಸುಳ್ಳೆಂದು ಸಾಬೀತಾಗಿದೆ. ಸಮೀಕ್ಷೆಯಲ್ಲಿ ಹೊಲೆಯ ಜನಾಂಗದವರು ಸರಿಯಾಗಿ ಪಾಲ್ಗೊಳ್ಳದೇ ವ್ಯತ್ಯಾಸವಾಗಿದೆ. ಪ್ರಾದೇಶಿಕವಾರು ಭಿನ್ನ ಭಿನ್ನವಾಗಿ ಜಾತಿಯನ್ನು ನಮೂದಿಸಿ ತೊಂದರೆಗೆ ಸಿಲುಕುವಂತಾಗಿದೆ ಎಂದರು.

ದಲಿತ ಹಿರಿಯ ಮುಖಂಡ ನಾಗರಾಜ್ ಮಾತನಾಡಿ, ನಮ್ಮ ಮಕ್ಕಳ ಭವಿಷ್ಯಕ್ಕೆ ಕಂಟಕವಾಗಿರುವ ಒಳ ಮೀಸಲಾತಿ ತಿರಸ್ಕರಿಸಬೇಕೆಂಬುದು ನಮ್ಮ ಆಗ್ರಹವಾಗಿದ್ದು, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾ.25 ರಂದು ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದ್ದು, ಈ ಹೋರಾಟದಲ್ಲಿ ಸಮುದಾಯದ ಜನರು ಭಾಗವಹಿಸಲು ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್ ಅವರು ವೈಯಕ್ತಿಕವಾಗಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ಗ್ರಾಮಗಳಿಗೆ 15 ಬಸ್‌ಗಳ ವ್ಯವಸ್ಥೆ ಹಾಗೂ ತಿಂಡಿ, ಊಟದ ವ್ಯವಸ್ಥೆ ಕಲ್ಪಿಸಿದ್ದಾರೆ. ಹಾಗಾಗಿ ಬಲಗೈ ಸಮುದಾಯದ ಯುವಕರು, ಮುಖಂಡರು ಪ್ರತಿಯೊಂದು ಹಳ್ಳಿಗಳಿಂದ ಸಾವಿರಾರು ಜನರು ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ತಮ್ಮಣ್ಣ, ಪುರಸಭೆ ಮಾಜಿ ಅಧ್ಯಕ್ಷೆ ಗೀತಾ, ಬಿಎಸ್‌ಪಿ ತಾಲೂಕು ಅಧ್ಯಕ್ಷ ಶಿವಕುಮಾರ್, ನಿವೃತ್ತ ಶಿಕ್ಷಕ ಸಂಪತ್, ದಶರಥಿ, ದಸಂಸ ಮುಖಂಡ ಚಂದ್ರು, ದಲಿತ ಮುಖಂಡರಾದ ಅಶೋಕ, ಮುತ್ತುರಾಜ್, ಕಾಶಿ, ಚಂದಯ್ಯ, ಮಂಜು, ರಘು, ಸೂರಿ, ಹೆಚ್.ಜೆ.ಮಹದೇವ್, ಕೆನರಾ ಬ್ಯಾಂಕ್ ಸಿದ್ದಯ್ಯ, ಶಿವು, ಮನು, ಮಾದಯ್ಯ, ಬಸವೇಶ್ ಇತರರಿದ್ದರು.

ಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ಸಂಪನ್ನ



ಇಟ್ನ ಗ್ರಾಮದಿಂದ ಅಮ್ಮನವರ ಉತ್ಸವ ಮೂರ್ತಿ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿತು.

ಸರಗೂರು, ಮಾ.22– ತಾಲೂಕಿನ ಹಾಲುಗಡ, ಇಟ್ನ ಗ್ರಾಮದಲ್ಲಿ ಕಳೆದ 3 ದಿನಗಳಿಂದ ವಿಜೃಂಭಣೆಯಿಂದ ನಡೆದ ತಾಲೂಕಿನ ಅದಿದೇವತೆ ಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ಶನಿವಾರ ಸಂಪನ್ನಗೊಂಡಿತು.

ಯುಗಾದಿ ಹಬ್ಬದ ಪ್ರಯುಕ್ತ ಗುರುವಾರ ಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರ ಉತ್ಸವ ಮೂರ್ತಿಯನ್ನು ತಂದು ಹಾಲುಗಡುವಿನ ಜಪದಕಟ್ಟೆಯಲ್ಲಿ ಪೂಜಿಸಲಾಯಿತು. ನಂತರ ಭಕ್ತರು ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿ, ತಾಯಿ ದರ್ಶನ ಪಡೆದು ಹರಕೆ ತೀರಿಸಿದರು. ನಂತರ ಅಮ್ಮನವರನ್ನು ಗೂಳಿ ಮಂಟಪದಲ್ಲಿ ಪೂಜಿಸಿದ ಬಳಿಕ ಹಾಲಿನ ಮಂಟಪದಲ್ಲಿ ಪೂಜಿಸಲಾಯಿತು.

ಅದೇ ದಿನ ಹಾಲುಗಡುವಿನಿಂದ ಇಟ್ನ ಗ್ರಾಮಕ್ಕೆ ವಾದ್ಯಗೋಷ್ಠಿಗಳೊಂದಿಗೆ ತೆರಳಿದ ಉತ್ಸವ ಮೂರ್ತಿ ಮಠದ ಹೊಲದ ಮಂಟಪದಲ್ಲಿ ಪೂಜಿಸಲಾಯಿತು. ಬಳಿಕ ಅಮ್ಮನವರನ್ನು ಕುದುರೆ ಮೇಲೆ ಕೂರಿಸಿ ಹೂವಿನಿಂದ ಅಲಂಕರಿಸಿ ವಿವಿಧ ಕಲಾತಂಡಗಳ ಸಮೇತ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇದಲ್ಲದೆ ಬಾಣ ಬಿರುಸುಗಳ ಸಮೇತ ವಿಶೇಷ ಪೂಜೆ ಸಲ್ಲಿಸಲಾಯಿತು.

ಶುಕ್ರವಾರ ಕಪಿಲಾ ನದಿಯಲ್ಲಿ ಚಿಕ್ಕದೇವಮ್ಮನವರಿಗೆ ತೀರ್ಥ ಉತ್ಸವ, ಕುಂಕುಮಾರ್ಚನೆ ಸೇರಿದಂತೆ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಭಕ್ತರಿಗೆ ಕಪಿಲ ನದಿ ಸಮೀಪದಲ್ಲಿ 3 ದಿನಗಳು ಅನ್ನ ಸಂತರ್ಪಣೆ ನಡೆಸಲಾಯಿತು. ಶನಿವಾರ ಮತ್ತೆ ಇಟ್ನ ಗ್ರಾಮದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ದೇವರನ್ನು ಹಾಲುಗಡುವಿನ ಕಪಿಲಾ ನದಿ ಮಧ್ಯ ಭಾಗದ ಜಪದಕಟ್ಟೆಯಲ್ಲಿ ಕೂರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಸಂಜೆ 4 ಗಂಟೆಗೆ ಅಮ್ಮನವರ ಉತ್ಸವಮೂರ್ತಿ ಚಿಕ್ಕದೇವಮ್ಮ ಬೆಟ್ಟಕ್ಕೆ ಸತ್ತಿಗೆ, ಮಂಗಳವಾದ್ಯ ಸಮೇತ ತೆರಳಿತು. ದಾರಿಯುದ್ದಕ್ಕೂ ಜನರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು.

ಕಾಡಿನ ಉಳಿವಿಗಾಗಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಶ್ಲಾಘನೀಯ

ಹುಲಿಮಿತ್ರ ಕ್ರಿಕೆಟ್ ಟೂರ್ನಿ ಉದ್ಘಾಟಿಸಿದ ಶಾಸಕ ಅನಿಲ್ ಚಿಕ್ಕಮಾದು

ಹೆಚ್.ಡಿ.ಕೋಟೆ, ಮಾ.22– ಕಾಡಿನ ಉಳಿವಿಗಾಗಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ. ಅಧಿಕಾರಿಗಳು ಇದನ್ನು ಮುಂದುವರಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಅರಣ್ಯ ಇಲಾಖೆ ಮೈಸೂರು ಪ್ರಾದೇಶಿಕ ವಿಭಾಗ ಮತ್ತು ಮೈಸೂರಿನ ಹಾರ್ಟ್ ಸಂಸ್ಥೆ, ಹೆಚ್.ಡಿ.ಕೋಟೆ ಉಪವಿಭಾಗ ಸಹಯೋಗದಲ್ಲಿ ಆಯೋಜಿಸಿದ ಹುಲಿಮಿತ್ರ ಕ್ರಿಕೆಟ್ ಟೂರ್ನಿ ಉದ್ಘಾಟಿಸಿ ಅವರು ಮಾತನಾಡಿದರು.

ಮಹನೀಯರು, ಕ್ರೀಡಾಪಟು, ರಾಜಕಾರಣಿಗಳ ಹೆಸರಿನಲ್ಲಿ ಕ್ರಿಕೆಟ್ ಟೂರ್ನಿ ನಡೆಯುವುದು ಸಾಮಾನ್ಯ. ಆದರೆ ಅರಣ್ಯದ ಹೆಸರಿನಲ್ಲಿ ನಡೆಯುತ್ತಿರುವುದು ವಿಶೇಷ. ಪಂದ್ಯಾವಳಿಯಲ್ಲಿ ಸುಮಾರು 20 ತಂಡಗಳು ಭಾಗವಹಿಸುತ್ತಿವೆ. ಹೀಗಾಗಿ ಇದನ್ನು ಒಂದು ವರ್ಷಕ್ಕೆ ಸೀಮಿತಗೊಳಿಸದೇ ಪ್ರತಿವರ್ಷ ಇಂತಹ ಕಾರ್ಯಕ್ರಮ ಆಯೋಜಿಸಬೇಕು. ನಮ್ಮ ನಮ್ಮ ತಾಲೂಕಿನ ಹಾಡಿ ಮಕ್ಕಳು ಕೂಡ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಆಡುತ್ತಿದ್ದಾರೆ. ಕ್ರೀಡೆಗೆ ಒತ್ತು ಕೊಡುವ ನಿಟ್ಟಿನಲ್ಲಿ ನಾನು ಸಂಪೂರ್ಣವಾಗಿ ಸಹಕರಿಸುತ್ತೇನೆ. ಮಾನವ ಮತ್ತು ಹುಲಿ ನಡುವಿನ ಸಂಘರ್ಷ ಕಡಿಮೆಯಾಗಿದೆ. ಸರ್ಕಾರ ಯಾವಾಗಲೂ ಅರಣ್ಯ ಇಲಾಖೆ ಜೊತೆಗಿರುತ್ತದೆ ಎಂದರು.



ಹುಲಿಮಿತ್ರ ಕ್ರಿಕೆಟ್ ಟೂರ್ನಿಯನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಕ್ರೀಡಾಂಗಣದ ಅಭಿವೃದ್ಧಿಗೆ 5 ಕೋಟಿ ಅನುದಾನ ನೀಡಿದ್ದು, ಕಾಮಗಾರಿ ಪ್ರಾರಂಭವಾಗಿದೆ. ಮುಂದಿನ ದಿನಗಳಲ್ಲಿ ಈಜುಕೊಳ ನಿರ್ಮಿಸಲು 5 ಕೋಟಿ ಅನುದಾನಕ್ಕೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದು, ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. ಮಾನವ ಮತ್ತು ಹುಲಿ ನಡುವಿನ ಸಂಘರ್ಷ ತಡೆಯಲು ಅರಿವು ಮೂಡಿಸುತ್ತಿದ್ದೇವೆ ಎಂದರು.


ಡಿಸಿಎಫ್ ಪರಮೇಶ್ ಮಾತನಾಡಿ, ಹುಲಿ ದಾಳಿ ಪ್ರಕರಣಗಳಿಂದ ಜನರು ಆತಂಕಗೊಂಡಿದ್ದಾರೆ. ಹೀಗಾಗಿ ಸಾರ್ವಜನಿಕರ ಜೊತೆ ಅರಣ್ಯಾಧಿಕಾರಿಗಳು ಬೆರೆತು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಹುಲಿಗಳು ಕಾಡು ಬಿಟ್ಟು ನಾಡಿಗೆ ಯಾಕೆ ಬರುತ್ತಿವೆ ಎಂಬುದರ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದ ಈ ವರ್ಷದಿಂದ ಅನೇಕ ಕಾರ್ಯಕ್ರಮ ಆಯೋಜಿಸಲಾಗಿದೆ. ಅಣಬೆ ಬೇಸಾಯ ತರಬೇತಿ ಕಾರ್ಯಾಗಾರ, ಕ್ಯಾಂಟೀನ್ ತರಬೇತಿ ಜೊತೆಗೆ ಜನಜಾನುವಾರುಗಳ ಆರೋಗ್ಯ ತಪಾಸಣೆ ಹಮ್ಮಿಕೊಳ್ಳುವ ಮೂಲಕ ಜನರಿಗೆ ಮತ್ತಷ್ಟು ಹತ್ತಿರವಾಗಲು ಅನೇಕ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ವಲಯ ಅರಣ್ಯಾಧಿಕಾರಿ ರವಿಕುಮಾರ್, ಡಾ.ಲೋಕೇಶ್, ಪುರಸಭೆ ಮಾಜಿ ಸದಸ್ಯ ಮಧುಕುಮಾರ್, ತೀರ್ಪುಗಾರರಾದ ಭಾಸ್ಕರ್, ಮಂಜುನಾಥ, ರಾಕಿ, ಶಿವಕುಮಾರ್, ಮಂಜುನಾಥ, ಲೋಕೇಶ್, ಸುರೇಂದ್ರ, ವಸಂತ, ಅಭಿಲಾಷ್, ಹಾರ್ಟ್ ಸಂಸ್ಥೆ ಅಧ್ಯಕ್ಷ ಶಿವಕುಮಾರ್, ಸಂಯೋಜಕರ ಶಿವಲಿಂಗ ಸೇರಿದಂತೆ ಕ್ರಿಕೆಟ್ ಆಟಗಾರರು ಉಪಸ್ಥಿತರಿದ್ದರು.

> ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ವಾಸಿಸುವ ಹುಲಿಗಳ ರಕ್ಷಣೆ, ಮೇಲ್ವಿಚಾರಣೆ ಮತ್ತು ಮಾನವ ಹುಲಿ ಸಂಘರ್ಷ ಕಡಿಮೆ ಮಾಡುವುದು ಪರಿಸರ ಸಚಿವಾಲಯದ ಒಂದು ಪ್ರಮುಖ ಯೋಜನೆಯಾಗಿದೆ. ಈ ಯೋಜನೆ ಮೊದಲ ಉದ್ದೇಶ ಮಾನವ ಹುಲಿ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಯುವುದು. 2ನೇ ಉದ್ದೇಶ ತರಬೇತಿ ನೀಡುವ ಮೂಲಕ ಅರಣ್ಯ ಇಲಾಖೆ ಸಿಬ್ಬಂದಿ ಬಲ ಹೆಚ್ಚಿಸುವುದು. ಆಧುನಿಕ ತಂತ್ರಜ್ಞಾನ ಮೂಲಕ ಹುಲಿಗಳ ಚಲನವಲನ ಪತ್ತೆ ಹಚ್ಚಿ ಆದಷ್ಟು ಬೇಗ ಸ್ಥಳದಲ್ಲೇ ಸಮಸ್ಯೆ ಬಗೆಹರಿಸುವುದು. 3ನೇ ಉದ್ದೇಶ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಮತ್ತು ಕಾಡಂಚಿನ ಭಾಗದ ಜನರ ನಡುವೆ ಸಮನ್ವಯತೆ ಮೂಡಿಸುವುದು. ಈ ಮೂಲಕ ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸುವುದು.
>
> **– ಸುಮಿತ್ರ ಎಸ್, ಎಸಿಎಫ್.**

ರಿಂಗ್ ರಸ್ತೆಯಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಪರ-ವಿರೋಧ ಅಭಿಪ್ರಾಯ

ಪರಿಸರವಾದಿಗಳ ವಿರೋಧ, ಗ್ರಾಮಸ್ಥರ ಒಲವು



ಬ್ಲಾಕ್ ಸ್ಪಾಟ್ ಎಂದು ಗುರುತಿಸಿರುವ ರಿಂಗ್ ರಸ್ತೆಯ ಜಂಕ್ಷನ್



ಉದ್ದೇಶಿತ ಫ್ಲೈಓವರ್ ನಿರ್ಮಿಸಲು ಗುರುತಿಸಿರುವ ಜಂಕ್ಷನ್

ಮೈಸೂರು, ಮಾ.22(ಎಂಟಿವೈ)- ಮೈಸೂರಿನ ರಿಂಗ್ ರಸ್ತೆಯ ಬ್ಲಾಕ್ ಸ್ಪಾಟ್ ಎಂದು ಗುರುತಿಸಿರುವ ಹೊಸಹುಂಡಿಯಿಂದ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿದ್ದು, ಪರಿಸರವಾದಿಗಳು ವಿರೋಧ ವ್ಯಕ್ತಪಡಿಸುತ್ತಿದ್ದರೆ, ಕೆಲವು ಗ್ರಾಮಸ್ಥರು ಫ್ಲೈಓವರ್ ನಿರ್ಮಿಸಬೇಕೆಂದು ಆಗ್ರಹಿಸುತ್ತಿದ್ದಾರೆ.

ಮೈಸೂರಿಂದ ದೇವಲಾಪುರಕ್ಕೆ ತೆರಳುವ ರಸ್ತೆ ರಿಂಗ್‌ರೋಡ್ ಜಂಕ್ಷನ್‌ಗಳಲ್ಲಿ ಕಳೆದ ಹಲವು ವರ್ಷಗಳಿಂದ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ದೇವಲಾಪುರ ಸುತ್ತಮುತ್ತಲಿನ ಗ್ರಾಮಗಳ ಹಲವು ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ರಿಂಗ್ ರಸ್ತೆಯಲ್ಲಿ ವೇಗವಾಗಿ ಸಂಚರಿಸುವ ವಾಹನಗಳು ರಸ್ತೆ ದಾಟಲು ಅಡ್ಡಲಾಗಿ ಬಂದ ವಾಹನಗಳಿಗೆ ಅಪ್ಪಳಿಸುತ್ತಿದ್ದು, ಇದರಿಂದ ಈ ಸ್ಥಳವನ್ನು ಬ್ಲಾಕ್ ಸ್ಪಾಟ್ ಎಂದು ಗುರುತಿಸಲಾಗಿದೆ.

ಮೈಸೂರು-ದೇವಲಾಪುರ ರಸ್ತೆಯಲ್ಲಿ ಪ್ರತಿದಿನ ನೂರಾರು ವಾಹನಗಳು ಸಂಚರಿಸುತ್ತಿದ್ದು, ಗ್ರಾಮಸ್ಥರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು ಈ ರಸ್ತೆಯಲ್ಲಿಯೇ ಪ್ರತಿದಿನ ಮೈಸೂರಿಗೆ ಬಂದು, ವಾಪಸ್ಸಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಾಹನ ಸವಾರರ ಸುರಕ್ಷತೆಗಾಗಿ, ಸಂಭವಿಸುತ್ತಿರುವ ಅಪಘಾತಗಳಿಗೆ ಕಡಿವಾಣ ಹಾಕಲು ಹೊಸಹುಂಡಿ ಜಂಕ್ಷನ್‌ನಿಂದ ರಿಂಗ್ ರಸ್ತೆಗೆ ಅಡ್ಡಲಾಗಿ 20 ಕೋಟಿ ರೂ. ವೆಚ್ಚದಲ್ಲಿ ಫ್ಲೈವರ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

46 ಮರಗಳ ತೆರವಿಗೆ ಮನವಿ: ರಿಂಗ್ ರಸ್ತೆಯಲ್ಲಿ ದೇವಲಾಪುರ ರಸ್ತೆಗೆ ಫ್ಲೈಓವರ್ ನಿರ್ಮಾಣಕ್ಕಾಗಿ ಈಗಾಗಲೆ 46 ಮರಗಳ ತೆರವಿಗೆ ಗುರುತಿಸಲಾಗಿದೆ. ರಿಂಗ್ ರಸ್ತೆ ಕಾಮಗಾರಿ ಪೂರ್ಣಗೊಂಡ ಬಳಿಕ ರಸ್ತೆಯ ಪಕ್ಕ ನೆಟ್ಟಿದ್ದ ಬೇವಿನ ಮರಗಳು ಸೇರಿವೆ. ಡಾ.ಕರಿಕಾಳನ್ ಅವರು ಡಿಸಿಎಫ್ ಆಗಿದ್ದ ಅವಧಿಯಲ್ಲಿ ನೆಟ್ಟಿದ್ದ ಗಿಡಗಳು ಇಂದು 10 ರಿಂದ 11 ವರ್ಷದ ಮರವಾಗಿ ಬೆಳೆದಿವೆ. ಈ ಹಿನ್ನೆಲೆಯಲ್ಲಿ ಆ ಮರಗಳ ತೆರವಿಗೆ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಲೋಕೋಪಯೋಗಿ ಇಲಾಖೆ ಕೋರಿಕೊಂಡಿತ್ತು. ಮನವಿ ಮೇರೆಗೆ ಅರಣ್ಯ ಇಲಾಖೆ ಸ್ಥಳ ಪರಿಶೀಲನೆ ಮಾಡಿದಾಗ ಫ್ಲೈಓವರ್ ನಿರ್ಮಾಣಕ್ಕೆ ಗುರುತಿಸಿದ ಸ್ಥಳದಲ್ಲಿ 46 ಮರಗಳನ್ನು ತೆರವು ಮಾಡಬೇಕಾದ ಪರಿಸ್ಥಿತಿ ಕಂಡು ಬಂದಿದೆ.

ಪರ್ಯಾಯ ಮಾರ್ಗ: ರಿಂಗ್ ರಸ್ತೆಯ ಹೊಸಹುಂಡಿ-ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಅಪಘಾತಕ್ಕೆ ಕಡಿವಾಣ ಹಾಕಲು ತುರ್ತಾಗಿ ರಿಂಗ್ ರಸ್ತೆಯಲ್ಲಿ ಸಂಚರಿಸುವ ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ಜಿಗ್‌ಜಾಗ್ ಮಾದರಿಯಲ್ಲಿ ಬ್ಯಾರಿಕೇಡ್ ಅಳವಡಿಸಬೇಕಾಗಿದೆ. ಅಲ್ಲದೆ, ಹೊಸ ಹುಂಡಿ-ದೇವಲಾಪುರ ರಸ್ತೆಯ ರಿಂಗ್ ರಸ್ತೆಯ ಜಂಕ್ಷನ್ ಬಳಿ ರಸ್ತೆಬಳಿ ಇರುವ ಬಾರ್, ಫಾಸ್ಟ್‌ಫುಡ್, ಬೇಕರಿಗಳ ಮುಂದೆ ಗ್ರಾಹಕರು ಅಡ್ಡಾದಿಡ್ಡಿಯಾಗಿ ವಾಹನ ನಿಲುಗಡೆ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರಿಂದ ತಾತ್ಕಾಲಿಕವಾಗಿ ಅಪಘಾತ ನಿಯಂತ್ರಣ ಮಾಡಬಹುದಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ಭವಿಷ್ಯದಲ್ಲಾದರೂ ನಿರ್ಮಾಣ ಅಗತ್ಯ: ಹೊಸಹುಂಡಿ ಕಡೆಯಿಂದ ರಿಂಗ್ ರೋಡ್ ದಾಟಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ರಸ್ತೆಯಲ್ಲಿ ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಹದಿನಾರು, ಮೂಡಳ್ಳಿ, ಸುತ್ತೂರು, ಬಿಳುಗಲಿ ಸೇರಿದಂತೆ ವಿವಿಧ ಗ್ರಾಮಗಳ ಜನ ಸಂಚರಿಸುತ್ತಾರೆ. ಅಲ್ಲದೆ, ಹಡಜನ, ಮೊಸಂಬಯ್ಯನಹುಂಡಿ, ಕಿರಾಳು, ಜಂತಗಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಜನರು ಈ ರಸ್ತೆಯನ್ನೇ ಅವಲಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭವಿಷ್ಯದಲ್ಲಾದರೂ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣ ಮಾಡಲೇಬೇಕಾಗುತ್ತದೆ. ಅದನ್ನು ಮನಗಂಡು ಈಗಲೇ ಫ್ಲೈಓವರ್ ನಿರ್ಮಿಸಿ, ಖಾಲಿ ಜಾಗದಲ್ಲಿ ಗಿಡ ನೆಟ್ಟು ಪೋಷಿಸಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅಗತ್ಯಬಿದ್ದರೆ ಮರ ಸ್ಥಳಾಂತರಿಸಿ: ಫ್ಲೈಓವರ್ ನಿರ್ಮಾಣ ಅನಿವಾರ್ಯವೇ ಆದರೆ, ಗುರುತಿಸಿರುವ ಮರಗಳನ್ನು ಬುಡಸಹಿತ ಕಿತ್ತು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಈ ರಸ್ತೆಯಲ್ಲಿ ಫ್ಲೈಓವರ್ ನಿರ್ಮಿಸಿದರೆ, ರಸ್ತೆ ಬದಿಯಲ್ಲಿರುವ ಹೋಟೆಲ್, ಬಾರ್, ಬೇಕರಿ, ಫಾಸ್ಟ್‌ಫುಡ್ ಸೇರಿದಂತೆ ಅಂಗಡಿಗಳಿಗೆ ವ್ಯಾಪಾರ ಕುಸಿತವಾಗಲಿದೆ. ಈ ಹಿನ್ನೆಲೆಯಲ್ಲಿ ವ್ಯಾಪಾರಿಗಳು ಫ್ಲೈಓವರ್‌ಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಅಪಘಾತಕ್ಕೆ ಕಾರಣ: ದೇವಲಾಪುರದ ಕಡೆಯಿಂದ ಬರುವವರು ರಿಂಗ್ ರಸ್ತೆಯ ಜಂಕ್ಷನ್ ಬಳಿ ರಸ್ತೆ ಏರು(ತಿಟ್ಟು) ಪ್ರದೇಶವಾಗಿದ್ದು, ಆ ಕಾರಣದಿಂದ ವಾಹನಗಳ ವೇಗ ಹೆಚ್ಚಾಗಿರುತ್ತದೆ. ಹೀಗೆ ವೇಗವಾಗಿ ಬಂದ ವಾಹನಗಳು ಏಕಾಏಕಿ ರಿಂಗ್ ರಸ್ತೆಗೆ ಪ್ರವೇಶಿಸಿದಾಗ ಅದೇ ವೇಳೆ ತಿ.ನರಸೀಪುರ ರಸ್ತೆ ಕಡೆಯಿಂದ ರಿಂಗ್ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳ ನಡುವೆ ಅಪಘಾತವಾಗುತ್ತಿದೆ. ಅಲ್ಲದೆ, ಮೈಸೂರಿಂದ ಹೊಸಹೊಂಡಿ ಮಾರ್ಗವಾಗಿ ದೇವಲಾಪುರದ ಕಡೆ ಹೋಗುವವರು ಇಳಿಜಾರಿನಲ್ಲಿ ವೇಗವಾಗಿ ರಿಂಗ್ ರಸ್ತೆಗೆ ಬಂದರೆ ನಂಜನಗೂಡು ರಸ್ತೆ ಕಡೆಯಿಂದ ರಿಂಗ್ ರಸ್ತೆಯಲ್ಲಿ ಬರುವ ವಾಹನಗಳ ನಡುವೆ ಅಪಘಾತವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಪಘಾತ ತಡೆಗೆ ವೈಜ್ಞಾನಿಕ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಸಿಗ್ನಲ್ ಅಳವಡಿಸಬೇಕು ಎಂದು ಸ್ಥಳೀಯರು ಕೋರಿದ್ದಾರೆ.

ಮಾ.25ರಂದು ಜನಾಭಿಪ್ರಾಯ ಸಂಗ್ರಹ ಸಭೆ

ದೇವಲಾಪುರ ರಸ್ತೆಗೆ ಫ್ಲೈಓವರ್ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಮರ ತೆರವಿಗಾಗಿ ಮಾ.25 ರಂದು ಜನಾಭಿಪ್ರಾಯ ಸಂಗ್ರಹ ಸಭೆ ಕರೆಯಲಾಗಿದೆ. ಹೊಸಹುಂಡಿ ಬಳಿ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ನಡೆಯುವ ಸಭೆಯಲ್ಲಿ ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕಂದಾಯ ಇಲಾಖೆ, ಪರಿಸರವಾದಿಗಳು, ಸ್ಥಳೀಯರು, ಆ ರಸ್ತೆಯಲ್ಲಿ ಸಂಚರಿಸುವ ವಿವಿಧ ಗ್ರಾಮಗಳ ಗ್ರಾಮಸ್ಥರು ಪಾಲ್ಗೊಳ್ಳಲಿದ್ದಾರೆ. ಈ ಸಭೆಯಲ್ಲಿ ಫ್ಲೈಓವರ್ ನಿರ್ಮಾಣದ ಅಗತ್ಯ ಮತ್ತು ಅನಿವಾರ್ಯ. ಮರಗಳ ತೆರವಿನ ಅಗತ್ಯ ಸೇರಿದಂತೆ ಇನ್ನಿತರ ಮಾಹಿತಿಯನ್ನು ಅಧಿಕಾರಿಗಳು ಸಭೆಗೆ ತಿಳಿಸಲಿದ್ದಾರೆ. ಇದಕ್ಕೆ ಪರ ಮತ್ತು ವಿರೋಧದ ಅಭಿಪ್ರಾಯ ಸಂಗ್ರಹವಾದ ಬಳಿಕ ಅರಣ್ಯ ಇಲಾಖೆ ಅಂತಿಮ ನಿರ್ಧಾರ ತಳೆಯಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಲವ್ ಮಾಕ್ಟೇಲ್-3 (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಆಕಾಶ್ (ಕ)	4 ಪ್ರದರ್ಶನಗಳು

ಬುದ್ಧನ ಚಿಂತನೆಗಳು ಪ್ರಸ್ತುತ ಕಾಲಘಟ್ಟಕ್ಕೆ ಅನಿವಾರ್ಯ



ಕಾರ್ಯಕ್ರಮದಲ್ಲಿ ಬುದ್ಧ ಮತ್ತು ಬಾಬಾ ಸಾಹೇಬರ ಕುರಿತ ಹಾಡುಗಳ ಪ್ರಸ್ತುತಪಡಿಸಲಾಯಿತು.

ಮೈಸೂರು, ಮಾ.22- ಬುದ್ಧನ ಚಿಂತನೆಗಳು ಪ್ರಸ್ತುತ ಕಾಲಘಟ್ಟಕ್ಕೆ ಅನಿವಾರ್ಯವಾಗಿವೆ ಎಂದು ಸಾಹಿತಿ ಡಾ. ಕೆ.ಪಿ.ಮಹಾದೇವಯ್ಯ ಅಭಿಪ್ರಾಯಿಸಿದರು.

ಮೈಸೂರಿನ ತನುಮನ ಸಂಸ್ಥೆ ವತಿಯಿಂದ ಕಲಾ ಮಂದಿರದ ಚಿಂತಕರ ಚಾವಡಿಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ ಆಯೋಜಿಸಿದ್ದ 'ಧಮ್ಮ ಸಂಗೀತಯಾನ' ಬುದ್ಧ ಮತ್ತು ಬಾಬಾ ಸಾಹೇಬರ ಕುರಿತ ಹಾಡುಗಳ ಉಚಿತ ಕಲಿಕಾ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತು ಯುದ್ಧ ಯುದ್ಧ ಎಂದು ಆ ದಿಕ್ಕಿನಲ್ಲಿ ಸಾಗುತ್ತಿರುವುದು ಅಪಾಯ ಹಾಗಾಗಿ ಬುದ್ಧರ ಕರುಣೆ, ಮೈತ್ರಿ, ಮಮತೆ ಸಹ ಜೀವನ ಈಗ ತೀರಾ ಅನಿವಾರ್ಯವಾಗಿದೆ ಎಂದರು.

ನೃತ್ಯ ಕಲಾವಿದ ಸಂತೋಷ್ ಮಾತನಾಡಿ ಹಲವು ಕಲೆಗಳಿಗೆ ಬುದ್ಧ ಧಮ್ಮ ಅಡಿಪಾಯವಾಗಿದೆ. ಧಮ್ಮ ಸಂದೇಶ ಸಾರಲು ಲಕ್ಷ್ಮಿ ರಾಮ್ ಈ ಕಾರ್ಯಗಾರ ತುಂಬಾ ಸೊಗಸಾಗಿದೆ ಎಂದರು.

ಗಾಯಕ ಲಕ್ಷ್ಮಿ ರಾಮ್ ಮತ್ತು ಆರ್.ರೂಪ ಶಿಬಿರಾರ್ಥಿಗಳಿಗೆ ಅಂಬೇಡ್ಕರ್ ಗೀತೆಗಳನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಹಿನಕಲ್ ಸೋಮಣ್ಣ ಸುಕನ್ಯಾ ಶಿವರಾಮ ಚಂದ್ರ, ಶಿವು ಇತರರು ಉಪಸ್ಥಿತರಿದ್ದರು.

50 ಕೆಜಿ ಚಿನ್ನ ಸಾಗಣೆಗೆ ಉಗಾಂಡ ವ್ಯಕ್ತಿ ಜೊತೆ ರನ್ಯಾ ರಾವ್ ಡೀಲಿಂಗ್

ಬೆಂಗಳೂರು: ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣ ಸಂಬಂಧ ಹೊಸ ವಿಚಾರ ಬೆಳಕಿಗೆ ಬಂದಿದ್ದು, 50 ಕೆಜಿ ಚಿನ್ನ ಸಾಗಣೆಗೆ ಉಗಾಂಡ ಮೂಲದ ಏಜೆಂಟ್ ಜೊತೆ ರನ್ಯಾ ರಾವ್ ಸಂಪರ್ಕದಲ್ಲಿದ್ದರು ಎನ್ನಲಾಗಿದೆ.



ಸುಮಾರು 102.55 ಕೋಟಿ ರೂ. ಮೌಲ್ಯದ ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ಸಾಗಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ) ನ್ಯಾಯಾಲಯಕ್ಕೆ ಸುದೀರ್ಘ ಚಾರ್ಜ್‌ಶೀಟ್ ಸಲ್ಲಿಸಿದ್ದು, ಇದರಲ್ಲಿ ಉಗಾಂಡಾ ಮೂಲದ ಏಜೆಂಟರೊಂದಿಗೆ ನಟಿ ನಡೆಸಿದ್ದ ಡೀಲಿಂಗ್ ಬಗ್ಗೆ ಆಘಾತಕಾರಿ ಮಾಹಿತಿ ಲಭ್ಯವಾಗಿದೆ.

ತನಿಖಾ ವರದಿಗಳ ಪ್ರಕಾರ, ರನ್ಯಾ ರಾವ್ ಕೇವಲ ದುಬೈನಿಂದ ಮಾತ್ರವಲ್ಲದೆ, ಆಫ್ರಿಕನ್ ರಾಷ್ಟ್ರಗಳಿಂದಲೂ ಚಿನ್ನ ಪಡೆಯಲು ಸಂಚು ರೂಪಿಸಿದ್ದರು. ಇದಕ್ಕಾಗಿ ಅವರು ಉಗಾಂಡಾ ಮೂಲದ ಏಜೆಂಟ್ ಜೊತೆ ನಿರಂತರ ಸಂಪರ್ಕದಲ್ಲಿದ್ದರು ಎನ್ನಲಾಗಿದೆ. ಆರಂಭದಲ್ಲಿ 5 ಕೆಜಿ ಚಿನ್ನವನ್ನು ಪ್ರಾಯೋಗಿಕವಾಗಿ ಸಾಗಿಸಲು ಯತ್ನಿಸಿದ್ದ ಈ ತಂಡ, ನಂತರ ಬರೋಬ್ಬರಿ 50 ಕೆಜಿ ಚಿನ್ನದ ಸಾಗಣೆಗೆ ಉಗಾಂಡಾ ಏಜೆಂಟ್ ಜೊತೆ ಡೀಲಿಂಗ್ ಕುದುರಿಸಿತ್ತು. ಇದಕ್ಕಾಗಿ ದುಬೈನಲ್ಲಿ 'ವೀರಾ ಡೈಮಂಡ್ಸ್ ಟ್ರೇಡಿಂಗ್' ಎಂಬ ಹೆಸರಿನ ಕಂಪನಿಯನ್ನು ಕೂಡ ತೆರೆಯಲಾಗಿತ್ತು.

ಚಿನ್ನ ಖರೀದಿಗಾಗಿ ಮುಂಗಡವಾಗಿ 33 ಲಕ್ಷ ರೂ. ಪಾವತಿಸಲಾಗಿತ್ತು. ಜನವರಿ 2024ರಲ್ಲಿ ರಾಜು ಎಂಬಾತ ಚಿನ್ನ ತರಲು ಉಗಾಂಡಾದ ಕಂಪಾಲಕ್ಕೆ ತೆರಳಿದ್ದಾಗ, ಏಜೆಂಟ್ ಹೆಚ್ಚುವರಿಯಾಗಿ 17 ಕೋಟಿ ರೂ. ಬೇಡಿಕೆಯಿಟ್ಟಿದ್ದ ಎನ್ನಲಾಗಿದೆ. ರನ್ಯಾ ರಾವ್ ದುಬೈ ಮೂಲದ ವ್ಯಕ್ತಿಯ ಮೂಲಕ ಈ ಹಣ ನೀಡುವುದಾಗಿ ಒಪ್ಪಿಕೊಂಡಿದ್ದರೂ, ಕೊನೆಗೆ ತಾವು ವಂಚನೆಗೆ ಒಳಗಾಗಿದ್ದೇವೆ ಎಂದು ತಿಳಿದು ಅಲ್ಲಿನ ಪೊಲೀಸರಿಗೆ ದೂರು ನೀಡಲು ಮುಂದಾಗಿದ್ದರು ಎಂಬ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಯುಗಾದಿ ದಾಸ ಸಂಭ್ರಮ- 2026ರಲ್ಲಿ ಯುವ ವಿದ್ವಾಂಸ ವ್ಯಾಸೇಂದು ಆಚಾರ್ಯ ನಾಗರಹಳ್ಳಿಗೆ ಸನ್ಮಾನ



ಮೈಸೂರಿನ ಯುವ ಸಾಧಕ ವಿದ್ವಾಂಸರನ್ನು ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಮಾ.22(ವಿವಿಹೆಚ್)- ಶ್ರೀಮದುತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳ ಅವರಲ್ಲಿ ಸುಧಾಮಂಗಳ ಮಾಡಿರುವ ಯುವ ಸಾಧಕ ವಿದ್ವಾಂಸರಾದ ಸುವೇದಾಚಾರ್ಯ ಆದ್ಯ, ದಯಾನಿಧಿ ಆಚಾರ್ಯ ಪುರೋಹಿತ, ವ್ಯಾಸೇಂದು ಆಚಾರ್ಯ ನಾಗರಹಳ್ಳಿ ಅವರನ್ನು ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ಮೈಸೂರು ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದ ವಿಲಾಸ ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ಟ್ರಸ್ಟ್ ಮೈಸೂರು ವತಿಯಿಂದ ಭಾನುವಾರ ಆಯೋಜಿಸಿದ್ದ 'ಯುಗಾದಿ ದಾಸ ಸಂಭ್ರಮ 2026' ಕಾರ್ಯಕ್ರಮದಲ್ಲಿ ಯುವ ವಿದ್ವಾಂಸರನ್ನು ಸನ್ಮಾನಿಸಲಾಯಿತು. ಸನ್ಮಾನ ಕಾರ್ಯಕ್ರಮಕ್ಕೂ ಮುನ್ನ ಮೇಧಾ ಅನಿರುದ್ಧಾಚಾರ್ಯ ಅವರ ಮುಂದಾಳತ್ವದಲ್ಲಿ ಬ್ರಾಹ್ಮಣ ಮಹಿಳೆಯರ ಸಹಸ್ರ ಕಂಠದಲ್ಲಿ ಶ್ರೀಮಧ್ವಾದಿರಾಜರ ವಿರಚಿತ ಶ್ರೀಲಕ್ಷ್ಮೀ ಶೋಭಾನೆ ಪಾರಾಯಣ ನಡೆಸಿಕೊಟ್ಟರು. ಜೊತೆಗೆ ವಿವಿಧ ವೇದ ಸ್ಲೋಕಗಳನ್ನು ಪಠಿಸಿ, ಹರಿ ಸ್ಮರಣೆ ಮಾಡಿದರು.

ಅಧಿಕ ಮಾಸದ ಪ್ರಯುಕ್ತ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳ ಅವರ ಮೈಸೂರು ದಿಗ್ವಿಜಯ 2026 ಕಾರ್ಯಕ್ರಮದ ಬಗ್ಗೆ ಬಾದರಾಯಣಾಚಾರ್ಯ, ಅನಿವೃದ್ಧಾಚಾರ್ಯ ಪಾಂಡುರಂಗಿ, ಹೇಮಂತಾಚಾರ್ಯಗುಡಿ ಅವರು ವಿಶೇಷ ಮಾಹಿತಿಯೊಂದಿಗೆ ಪ್ರವಚನ ನೀಡಿದರು.

ಬಳಿಕ ಸಂಜೆ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಗಾಯಕರಾದ ವಿದುಷಿ ಸಂಧ್ಯಾ ಶ್ರೀನಾಥ್, ವಿದುಷಿ ರಚನ ಶರ್ಮ, ವಿದ್ವಾನ್ ಶ್ರೀಹರ್ಷ, ವಿದುಷಿ ಅಂಜನಾ ಪಿ.ರಾವ್, ವಿದುಷಿ ಆರ್. ನಿತ್ಯಶ್ರೀ ಅವರ ಕಂಠದಿಂದ ಭಕ್ತಿಗೀತೆಗಳು, ದಾಸರ ಕೀರ್ತನೆಗಳ ಗಾಯನ ಸುಧೆ ಸಂಗೀತಾಸಕ್ತರ ಮನಸ್ಸನ್ನು ಮಂತ್ರಮುಗ್ಧಗೊಳಿಸಿತು.

ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷ ಎನ್.ಎಂ.ನವೀನ್ ಕುಮಾರ್, ಪುರುಷೋತ್ತಮ ಆಚಾರ್ಯ, ವಾಸುದೇವ ಮೂರ್ತಿ, ರಾಮ್ ಪ್ರಸಾದ್, ಸಮಿತಿ ಸಂಸ್ಥಾಪಕ ಎಸ್.ರವಿಕುಮಾರ್, ಖಜಾಂಚಿ ಜಯಶ್ರೀ ರವಿಕುಮಾರ್, ಆದ್ಯ ಗೋವಿಂದ ಆಚಾರ್ಯ, ರಾಘವೇಂದ್ರ ಆಚಾರ್ಯ ನಾಗರಹಳ್ಳಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಗೆರೆ ಗೋಪಾಲ್, ವಿಪ್ರ ಯುವ ಮುಖಂಡ ಪ್ರವೀಣ್ ಕುಮಾರ್, ದತ್ತ ಸೇನೆ ಅಧ್ಯಕ್ಷ ಆರ್.ಎಸ್.ಸತ್ಯ ನಾರಾಯಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶಿಕ್ಷಕರ ಸಂಘದ ಮನವಿಗೆ ಕಿಮ್ಮತ್ತು ನೀಡದ ಕಂದಾಯ ಇಲಾಖೆ!

50 ವರ್ಷ ಮೇಲ್ಪಟ್ಟ ಶಿಕ್ಷಕರು ಗಣತಿಗೆ ನಿಯೋಜನೆ

ಮೈಸೂರು, ಮಾ.22(ಎಸ್‌ಪಿಎನ್)- ಭಾರತ ಚುನಾವಣಾ ಆಯೋಗದಿಂದ ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕಾರ್ಯ ಮತ್ತು ಜನಗಣತಿ ಕಾರ್ಯಕ್ಕೆ 50 ವರ್ಷ ದಾಟಿದ ಮಹಿಳಾ ಶಿಕ್ಷಕರನ್ನೂ ಒಳಗೊಂಡಂತೆ ಎಲ್ಲಾ ಶಿಕ್ಷಕರನ್ನು ಅಗತ್ಯಕ್ಕನುಗುಣವಾಗಿ ನಿಯೋಜಿಸಿಕೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ನಗರಪಾಲಿಕೆಗಳ ಆಯುಕ್ತರಿಗೆ, ಕಂದಾಯ ಇಲಾಖೆ(ಸೇವೆಗಳು-3 ಮತ್ತು ವಿ.ನಿ) ಅಧೀನ ಕಾರ್ಯದರ್ಶಿ ಜಿ.ಕೆ.ನರಸಿಂಹಮೂರ್ತಿ ಪತ್ರ ಬರೆದು ಸೂಚಿಸಿದ್ದಾರೆ.

50 ವರ್ಷ ದಾಟಿದ ಮಹಿಳಾ ಶಿಕ್ಷಕರು, ವಿಕಲಚೇತನ ನೌಕರರು, ತೀವ್ರ ಅನಾರೋಗ್ಯಕ್ಕೆ ತುತ್ತಾದ ನೌಕರರನ್ನು ಜನಗಣತಿ-2027 ಹಾಗೂ ಮತದಾರರ ಪಟ್ಟಿ ಪರಿಷ್ಕರಣೆಗೆ ನಿಯೋಜಿಸದಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಶಿಕ್ಷಕ ಸಂಘಟನೆಯ ಪದಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದರೂ ಅದಕ್ಕೆ ಕಂದಾಯ ಇಲಾಖೆ ಕಿಮ್ಮತ್ತು ನೀಡಿಲ್ಲ.

ಸಮಾಜ ಶಾಂತಿಗೆ ಭಂಗ ಆರೋಪ: ಚಿಕ್ಕಮಗಳೂರಿಂದ 10 ಮಂದಿ ಗಡಿಪಾರಿಗೆ ನೋಟಿಸ್

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಪ್ರಭಾವಿ ಹಿಂದೂ ಮುಖಂಡರು ಮತ್ತು ಬಿಜೆಪಿ ಪದಾಧಿಕಾರಿಗಳ ವಿರುದ್ಧ ಜಿಲ್ಲಾ ಪೊಲೀಸರು ಗಡಿಪಾರಿನ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದಾರೆ.

ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಹಾಗೂ ಭಜರಂಗದಳದ ಪ್ರಮುಖ ಮುಖಂಡ ಸೇರಿದಂತೆ ಒಟ್ಟು 10 ಜನರನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಪೊಲೀಸ್ ಇಲಾಖೆ ಉಪ ವಿಭಾಗಾಧಿಕಾರಿಗಳಿಗೆ ಶಿಫಾರಸ್ಸು ಪತ್ರ ರವಾನಿಸಿದೆ.

ಪಟ್ಟಿಯಲ್ಲಿ ಪ್ರಮುಖವಾಗಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್ ಹಾಗೂ ಭಜರಂಗದಳದ ಹಾಸನ ವಿಭಾಗದ ಸಂಯೋಜಕ ಶ್ಯಾಮ್ ವಿ.ಗೌಡ ಅವರ ಹೆಸರುಗಳಿವೆ. ಇವರೊಂದಿಗೆ ವಿವಿಧ ಕೋಮು ಸಂಘರ್ಷ ಅಥವಾ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದ ಆರೋಪ ಎದುರಿಸುತ್ತಿರುವ ಮುಸ್ಲಿಂ ಮುಖಂಡರ ಹೆಸರನ್ನೂ ಶಿಫಾರಸ್ಸು ಮಾಡಲಾಗಿದೆ. ಈ ಸಂಬಂಧ ಪೊಲೀಸ್ ಇಲಾಖೆ ಉಪ ವಿಭಾಗಾಧಿಕಾರಿಗಳಿಗೆ ಪತ್ರ ರವಾನಿಸಲಾಗಿದ್ದು, ಸಂಬಂಧಿಸಿದ ಎಲ್ಲರನ್ನು ಮಾರ್ಚ್ 25ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

ಗ್ಯಾರಂಟಿ ಯೋಜನೆಗಳ ಸಮಿತಿಗೆ ನೇಮಕ



ಮೈಸೂರು, ಮಾ.22(ಎಂಕೆ)-ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ಕುಂಬಾರ ಕೊಪ್ಪಲಿನ ಬಿ.ಸುರೇಶ್ ನೇಮಕಗೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆಯರು ಸಾಧನೆಯೊಂದಿಗೆ ಆರೋಗ್ಯ ಕಾಪಾಡಿಕೊಳ್ಳಿ

ವಿಶ್ವ ಮಹಿಳಾ ದಿನಾಚರಣೆಯಲ್ಲಿ ಡಾ. ಶ್ವೇತಾ ಸದಾನಂದ್ ಸಲಹೆ



ಮೈಸೂರಿನ ಜಯನಗರದಲ್ಲಿರುವ ನೇಗಿಲಯೋಗಿ ಸೇವಾ ಭವನದಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮವನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕ ಮಹಿಳೆಯರು ಚಾಲನೆ ನೀಡಿದರು.

ಮೈಸೂರು, ಮಾ.22(ಎಂಟಿವೈ)- ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವುದರೊಂದಿಗೆ ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಮೈಸೂರಿನ ಎಂಎಂಸಿಯ ಅಸೋಸಿಯೇಟ್ ಪ್ರೊಫೆಸರ್ ಡಾ. ಶ್ವೇತಾ ಸದಾನಂದ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಯನಗರದಲ್ಲಿರುವ ನೇಗಿಲಯೋಗಿ ಸೇವಾ ಭವನದಲ್ಲಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ ಹಾಗೂ ಕೆ.ಜಿ. ಕೊಪ್ಪಲು ಮರುಳೇಶ್ವರ ಧರ್ಮದರ್ಶಿ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಸಾಧನೆ ಮಾಡುವುದರೊಂದಿಗೆ ತಮ್ಮ ಆರೋಗ್ಯದ ಕಡೆಯೂ ಗಮನ ಹರಿಸಬೇಕು. ಆರೋಗ್ಯ ಚೆನ್ನಾಗಿದ್ದರೆ ಇನ್ನಷ್ಟು ಸಾಧನೆ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಬೇಕು. ಪ್ರತಿಯೊಬ್ಬ ಮಹಿಳೆಯೂ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಸಂಧ್ಯಾ ಮಂಜುನಾಥ್ ಮಾತನಾಡಿ, ಮಹಿಳೆಯರು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈದು ಮುನ್ನಡೆಯುತ್ತಿರುವುದು ಶ್ಲಾಘನೀಯ. ಸಾಧಕ ಮಹಿಳೆಯರನ್ನು ಪ್ರೇರಣೆಯಾಗಿಸಿಕೊಂಡು ಇನ್ನಷ್ಟು ಸಾಧನೆ ಮಾಡಲು ಮುಂದಾಗಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ ಅಧ್ಯಕ್ಷೆ ಶೋಭಾ ರಮೇಶ್ ಮಾತನಾಡಿ, ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ ವಿವಿಧ ಸಾಮಾಜಿಕ ಚಟುವಟಿಕೆಗಳು ಹಾಗೂ ಮಹಿಳಾ ಸಬಲೀಕರಣಕ್ಕಾಗಿ ಹಲವು ಕಾರ್ಯಕ್ರಮ ರೂಪಿಸುತ್ತಾ ಬಂದಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಡಾ.ಹೆಚ್.ಎಸ್. ಕಾವ್ಯಶ್ರೀ (ಎಂಎಂಸಿಆರ್‌ಐ), ಜಿ.ಕುಸುಮ (ಕೆಪಿಸಿಎಲ್), ಸಹನಾ ಗೌಡ, ಸವಿತ (ಪ್ರಗತಿಪರ ರೈತ), ರಂಜಿತಾ ಸಿದ್ದೇಶ್ ಕುಮಾರ್ (ಉದ್ಯಮಿ) ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಿಳೆಯರಿಂದ ನೃತ್ಯ, ಭಾವಗೀತೆ, ಭರತನಾಟ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಜರುಗಿದವು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಗತ್ಯವುಳ್ಳವರಿಗೆ ಉಚಿತ ವೀಲ್‌ಚೇರ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಗೌರವಾಧ್ಯಕ್ಷೆ ಸುನಂದ, ಕಾರ್ಯದರ್ಶಿ ರಾಣಿ ಮಹೇಶ್, ಖಜಾಂಚಿ ಶ್ರುತಿ ರಾಣಿ ತೇಜಸ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಮರುಳೇಶ್ವರ ಟ್ರಸ್ಟ್ ಅಧ್ಯಕ್ಷ ಡಾ.ಎಂ. ಮಹಾದೇವಯ್ಯ ಸೇರಿದಂತೆ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ನಿರ್ದೇಶಕರು, ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಮೈಸೂರಲ್ಲಿ ಟ್ರಾಫಿಕ್ ಸಿಗ್ನಲ್ ಲೈಟುಗಳ ಬದಲಾಗಿ

ರಾಜಸ್ಥಾನದ ಕೋಟ ನಗರ ಮಾದರಿ ಅಂಡರ್‌ಪಾಸ್, ಫ್ಲೈಓವರ್, ಬೃಹತ್ ರೋಟರಿ ನಿರ್ಮಿಸಲು ಅಧ್ಯಯನಕ್ಕೆ ಕ್ರಮ ವಹಿಸಿ

ಪೊಲೀಸ್ ಆಯುಕ್ತರಿಗೆ ನಿವೃತ್ತ ಎಸ್‌ಪಿ ಶಂಕರೇಗೌಡ ಸಲಹೆ

ಮೈಸೂರು,ಮಾ.22(ಪಿಎಂ)- ಮೈಸೂರು ನಗರದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳ ಅಳವಡಿಕೆಗೆ ಬದಲಾಗಿ ಪರ್ಯಾಯ ಮಾರ್ಗೋಪಾಯ ಅಳವಡಿಸಿಕೊಳ್ಳುವ ಕುರಿತು ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ನಿವೃತ್ತ ಎಸ್‌ಪಿ ಶಂಕರೇಗೌಡ ಇತ್ತೀಚೆಗೆ ಇ-ಮೇಲ್ ಮೂಲಕ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಮೈಸೂರಿನಲ್ಲಿ ವಾಹನಗಳ ಸಂಖ್ಯೆ ಪ್ರತಿ ವರ್ಷ ಏರುಗತಿಯಲ್ಲಿದ್ದು, ಬೆಂಗಳೂರಿಗರಂತೆ ಮೈಸೂರು ನಿವಾಸಿಗಳು ಸಂಚಾರ ದಟ್ಟಣೆಯಿಂದ ಹೈರಾಣಾಗುತ್ತಿದ್ದಾರೆ. ಇದರಿಂದ ಸುಗಮ ಸಂಚಾರಕ್ಕೆ ಧಕ್ಕೆಯಾಗುತ್ತಿದ್ದು, ವಾಹನ ಚಾಲಕರು ತಾವು ತಲುಪಬೇಕಾದ ಸ್ಥಳವನ್ನು ನಿಗದಿತ ಸಮಯಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ. ಸಂಚಾರ ದಟ್ಟಣೆ ನಿವಾರಿಸಲು ಸ್ವಯಂಚಾಲಿಕ ಟ್ರಾಫಿಕ್ ಸಿಗ್ನಲ್ ಲೈಟುಗಳ ಅಳವಡಿಕೆ ಹಳೆಯ ಪದ್ಧತಿ. ಇದರಿಂದಲೇ ಸಂಚಾರ ನಿರ್ವಹಣೆ ಕಷ್ಟದ ಕೆಲಸ. ಮೈಸೂರಿನಲ್ಲಿ 45ಕ್ಕೂ ಹೆಚ್ಚು ಟ್ರಾಫಿಕ್ ಲೈಟ್‌ಗಳ ಅಳವಡಿಕೆ ಪರಿಸರಕ್ಕೆ ಹಾನಿಕಾರಕ.



ತಾಂತ್ರಿಕತೆ ಮುಂದುವರಿದಿದ್ದು, ಟ್ರಾಫಿಕ್ ಸಿಗ್ನಲ್ ಲೈಟ್‌ನಂತಹ ಹಳೆಯ ಪದ್ಧತಿಗೆ ಜೋತುಬೀಳುವ ಬದಲು, ಜಂಕ್ಷನ್ ಮತ್ತು ವೃತ್ತಗಳಲ್ಲಿ ಪರ್ಯಾಯವಾಗಿ ಅಂಡರ್ ಪಾಸ್, ಫ್ಲೈಓವರ್ ಮತ್ತು ಬೃಹತ್ ಆಕಾರದ ರೋಟರಿಗಳ ನಿರ್ಮಾಣವು ಸಂಚಾರ ದಟ್ಟಣೆ ನಿವಾರಣೆಗೆ ಪರ್ಯಾಯ ಮಾರ್ಗೋಪಾಯವೆಂಬುದು ಮೈಸೂರಿಗರ ಅಭಿಪ್ರಾಯವಾಗಿದೆ ವಿದೇಶಗಳ ಹಲವು ನಗರಗಳಲ್ಲಿ ಸಹ ಟ್ರಾಫಿಕ್ ನಿರ್ವಹಣೆಯಲ್ಲಿ ಈ ವ್ಯವಸ್ಥೆ ಆಯ್ಕೆ ಮಾಡಲಾಗಿದೆ.

ರಾಜಸ್ಥಾನದ ಕೋಟ ನಗರದ ಸ್ಥಳೀಯ ಸಂಸ್ಥೆ ಸ್ವಯಂಚಾಲಿಕ ಟ್ರಾಫಿಕ್ ಸಿಗ್ನಲ್ ಲೈಟುಗಳ ಅಳವಡಿಕೆಗೆ ವಿದಾಯ ಹೇಳಿದೆ. ಪರ್ಯಾಯವಾಗಿ ಜಂಕ್ಷನ್ ಮತ್ತು ವೃತ್ತಗಳಲ್ಲಿ ಅಂಡರ್‌ಪಾಸ್, ಫ್ಲೈಓವರ್ ಮತ್ತು ಬೃಹತ್ ಆಕಾರದ ರೋಟರಿಗಳ ನಿರ್ಮಿಸಿ ದೇಶದ ಮೊದಲ ಸಿಗ್ನಲ್ ಫ್ರೀ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಒಂದು ವಿನೂತನ ಸಿಗ್ನಲ್ ಫ್ರೀ ವೃತ್ತದ ನಿರ್ಮಾಣವು 2000 ಇಸವಿಯಲ್ಲಿ ಮೈಸೂರು ನಗರದ ಎಲ್‌ಐಸಿ ಜಂಕ್ಷನ್‌ನಲ್ಲಿ ಆಗಿದ್ದು, ಇದು ಸುಗಮ ಸಂಚಾರಕ್ಕೆ ಸಾಕ್ಷಿಯಾಗಿದೆ. ಟ್ರಾಫಿಕ್ ಸಿಗ್ನಲ್ ಮತ್ತು ಪೊಲೀಸ್‌ಮನ್ ಇಲ್ಲದೆ ಅದು ಸುಗಮ ಸಂಚಾರಕ್ಕೆ ನಿದರ್ಶನವಾಗಿದೆ.

ಮೈಸೂರು ನಗರ ಪ್ರಗತಿ ಪಥದಲ್ಲಿದ್ದು, ಸುಧಾರಿತ ಸಂಚಾರ ನಿರ್ವಹಣೆಗೆ ವಿಫುಲ ಅವಕಾಶಗಳಿವೆ. ಈ ನಿಟ್ಟಿನಲ್ಲಿ ಯೋಜಿಸಲು ಮೈಸೂರು ನಗರದ ಸಂಚಾರ ವಿಭಾಗ ಮತ್ತು ಸ್ಥಳೀಯ ಸಂಸ್ಥೆಯ ನುರಿತ ಹಿರಿಯ ಇಂಜಿನಿಯರ್‌ಗಳ ತಂಡವನ್ನು ಕೋಟ ನಗರಕ್ಕೆ ಅಧ್ಯಯನಕ್ಕಾಗಿ ಕಳುಹಿಸಿ, ಅಧ್ಯಯನ ಉಪಯುಕ್ತವೆಂದರೆ ಇಲ್ಲಿಯೂ ಅದನ್ನು ಅಳವಡಿಸಿಕೊಳ್ಳಲು ಸೂಚಿಸಲು ಕೋರಲಾಗಿದೆ. ಕ್ರಮದ ಬಗ್ಗೆ ಹಿಂಬರಹಕ್ಕೆ ಮನವಿ ಮಾಡಲಾಗಿದೆ ಎಂದು ಶಂಕರೇಗೌಡ ಅವರು ತಮ್ಮ ಇ-ಮೇಲ್‌ನಲ್ಲಿ ತಿಳಿಸಿದ್ದಾರೆ.

ಇಂದಿನಿಂದ ರಾಜ್ಯಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್ ಹಂಚಿಕೆಯಲ್ಲಿ ಶೇ.20ರಷ್ಟು ಹೆಚ್ಚಳ

ಮೈಸೂರು, ಮಾ.22(ಪಿಎಂ)– ಮುಂದಿನ ಅಧಿಸೂಚನೆವರೆಗೆ ಮಾ.23ರಿಂದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆಯನ್ನು ಕೆಲ ಷರತ್ತುಗಳೊಂದಿಗೆ ಶೇ.20ರಷ್ಟು ಹೆಚ್ಚಿಸಿ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ಇದರಿಂದ ರಾಜ್ಯಗಳಿಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಹಂಚಿಕೆಯು ಶೇ.50ಕ್ಕೆ ಏರಿಕೆಯಾಗಿದೆ.

ರೆಸ್ಟೋರೆಂಟ್‌ಗಳು, ಡಾಭಾಗಳು, ಹೋಟೆಲ್‌ಗಳು, ಕೈಗಾರಿಕಾ ಕ್ಯಾಂಟೀನ್, ಆಹಾರ ಸಂಸ್ಕರಣೆ, ಡೈರಿ, ರಾಜ್ಯ ಸರ್ಕಾರಗಳು ಅಥವಾ ಸ್ಥಳೀಯ ಸಂಸ್ಥೆಗಳು ನಡೆಸುವ ಸಬ್ಸಿಡಿ ಕ್ಯಾಂಟೀನ್‌ಗಳು, ಆಹಾರ ಮಳಿಗೆಗಳು, ಸಮುದಾಯ ಅಡುಗೆ ಮನೆಗಳ ವಲಯಕ್ಕೆ ಈ ಶೇ.20ರಷ್ಟು ಹೆಚ್ಚುವರಿ ಸಿಲಿಂಡರ್‌ಗಳ ಪೂರೈಕೆಯನ್ನು ಘೋಷಿಸಲಾಗಿದೆ.

ಎಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಎಲ್‌ಪಿಜಿ ಗ್ರಾಹಕರು ಒಟ್ಟಾರೆ ಶೇ.50ರಷ್ಟು ಹಂಚಿಕೆಗೆ ಅರ್ಹರಾಗಲು ಮೊದಲು ಓಎಂಸಿಯಲ್ಲಿ (ತೈಲ ಮಾರುಕಟ್ಟೆ ಕಂಪನಿಗಳು) ನೋಂದಾಯಿಸಿಕೊಳ್ಳಬೇಕು. ಓಎಂಸಿಗಳು ಸಹ ಅಂತಹ ಗ್ರಾಹಕರನ್ನು ನೋಂದಾಯಿಸಿಕೊಳ್ಳಬೇಕು ಮತ್ತು ಎಲ್‌ಪಿಜಿಯ ಅಂತಿಮ ಬಳಕೆಯಲ್ಲಿ ಅವರು ಕಾರ್ಯನಿರ್ವಹಿಸುವ ವಲಯದ ದಾಖಲೆ ಮತ್ತು ಆ ಗ್ರಾಹಕರು ಎಲ್‌ಪಿಜಿ ವಾರ್ಷಿಕ ತೂಕದ ಅವಶ್ಯಕತೆಯನ್ನು ಆಯಾಯ ಡೇಟಾಬೇಸ್‌ನಲ್ಲಿ ಇಡಬೇಕು.

ಎಲ್ಲಾ ವಾಣಿಜ್ಯ, ಕೈಗಾರಿಕಾ ಎಲ್‌ಪಿಜಿ ಗ್ರಾಹಕರು ತಮ್ಮ ನಗರದಲ್ಲಿನ ನಗರ ಅನಿಲ ವಿತರಣಾ ಘಟಕದಲ್ಲಿ ಪಿಎನ್‌ಜಿಗೆ ಅರ್ಜಿ ಸಲ್ಲಿಸಬೇಕು. ಅಲ್ಲದೆ, ಒಟ್ಟಾರೆ ಶೇ.50ರಷ್ಟು ಹಂಚಿಕೆಯಿಂದ ಯಾವುದೇ ವಾಣಿಜ್ಯ ಎಲ್‌ಪಿಜಿ ಹಂಚಿಕೆಗೆ ಅರ್ಹರಾಗಲು ಮೊದಲು ಪಿಎನ್‌ಜಿ ಸ್ವೀಕರಿಸಲು ಮುಂದಾಗುವಂತೆ ಎಲ್ಲಾ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರದ ಆದೇಶದಲ್ಲಿ ಹೇಳಲಾಗಿದೆ.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಪುಣ್ಯಸ್ಮರಣೆ



ಕೈಪಳೆರ ಪಾಲಿ (ಪಾರ್ವತಿ)

ನಿಧನ: 23 / 03 / 2019

ನೀವು ನಮ್ಮನ್ನಗಲಿ 7 ವರ್ಷಗಳು ಕಳೆದರೂ ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಪತಿ: ಕೈಪಳೆರ ತಮ್ಮಯ್ಯ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೇ, ನಮ್ಮ ಕಕ್ಷಿದಾರರಾದ, ಮೈಸೂರು–570008, ಕಸಬಾ ಹೋಬಳಿ, ಶ್ರೀರಾಂಪುರ ಅಂಚೆ, ಪರಸಯ್ಯನ ಹುಂಡಿ ಗ್ರಾಮ, ಮಾನಂದವಾಡಿ ರಸ್ತೆ, ಮನೆ ನಂ. 18 ರಲ್ಲಿ ವಾಸವಾಗಿರುವ ಲೇಟ್. ನಂಜುಂಡಸ್ವಾಮಿ ರವರ ಮಗನಾದ ಸುಮಾರು 45 ವರ್ಷ ವಯಸ್ಸುಳ್ಳ, ಶ್ರೀ. ಎಸ್. ಸತೀಶ್. ಈ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತನ್ನು, ಮೈಸೂರು ಜಿಲ್ಲೆ ಹಾಗೂ ತಾಲ್ಲೂಕು, ಜಯಪುರ ಹೋಬಳಿ, ದೂರ ಗ್ರಾಮದಲ್ಲಿ ವಾಸವಾಗಿರುವ ಶ್ರೀ. ಮಹಾದೇವಪ್ಪ ಬಿನ್ ಲೇಟ್. ನಂಜಪ್ಪ, ಸುಮಾರು 77 ವರ್ಷ ವಯಸ್ಸು ಮತ್ತು ಶ್ರೀ. ನಂದೀಶ್, ಬಿನ್ ಶ್ರೀ. ಮಹದೇವಪ್ಪ, ಸುಮಾರು 35 ವರ್ಷ ವಯಸ್ಸು ರವರುಗಳಿಂದ ದಿನಾಂಕ 29/09/2025 ರ ಷರತ್ತುಬದ್ಧ ಕ್ರಯದ ಕರಾರು ಪತ್ರ (ಸ್ವಾಧೀನ ಸಹಿತ) ಮುಖಾಂತರ ಕ್ರಯದ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದು ಸದರಿ ಕರಾರು ಪತ್ರವು 1ನೇ ಪುಸ್ತಕದ ದಸ್ತಾವೇಜು ನಂ. ಎಂ ವೈ ಎಸ್–1–07818–2025–26 ಆಗಿ ಉಪನೋಂದಣಾಧಿಕಾರಿಗಳ ಕಛೇರಿ, ಮೈಸೂರು ದಕ್ಷಿಣ, ಮೈಸೂರು ಇಲ್ಲಿ ನೋಂದಣಿಯಾಗಿರುತ್ತದೆ. ತತ್ಸಂಬಂಧ ಯಾರಿಗಾದರೂ ಆಕ್ಷೇಪಣೆಗಳು, ವ್ಯಾಜ್ಯಗಳು, ಹಕ್ಕುಗಳು ಇದ್ದಲ್ಲಿ ಶ್ರೀ ಶರತ್ ಕುಮಾರ್. ಯು, ಕಕ್ಷಿದಾರರ ಪರ ವಕೀಲರು, # 11. ಮುಡಾ ಸಂಕೀರ್ಣ, ರಾಮಕೃಷ್ಣನಗರ, ಮೈಸೂರು–570022, ಮೊ: 9845024519 ರವರನ್ನು ಸೂಕ್ತ ಆಧಾರ ಮತ್ತು ದಾಖಲಾತಿಗಳೊಂದಿಗೆ ಖುದ್ದಾಗಿ ಈ ನೋಟೀಸ್ ಪ್ರಕಟಣೆಗೊಂಡ ದಿನಾಂಕದಿಂದ ಏಳು (7) ದಿವಸಗಳ ಒಳಗೆ ಸಂಪರ್ಕಿಸತಕ್ಕದ್ದು. ಒಂದು ವೇಳೆ ಏಳು (7) ದಿವಸಗಳ ಒಳಗೆ ಯಾವುದೇ ರೀತಿಯಾದ ಆಕ್ಷೇಪಣೆಗಳು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಕುರಿತು ಯಾವುದೇ ವಿವಾದಗಳು ಇಲ್ಲವೆಂದು ಪರಿಗಣಿಸಿ ಕ್ರಯ ಪತ್ರ ಬರೆಯಿಸಿಕೊಳ್ಳಲು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ. ತದನಂತರ ಬಂದ ಯಾವುದೇ ಆಕ್ಷೇಪಣೆಗಳು, ವ್ಯಾಜ್ಯಗಳು, ಹಕ್ಕುಗಳನ್ನು ಸ್ಥಾಪಿಸಲು ಪ್ರಯತ್ನಿಸಿದಲ್ಲಿ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಹಾಗೂ ಅಮಾನ್ಯವಾಗುತ್ತವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ ಹಾಗೂ ತಾಲ್ಲೂಕು, ಜಯಪುರ ಹೋಬಳಿ, ದೂರ ಗ್ರಾಮದ ಸರ್ವೆ ನಂ. 189/3 ರಲ್ಲಿರುವ 01 ಎಕರೆ 38 ಗುಂಟೆ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಸರ್ವೆ ನಂ. 189/1ಬಿ (ನಂಜುಂಡಪ್ಪ ರವರ ಜಮೀನು) ಪಶ್ಚಿಮಕ್ಕೆ : ಸರ್ವೆ ನಂ. 191/4 (ನೀರು ಹರಿಯುವ ಹಳ್ಳ ಮತ್ತು ನಂಜುಂಡಸ್ವಾಮಿ ರವರ ಜಮೀನು) ಉತ್ತರಕ್ಕೆ: ಸರ್ವೆ ನಂ. 189/4 (ಮಹದೇವಪ್ಪ ರವರ ಜಮೀನು): ದಕ್ಷಿಣಕ್ಕೆ : ಸರ್ವೆ ನಂ. 189/5 (ಚನ್ನಬಸವಣ್ಣ ರವರ ಜಮೀನು)

M&M LAW ASSOCIATES
Sd/- Mallikarjunappa, B.Sc., LLB.
Advocate, KAR/541/1996
#15 MUDA Complex, I Block,
Ramakrishnanagar, Mysore-570022
mob: 9740702527

Date:23/3/2028, ಸ್ಥಳ: ಮೈಸೂರು



12ನೇ ವರ್ಷದ ಚಿರಸ್ಮರಣೆ



ಶ್ರೀ ಹೆಚ್.ಎಸ್. ಪ್ರೇಮಕುಮಾರ್

(ಮಹದೇವ) AEE, PWD, Mysuru

ಜನನ: 22.07.1958 ಮರಣ: 23.03.2014

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ರೇಖಾ ಕೆ.ಎಸ್.,
ಸುಷ್ಮಾ ಎಸ್. & ಶರತ್ ಹೆಚ್.ಪಿ,
ರೇಷ್ಮ ಎಂ.ಎಸ್. & ಭರತ್ ಹೆಚ್.ಪಿ
ಮೊಮ್ಮಕ್ಕಳು

Ph: 9886542614 / 9164309130

ನಂ2753ನೇ ಶಾಂತಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಾಂತಳ್ಳಿ

ಸೋಮವಾರಪೇಟೆ ತಾಲೂಕು ಕೊಡಗು ಜಿಲ್ಲೆ 571236

Email :shanthallipacs@gmail.com, ಈ ಕೆಳಕಂಡ ಖಾಲಿ ಹುದ್ದೆಗೆ ಅರ್ಜಿಆಹ್ವಾನ ದೂ : 08276-295094

ಕ್ರ ಸಂ	ಹುದ್ದೆಯ ಹೆಸರು	ಸಾಮಾನ್ಯ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವೇತನ ಶ್ರೇಣಿ
1	2	3	4	5	6
1	ಲೆಕ್ಕಿಗರು	01	1 ಹುದ್ದೆ	ಅ) ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವ ವಿದ್ಯಾನಿಲಯದಿಂದ ವಾಣಿಜ್ಯ/ಸಹಕಾರ/ನಿರ್ವಹಣೆ ಪದವೀಧರರಾಗಿರಬೇಕು. ಆ) ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್ ಮತ್ತು ಅಪ್ಲಿಕೇಶನ್ಸ್ ಜ್ಞಾನದ ಜೊತೆಗೆ ಟ್ಯಾಲಿ ಕೋರ್ಸ್ ನಡೆಗಣಿತ ಪತ್ರವನ್ನು ಹೊಂದಿರಬೇಕು ಮತ್ತು ಇ) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಜಿ ಮಾಡಿಕೊಳ್ಳಬೇಕು	21400–500–22400–550–24600–600–27000–650–29600–750–32600–850–36000–950–39800–1100–42000

ಈ ಮೇಲ್ಕಂಡ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೆಳಗೆ ನಮೂದಿಸಿದ ನಿಬಂಧನೆಗಳಿಗೆ ಪೂರಕವಾದ ದೃಢೀಕೃತ ದಾಖಲೆಗಳ ಪ್ರತಿಯೊಂದಿಗೆ ದಿನಾಂಕ :06/04/2026ರ ಸೋಮವಾರ ದಿವಸ ಸಂಜೆ 4.00 ಗಂಟೆಯ ಒಳಗಾಗಿ ಸಂಘದ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ತದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ : 06/04/2026ರ ಸಂಜೆ 4.00 ಗಂಟೆಯೊಳಗೆ. ಅರ್ಜಿ ನಮೂನೆ ಪಡೆಯುವ ಸ್ಥಳ ಮತ್ತು ಅರ್ಜಿ ಸಲ್ಲಿಸುವ ಸ್ಥಳ: ನಂ2753ನೇ ಶಾಂತಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಾಂತಳ್ಳಿ, ಸೋಮವಾರಪೇಟೆ ತಾಲೂಕು ಕೊಡಗು ಜಿಲ್ಲೆ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯ ವರೆಗೆ(ಸಾರ್ವತ್ರಿಕ ರಜೆ ದಿನಗಳನ್ನು ಹಾಗೂ ಭಾನುವಾರಗಳನ್ನು ಹೊರತುಪಡಿಸಿ). ಕ್ರಮ ಸಂಖ್ಯೆ (1)ರ ಲೆಕ್ಕಿಗರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. 1. ಅಭ್ಯರ್ಥಿ ಸ್ವಹಸ್ತ– ಬರಹದಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಅಭ್ಯರ್ಥಿಯ ಇತ್ತೀಚಿನ ಎರಡು ಭಾವಚಿತ್ರ, ಪೂರ್ಣ ವಿಳಾಸದ ಆಧಾರ್ ಪ್ರತಿ ಮತ್ತು ವೈಯಕ್ತಿಕ ವಿವರವನ್ನು ಸಲ್ಲಿಸತಕ್ಕದ್ದು. 2. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ ಹಾಗೂ ವಾಣಿಜ್ಯ/ಸಹಕಾರ/ನಿರ್ವಹಣೆ ಪದವಿಯ ಅಂಕಪಟ್ಟಿಗಳ ದೃಢೀಕೃತ ನಕಲು ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. 3. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಅಥವಾ ಅದಕ್ಕೆ ಸರಿಸಮಾನಾದ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನವನ್ನು ಮಾಡಿರತಕ್ಕದ್ದು. 4. ಅಭ್ಯರ್ಥಿಯು ಕಂಪ್ಯೂಟರ್ ಜ್ಞಾನಹೊಂದಿರುವ ಬಗ್ಗೆ ಸರ್ಕಾರದ ಅಂಗೀಕೃತ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರ, 5. ಡಿ.ಸಿ.ಎಂ(ಬಿ.ಡಿ.ಸಿ) ಅಥವಾ ಸಹಕಾರ ವಿಷಯದಲ್ಲಿ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ ಪ್ರತಿ ಲಗತ್ತಿಸಬೇಕು. ಈ ಮೇಲಿನ ಹುದ್ದೆಗಳಿಗೆ ವಯೋಮಿತಿ: ಸಾಮಾನ್ಯ ವರ್ಗದವರಿಗೆ ಕನಿಷ್ಠ 18 ವರ್ಷಗರಿಷ್ಠ 35 ವರ್ಷ ಹಾಗೂ ಹಿಂದುಳಿದ ವರ್ಗದವರಿಗೆ ಕನಿಷ್ಠ 18 ವರ್ಷಗರಿಷ್ಠ 38 ವರ್ಷ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಗರಿಷ್ಠ 40 ವರ್ಷಗಳು.

ಸೂಚನೆಗಳು:

1) ಭರ್ತಿ ಮಾಡಿದ ಅರ್ಜಿಯ ಲಕೋಟೆಯ ಮೇಲ್ಭಾಗದಲ್ಲಿಯಾವ ಹುದ್ದೆಗೆ ಅರ್ಜಿ ಸಲ್ಲಿಸಿದೆ ಎಂಬುದಾಗಿ ಸ್ಪಷ್ಟ ಅಕ್ಷರಗಳಲ್ಲಿ ಬರೆಯತಕ್ಕದ್ದು. ಯಾವುದೇ ಅಪೂರ್ಣಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. 2) ಅಭ್ಯರ್ಥಿಯು ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ಕುರಿತು ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪಡೆದು ಲಗತ್ತಿಸುವುದು. 1. ಖಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಲಾಗುವುದು. ಸಂಘದಿಂದ ಈ ಕೆಳಕಂಡ ವಿಷಯಗಳಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಲಿಖಿತ ಪರೀಕ್ಷೆ ನಡೆಸುವ ಸ್ಥಳ ಹಾಗೂ ದಿನಾಂಕವನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ಈ ಕೆಳಕಂಡ ವಿಷಯಗಳಲ್ಲಿ ಪರೀಕ್ಷೆ ನಡೆಸಲಾಗುವುದು (1)ಕನ್ನಡ ಭಾಷೆ– 50 ಅಂಕಗಳಿಗೆ (2)ಸಾಮಾನ್ಯಜ್ಞಾನ 25 ಅಂಕಗಳಿಗೆ (3)ಸಾಮಾನ್ಯ ಇಂಗ್ಲೀಷ್–25 ಅಂಕಗಳಿಗೆ (4)ಸಹಕಾರ ವಿಷಯ– 50 ಅಂಕಗಳಿಗೆ (5)ಭಾರತ ಸಂವಿಧಾನ – 25 ಅಂಕಗಳಿಗೆ (6)ಸಂಘದಕಾರ್ಯಚಟುವಟಿಕೆ ಮತ್ತು ಉದ್ದೇಶಗಳು – 25 ಅಂಕಗಳಿಗೆ.

ಅ) ಅಭ್ಯರ್ಥಿಗಳು ಸಂಘದಿಂದ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇ.85ಕ್ಕೆ ನಿಗದಿ ಪಡಿಸಲಾಗುವುದು ಹಾಗೂ ಉಳಿದ ಶೇ.15 ಅಂಕಗಳಿಗೆ ಮೌಖಿಕ ಸಂದರ್ಶನವನ್ನು ನಿಗದಿಪಡಿಸಲಾಗುವುದು. ಆ) ಹುದ್ದೆಗೆ 1:5ರ ಪ್ರಮಾಣದಲ್ಲಿ ಅಭ್ಯರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗುವುದು. ಇ) ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಕ್ಕೆ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಹಾಜರಾಗುವುದು. ಸಂಘದಿಂದ ಯಾವುದೇ ಭತ್ಯೆ ನೀಡಲಾಗುವುದಿಲ್ಲ. ಈ) ಅಭ್ಯರ್ಥಿಗಳು ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಗ್ಗೆ ಪ್ರಮಾಣ ಪತ್ರ, ವಿದ್ಯಾರ್ಹತೆ, ವಯೋಮಿತಿಗೆ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ ಸಾಮಾನ್ಯ ವರ್ಗದವರು ರೂ.1,000.00+180 ಜಿ.ಎಸ್.ಟಿ, ಹಾಗೂ ಹಿಂದುಳಿದ ವರ್ಗದವರು ರೂ.750.00+135.00 ಜಿ.ಎಸ್.ಟಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ರೂ.500.00+90.00 ಜಿ.ಎಸ್.ಟಿ ಸೇರಿದಂತೆ ಡಿ.ಡಿ.ನೆಫ್ಟ್ ಅಥವಾ ನೇರವಾಗಿ ಸಂಘಕ್ಕೆ ಪಾವತಿಸಿ, ಪಾವತಿ ಮಾಡಿರುವ ರಶೀದಿಯ ನಕಲನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಥವಾ ಡಿ.ಡಿ.ಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂ2753ನೇ ಶಾಂತಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಾಂತಳ್ಳಿ ರವರ ಹೆಸರಿಗೆ ಪಡೆದು, ಅರ್ಜಿಯೊಂದಿಗೆ ಮೂಲ ಪ್ರತಿಯನ್ನು ಲಗತ್ತಿಸುವುದು. ಉ) ನೇಮಕಾತಿಯ ಅಧಿಸೂಚನೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಘದ ಕಛೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ. ಊ) ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೈಕಿ 1:5ರ ಪ್ರಮಾಣದಲ್ಲಿ ಮೌಖಿಕ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನದ ಸ್ಥಳ, ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗಳಿಗೆ ಅಂಚೆ ಮೂಲಕ ಹಾಗೂ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಎಲ್ಲಾ ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು. ಋ) ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಾತಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಎ) ಆಯ್ಕೆಯಾಗುವ ಅಭ್ಯರ್ಥಿಗಳು ಸಂಘವು ನಿಗದಿಪಡಿಸುವ ಭದ್ರತಾ ಠೇವಣಿ ಹಾಗೂ ಜಾಮೀನು ಬಾಂಡನ್ನು ಭರಿಸಲು ಬದ್ಧರಾಗಿರತಕ್ಕದ್ದು.

ಸ್ಥಳ: ಶಾಂತಳ್ಳಿ
ದಿನಾಂಕ :23/03/2026

ನೇಮಕಾತಿ ಸಮಿತಿ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

